

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜುಲೈ 15 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 90 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ. ಸಂಬಳ: 25,000 ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.

7259796998 / 8197809472

DGF JEWELLERS

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಗುಣಮಟ್ಟವನ್ನು ಪರೀಕ್ಷಿಸಿ ಅದರ ಆಧಾರದ ಮೇಲೆ ಉಳಿದ ಹಣ ತಕ್ಷಣ ಕೊಡುತ್ತೇವೆ.
(Terms & Condition Applicable)
ಒಂದು ಗ್ರಾಂ ಚಿನ್ನಕ್ಕೆ 7700
8884171888





ಕಾವೇರಿ ನೀರು: ಸಿಎಂ ನೇತೃತ್ವದಲ್ಲಿ ಸರ್ವಪಕ್ಷ ಸಭೆ

ತ.ನಾಡಿಗೆ 1 ಟಿಎಂಸಿ ಬದಲು 8 ಸಾವಿರ ಕ್ಯುಸೆಕ್

ನೀರು ಬಿಡಲು ನಿರ್ಧಾರ

- ಸಿಡಬ್ಲ್ಯೂಆರ್‌ಸಿ ಆದೇಶ ಪ್ರಶ್ನಿಸಿ ಸಿಡಬ್ಲ್ಯೂಎಂಎಗೆ ಮೇಲ್ಮನವಿ
- ನಮ್ಮ ಜಲಾಶಯಗಳಲ್ಲಿ ಶೇ.63ರಷ್ಟು ಮಾತ್ರ ನೀರಿದೆ
- ಮಳೆ ಬಂದರೆ ನೀರು ಬಿಡೋಣ



ಕಾವೇರಿ ವಿಚಾರವಾಗಿ ವಿಧಾನಸೌಧದಲ್ಲಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ನಡೆಯಿತು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್, ವಿಪಕ್ಷ ನಾಯಕ ಆರ್. ಅಶೋಕ್, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಶಾಸಕರಾದ ಜಿ.ಟಿ. ದೇವೇಗೌಡ, ಎ. ಮಂಜು, ಸರ್ಕಾರದ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್ ಇನ್ನಿತರರು ಭಾಗವಹಿಸಿದ್ದರು.

ಬೆಂಗಳೂರು, ಜು.14– ತಮಿಳುನಾಡಿಗೆ ಜುಲೈ 12 ರಿಂದ ತಿಂಗಳ ಕೊನೆವರೆಗೆ ಪ್ರತಿ ದಿನ 1 ಟಿಎಂಸಿ ನೀರನ್ನು ಬಿಡಬೇಕು ಎಂಬ ಕಾವೇರಿ ನೀರು ನಿಯಂತ್ರಣಾ ಸಮಿತಿ (ಸಿಡಬ್ಲ್ಯೂಆರ್‌ಸಿ) ನೀಡಿದ್ದ ಆದೇಶದ ಹಿನ್ನೆಲೆಯಲ್ಲಿ ಇಂದು (ಭಾನುವಾರ) ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಸದ್ಯಕ್ಕೆ ಪ್ರತೀ ದಿನ 8 ಸಾವಿರ ಕ್ಯುಸೆಕ್ ನೀರು ಮಾತ್ರ ಬಿಡುವುದು ಹಾಗೂ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ಪ್ರಶ್ನಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ)ಕ್ಕೆ ಮೇಲ್ಮನವಿ ಸಲ್ಲಿಸುವುದು ಎಂದು ತೀರ್ಮಾನಿಸಲಾಯಿತು.


ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜುಲೈ 11ರಂದು ನಡೆದ ಕಾವೇರಿ ನೀರು ನಿಯಂತ್ರಣಾ ಸಮಿತಿಯ 3ನೇ ಸಭೆಯಲ್ಲಿ ಜುಲೈ 12 ರಿಂದ ತಿಂಗಳ ಕೊನೆವರೆಗೆ ಪ್ರತಿ ದಿನ 1 ಟಿಎಂಸಿಯಂತೆ ■6ನೇ ಪುಟಕ್ಕೆ

ಸಂಕಷ್ಟ ಸೂತ್ರ ರಚಿಸಲು ಕ್ರಮ ಕೈಗೊಳ್ಳಬೇಕು



ಬೆಂಗಳೂರು, ಜು.14–ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ಪ್ರತಿನಿತ್ಯ ತಮಿಳುನಾಡಿಗೆ 1 ಟಿಎಂಸಿ ನೀರು ಬಿಡುವಂತೆ ಆದೇಶ ನೀಡಿದ್ದು, ಮಳೆಯು ಸಮೃದ್ಧಿಯಾಗಿ ಬಿದ್ದು ಡ್ಯಾಮ್‌ಗಳು ತುಂಬಿದರೆ ನೀರು ಬಿಡಲು ತೊಂದರೆಯಾಗುವುದಿಲ್ಲ, ಬೇಸಿಗೆ ಕಾಲದಲ್ಲಿ ಮಳೆ ಇಲ್ಲದೆ ತೊಂದರೆಯಾಗುವುದರಿಂದ ಸಂಕಷ್ಟ ಸೂತ್ರ ತುರ್ತಾಗಿ ರಚಿಸಬೇಕು ಎಂದು ರಾಜ್ಯ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ.ದೇವೇಗೌಡರು ಸರ್ಕಾರಕ್ಕೆ ಸಲಹೆ ನೀಡಿದರು. ■6ನೇ ಪುಟಕ್ಕೆ

ಮುಡಾ ಹಗರಣ: ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ವಿಚಾರಣಾ ಆಯೋಗ ರಚನೆ




ಬೆಂಗಳೂರು, ಜು. 14– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅಕ್ರಮ ಕುರಿತು ವಿಚಾರಣೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಮುಡಾದಲ್ಲಿ ನಿವೇಶನ ಹಂಚಿಕೆ ವಿಷಯದಲ್ಲಿನ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿರುವುದಲ್ಲದೇ ಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿಯೂ ವರದಿಯಾಗಿದ್ದು, ಈ ಪ್ರಕರಣದಲ್ಲಿ ವಿಚಾರಣೆ ನಡೆಸುವುದು ಸೂಕ್ತವೆಂದು ■6ನೇ ಪುಟಕ್ಕೆ



ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಗುಂಡಿನ ದಾಳಿ

- ಪ್ರಾಣಾಪಾಯದಿಂದ ಪಾರು, ಚುನಾವಣಾ ರ‍್ಯಾಲಿ ವೇಳೆ ದುರ್ಘಟನೆ
- ಅಂಗರಕ್ಷಕ ಪಡೆ ಗುಂಡಿಗೆ ಬಂದೂಕುಧಾರಿ ಸೇರಿ ಇಬ್ಬರ ಬಲಿ




ಗುಂಡಿನ ದಾಳಿಯಲ್ಲಿ ಗಾಯಗೊಂಡ ಟ್ರಂಪ್ ಅವರನ್ನು ಅಂಗರಕ್ಷಕರು ರಕ್ಷಿಸಿ ಕರೆದೊಯ್ಯುತ್ತಿರುವುದು.

ಪೆನ್ಸಿಲ್ವೇನಿಯಾ (ಅಮೇರಿಕ), ಜು.14– ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿ ಚುನಾವಣಾ ಪ್ರಚಾರ ರ‍್ಯಾಲಿ ವೇಳೆ ಅಮೇರಿಕಾದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲೆ ಬಂದೂಕುಧಾರಿಯೊಬ್ಬ ಗುಂಡು ಹಾರಿಸಿದ್ದು, ಅವರ ಕಿವಿಗೆ ಗಾಯವಾಗಿದೆ. ಭಾರತೀಯ ಕಾಲಮಾನ ನಿನ್ನೆ ಶನಿವಾರ ರಾತ್ರಿ ಈ ಘಟನೆ ನಡೆದಿದೆ. ಈ ವೇಳೆ ಟ್ರಂಪ್ ಅಂಗರಕ್ಷಕರು ಪ್ರತಿದಾಳಿ ನಡೆಸಿದಾಗ ಬಂದೂಕುಧಾರಿ ಮತ್ತು ಆತನ ಪಕ್ಕದಲ್ಲಿದ್ದ ಓರ್ವ ಮೃತಪಟ್ಟಿದ್ದಾನೆ. ಬಂದೂಕುಧಾರಿಯ ದಾಳಿಯಲ್ಲಿ ರ‍್ಯಾಲಿ ನೋಡಲು ಬಂದಿದ್ದ ಇಬ್ಬರು ಪ್ರೇಕ್ಷಕರು ■6ನೇ ಪುಟಕ್ಕೆ



'ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು: ನೆಲೆ ಹಿನ್ನೆಲೆ' ಕೃತಿಯ ಮೂರನೇ ಮುದ್ರಣ ಲೋಕಾರ್ಪಣೆ

ಜ್ಞಾನಕ್ಕೆ ರಕ್ಷಣೆ ನೀಡುವಾತ ಬ್ರಾಹ್ಮಣ: ಹೆಚ್.ವಿ.ನಾಗರಾಜ್ ರಾವ್



ಮೈಸೂರಿನ ವೀಣೆ ಶೇಷಣ್ಣ ಭವನದಲ್ಲಿ ಹರಿವು ಬುಕ್ಸ್ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಟಿ.ಆರ್.ಅನಂತರಾಮು ಸಂಪಾದಿತ ಕೃತಿ 'ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು: ನೆಲೆ ಹಿನ್ನೆಲೆ' ಪುಸ್ತಕದ 3ನೇ ಮುದ್ರಣವನ್ನು ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಲೋಕಾರ್ಪಣೆಗೊಳಿಸಿದರು.

ಮೈಸೂರು, ಜು.14(ಜಿಎ)–ಮೈಸೂರಿನ ಕುವೆಂಪುನಗರದಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ಹರಿವು ಬುಕ್ಸ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಟಿ.ಆರ್.ಅನಂತರಾಮು ಸಂಪಾದಿತ ಕೃತಿ 'ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು: ನೆಲೆ ಹಿನ್ನೆಲೆ' ಪುಸ್ತಕದ 3ನೇ ಮುದ್ರಣವನ್ನು ಸಂಸ್ಕೃತ ವಿದ್ವಾಂಸ ಹೆಚ್.ವಿ. ನಾಗರಾಜ ರಾವ್ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಜ್ಞಾನಕ್ಕೆ ರಕ್ಷಣೆ ನೀಡುವಾತ ಬ್ರಾಹ್ಮಣ. ಇತರ ಮಾನವ ಸಮುದಾಯ ಹೇಗೆ ಬದುಕಬೇಕು ಎಂದು ಮಾರ್ಗ ತೋರುವ ಕೆಲಸ ಆತನದಾಗಿತ್ತು. ದೇಶದ ಸಂಸ್ಕೃತಿಯ ಹೆಚ್ಚುಗಾರಿಕೆಗೆ ಬ್ರಾಹ್ಮಣರ ಕೊಡುಗೆ ಅಪಾರ, ಇಲ್ಲಿನ ಆಡಳಿತ ನಿರ್ವಹಣೆಯಲ್ಲೂ ಬ್ರಾಹ್ಮಣರ ಸಹಕಾರವೇ ಪ್ರಧಾನವಾಗಿತ್ತು ಎಂದರು.

ಇತಿಹಾಸದಲ್ಲಿ ಕನ್ನಡದ ಶ್ರೇಷ್ಠ ಲೇಖಕರೆಲ್ಲ ಬ್ರಾಹ್ಮಣರೇ ಆಗಿದ್ದರು. ಅದಕ್ಕೆ ಪಂಪ ದೊಡ್ಡ ಉದಾಹರಣೆ. ಜೈನ ಹಾಗೂ ಬೌದ್ಧರಲ್ಲಿದ್ದ ಅನೇಕ ವಿದ್ವಾಂಸರು ಬ್ರಾಹ್ಮಣರಿಂದ ಪರಿವರ್ತಿತರಾದವರು. ಬ್ರಾಹ್ಮಣರು ತಮ್ಮ ಬಗ್ಗೆ ಅಭಿಮಾನವನ್ನು ಹೊಂದಬೇಕು. ವಿದ್ಯೆ ಎಂಬುದು ಹಣದ ಮೂಲ ಎಂದು ಆದ್ಯತೆ ನೀಡದೇ, ವಿದ್ಯೆಯನ್ನು ಉಳಿಸಬೇಕು ಎಂಬ ಉದ್ದೇಶದಿಂದ ಕಾರ್ಯ ಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಈ ಪುಸ್ತಕದಲ್ಲಿ ಪ್ರತಿಯೊಂದು ಅಂಶವನ್ನು ಪರಿಶೀಲಿಸಿ, ಐತಿಹಾಸಿಕ ದಾಖಲೆಗಳಾದ ಶಾಸನ, ಗ್ರಂಥಗಳನ್ನು ಆಧಾರವಾಗಿರಿಸಿ ರಚಿಸಲಾಗಿದೆ. ಇದು ಕೇವಲ ಸ್ಮಾರ್ತರ ಬಗ್ಗೆ ಮಾತ್ರವಲ್ಲ, ಇಡೀ ಬ್ರಾಹ್ಮಣ ಸಮುದಾಯದ ಇತಿಹಾಸ ತಿಳಿಸುತ್ತದೆ. ಸ್ಮಾರ್ತರಲ್ಲಿಯೂ ಅನೇಕ ಪಂಗಡಗಳಿದ್ದು, ಅವುಗಳ ಹಿನ್ನೆಲೆಗಳು, ಅವು ಹೇಗೆ ರೂಪುಗೊಂಡವು. ಅಲ್ಲಿನ ವಿಶಿಷ್ಟ ಸಂಸ್ಕೃತಿಯನ್ನು ತಿಳಿಸುವಲ್ಲಿ ಈ ಪುಸ್ತಕ ಅಧ್ಯಯನಯೋಗ್ಯವಾಗಿ ಪ್ರಸ್ತುತಗೊಂಡಿದೆ ಎಂದರು.

ಸಂಪಾದಕ ಟಿ.ಆರ್.ಅನಂತರಾಮು ಮಾತನಾಡಿ, ಸ್ಮಾರ್ತರಲ್ಲಿನ 29 ಪಂಗಡಗಳ ಮಾಹಿತಿಯನ್ನು ಈ ಪರಿಷ್ಕೃತ ಪುಸ್ತಕದಲ್ಲಿ ನೀಡಲಾಗಿದೆ. ಸ್ಮಾರ್ತ ಎಂಬ ಒಂದು ಎಳೆಯಲ್ಲಿ ಎಲ್ಲ ಪಂಗಡಗಳ ಮಾಹಿತಿಯನ್ನು ಬಂಧಿಸಿ, ತೋರಲಾಗಿದೆ. ಹೊಸತಾಗಿ ಪಂಚಗ್ರಾಮ ಬ್ರಾಹ್ಮಣರ ಬಗ್ಗೆ ಸೇರ್ಪಡೆಯಾಗಿರುವುದು ವಿಶೇಷ ಎಂದರು. ವಿದ್ವಾಂಸ ಟಿ.ವಿ.ವೆಂಕಟಾಚಲಶಾಸ್ತ್ರಿ, ಸಂಶೋಧಕ ಎಸ್.ಎಸ್.ತಾರಾನಾಥ ಉಪಸ್ಥಿತರಿದ್ದರು.

ರಾಕೇಶ್ ಸಿದ್ದರಾಮಯ್ಯ ಹುಟ್ಟುಹಬ್ಬ

ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ



ಪೌರಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮೈಸೂರು,ಜು.14–ಮೈಸೂರಿನ ಟೌನ್ ಹಾಲ್‌ನಲ್ಲಿ ಶ್ರೀನಿವಾಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ರಾಕೇಶ್ ಸಿದ್ದರಾಮಯ್ಯ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ ಪೌರಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ 10 ಸಾವಿರ ಬಟ್ಟೆ ಬ್ಯಾಗ್ ವಿತರಿಸಲಾಯಿತು.

ಈ ವೇಳೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಮಣ್ಯ ಮಾತನಾಡಿ, ರಾಕೇಶ್ ಸಿದ್ದರಾಮಯ್ಯ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಜನಸೇವೆಯ ಮೂಲಕ ಯುವಕರ ಸ್ಫೂರ್ತಿಯಾಗಿ ರಾಜ್ಯದ ವಿವಿಧೆಡೆ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದರು ಎಂದರು.

ದೈಹಿಕವಾಗಿ ನಮ್ಮ ಕಣ್ಣಮುಂದೆ ಇಲ್ಲದಿದ್ದರೂ ನಮ್ಮೆಲ್ಲರ ಹೃದಯದಲ್ಲಿ ಅಚ್ಚಳಿಯದೆ ಇದ್ದಾರೆ. ಅವರ ಸ್ಮರಣೆಯಲ್ಲಿ ಪ್ರತಿ ವರ್ಷ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಸ್ಮರಿಸುತ್ತಿರುವುದು ಶ್ಲಾಘನೀಯ ಎಂದರು. ಆಸ್ಪತ್ರೆ ವ್ಯವಸ್ಥಾಪಕ ವೆಂಕಟೇಶ್, ನಜರ್‌ಬಾದ್ ನಟರಾಜ್, ಬೀರಿಹುಂಡಿ ಬಸವಣ್ಣ, ಆರಿಫ್, ಪ್ರಭು, ಹರೀಶ್, ಬಸವರಾಜು, ಮಹದೇವ್, ಲೋಕೇಶ್, ಉದಯ್, ದಕ್ಷಿಣ ಮೂರ್ತಿ ಇದ್ದರು.

ವೈಟ್ ಬೋರ್ಡ್ ಬೈಕ್ ಟ್ಯಾಕ್ಸಿ, ಎಲೆಕ್ಟ್ರಿಕ್ ಆಟೋರಿಕ್ಷಾ ಸೇವೆ ವಿರುದ್ಧ ಕ್ರಮಕ್ಕೆ ಆಗ್ರಹ



ವೈಟ್ ಬೋರ್ಡ್ ಬೈಕ್ಸ್ ಟ್ಯಾಕ್ಸಿ, ಎಲೆಕ್ಟ್ರಿಕ್ ಆಟೋರಿಕ್ಷಾಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಓಡಾಟಕ್ಕೆ ಕಡಿವಾಣ ಹಾಕುವಂತೆ ಮೈಸೂರು ಆಟೋರಿಕ್ಷಾ ಸರ್ವೀಸ್ ಟ್ರಸ್ಟ್ ಪದಾಧಿಕಾರಿಗಳು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಉಪ ಸಾರಿಗೆ ಆಯುಕ್ತೆ ದೇವಿಕಾರಾಣಿ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಜು.14(ಎಸ್‌ಪಿಎನ್)– ಮೈಸೂರು ಆಟೋರಿಕ್ಷಾ ಪರ್ಮಿಟ್ ವ್ಯಾಪ್ತಿಯಲ್ಲಿ ಅಕ್ರಮವಾಗಿ ಸಂಚರಿಸುತ್ತಿರುವ ವೈಟ್ ಬೋರ್ಡ್ ಬೈಕ್ ಟ್ಯಾಕ್ಸಿ, ಎಲೆಕ್ಟ್ರಿಕ್ ಆಟೋರಿಕ್ಷಾ ಹಾಗೂ ಇತರೆ ಅನಧಿಕೃತ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ಆಟೋರಿಕ್ಷಾ ಸರ್ವೀಸ್ ಟ್ರಸ್ಟ್ ಒತ್ತಾಯಿಸಿದೆ.

ಬೆಂಗಳೂರು ನಗರದ ಆಟೋರಿಕ್ಷಾ ಪರ್ಮಿಟ್ ವ್ಯಾಪ್ತಿಯಲ್ಲಿ ಸಂಚರಿಸುತ್ತಿದ್ದ ವೈಟ್ ಬೋರ್ಡ್, ಬೈಕ್ ಟ್ಯಾಕ್ಸಿ ವಿರುದ್ಧ ಜು.5ರಂದು ಕಾನೂನು ಕ್ರಮ ಕೈಗೊಳ್ಳಲಾಗಿದೆ. ಅದೇ ಮಾದರಿಯಲ್ಲಿ ಮೈಸೂರಿನಲ್ಲಿ ಕೆಎ–09, ಕೆಎ–55 ನಂಬರ್‌ನ ಆರ್‌ಟಿಓ ಕಚೇರಿ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ವೈಟ್ ಬೋರ್ಡ್ ಬೈಕ್ಸ್ ಟ್ಯಾಕ್ಸಿ, ಎಲೆಕ್ಟ್ರಿಕ್ ಆಟೋರಿಕ್ಷಾಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಓಡಾಟಕ್ಕೆ ಕಡಿವಾಣ ಹಾಕುವಂತೆ ಅಧ್ಯಕ್ಷ ಸಾಯಿಬಾಬಾ ನಾಗರಾಜ್, ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಉಪ ಸಾರಿಗೆ ಆಯುಕ್ತೆ ದೇವಿಕಾರಾಣಿ ಅವರಿಗೆ ಮನವಿ ಸಲ್ಲಿಸಿದ್ದಾರೆ.


ರ್‍ಯಾಪಿಡ್, ಓಲಾ, ಹೂಬರ್, ನಮ್ಮ ಹೆಸರು ಮತ್ತು ನಮ್ಮ ಯಾತ್ರಿ ಸಂಸ್ಥೆಗಳಿಂದ ಕಾರ್ಯಾಚರಣೆಗೊಳ್ಳುತ್ತಿರುವ ಟ್ಯಾಕ್ಸಿ ಸೇವೆಯನ್ನು ನಿಲ್ಲಿಸುವ ಬಗ್ಗೆ ಮೈಸೂರಿನ ಆರ್‌ಟಿಓ ಅಧಿಕಾರಿಗಳು ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಜುಲೈ ಕೊನೆಯ ವಾರದಲ್ಲಿ ಆರ್‌ಟಿಓ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಾಯಿಬಾಬಾ ನಾಗರಾಜ್ ತಿಳಿಸಿದರು.

ಮೈಸೂರಿನ ಆಟೋ ಚಾಲಕರು, ಪ್ರವಾಸಿ ಕಾರು ಮಾಲೀಕರು, ಚಾಲಕರ ಸಂಘದ ಕುಂದು–ಕೊರತೆ ಆಲಿಸಲು ಸಭೆ ಕರೆಯುವಂತೆ ಕಳೆದ ನಾಲ್ಕು ತಿಂಗಳಿಂದ ಆರ್‌ಟಿಓ ಅಧಿಕಾರಿಗಳಿಗೆ ಮನವಿ ಮಾಡಲಾಗುತ್ತಿದೆ. ಆದರೂ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಈ ವೇಳೆ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಪೃಥ್ವಿರಾಜ್, ಸ್ತ್ರೀ ಆಟೋ ಚಾಲಕರ ಸಂಘದ ಸೌಮ್ಯ, ಮಾರತಮ್ಮ, ಶೋಭಾ, ಆಟೋಚಾಲಕರಾದ ಬಸ್ ಸ್ಟ್ಯಾಂಡ್ ಜಯರಾಂ, ರೈಲ್ವೆ ಸ್ಟೇಷನ್ ರವಿ, ವಿಜಯ್, ಡಿಎಸ್‌ಎಸ್ ಸೋಮನಾಯ್ಕ್ ಇನ್ನಿತರರು ಉಪಸ್ಥಿತರಿದ್ದರು.

ಹೊಸ ತಲೆಮಾರಿನವರು ಹಿರಿಯರ ಹೆಸರು ಮರೆಯುತ್ತಿದ್ದಾರೆ

ಹೊಯ್ಸಳ ಕರ್ನಾಟಕ ಸಂಘದ ಸಂಸ್ಥಾಪನಾ ದಿನಾಚರಣೆಯಲ್ಲಿ ಸಂಸದ ಯದುವೀರ್ ಅಸಮಾಧಾನ



ಮೈಸೂರಿನ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಹೊಯ್ಸಳ ಕರ್ನಾಟಕ ಸಂಘ, ಹೊಯ್ಸಳ ಕರ್ನಾಟಕ ಸಂಘ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ ಸಮಾರಂಭವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಮೈಸೂರು, ಜು.14(ಬಿಎಲ್‌ಯು)– ಹೊಸ ತಲೆಮಾರಿನ ಜನರು ತಮ್ಮ ಹಿರಿಯರ ಹೆಸರನ್ನು ಮರೆಯುತ್ತಿದ್ದಾರೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಇಂದು ಹೊಯ್ಸಳ ಕರ್ನಾಟಕ ಸಂಘ ಹಾಗೂ ಹೊಯ್ಸಳ ಕರ್ನಾಟಕ ಸಂಘ ಚಾರಿಟಬಲ್ ಟ್ರಸ್ಟ್ ಸಂಯುಕ್ತವಾಗಿ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಹೊಸ ತಲೆಮಾರಿನ ಜನರು ಹಿರಿಯರ ಹೆಸರು ಮರೆಯುತ್ತಿರುವ ಸಂದರ್ಭದಲ್ಲಿ ಹೊಯ್ಸಳ ಕರ್ನಾಟಕ ಸಮುದಾಯದವರು ಸನ್ಮಾರ್ಗದಲ್ಲಿ ನಡೆದು ಮನೆತನದ ಹಾಗೂ ಸಮಾಜದ ಗೌರವ ಉಳಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಹೊಯ್ಸಳ ಸಮುದಾಯ ತಮ್ಮದೆ ಆದ ವಿಶಿಷ್ಟ ಆಚರಣೆ, ಸಂಸ್ಕೃತಿ ಹಾಗೂ ಸಂಪ್ರದಾಯವನ್ನು ಪಾಲಿಸಿಕೊಂಡು ಬರುತ್ತಿದೆ. ಜೊತೆಗೆ ಆತಿಥ್ಯ ಹಾಗೂ ಸ್ವಾಭಿಮಾನಕ್ಕೆ ಹೆಸರುವಾಸಿಯಾಗಿದ್ದು, ಸಮುದಾಯದ ಬೈಗುಳ ಕೂಡ ವಿಶಿಷ್ಟವಾಗಿದೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಇದರ ಜೊತೆಗೆ ಹೊಯ್ಸಳ ಕರ್ನಾಟಕ ಬಾಂಧವರು ಇತರೆ ಸಮುದಾಯದ ಜೊತೆ ಸುಮಧುರ ಬಾಂಧವ್ಯ ಬೆಳೆಸಿ ಕೊಂಡು ಬಂದಿದ್ದಾರೆ. ಈ ಸಮುದಾಯ ನಾಡಿಗೆ ಅಪಾರ ಕೊಡುಗೆ ನೀಡಿದ್ದು, ಮೈಸೂರು ಅರಮನೆ ಮತ್ತು ಈ ಸಮು ದಾಯದ ನಡುವೆ ಅವಿನಾಭಾವ ಸಂಬಂಧವಿದೆ ಎಂದು ಯದುವೀರ್ ಹೇಳಿದರು.

ಮುಂದಿನ ಐದು ವರ್ಷದ ನನ್ನ ಅಧಿಕಾರವಧಿಯಲ್ಲಿ ಮೈಸೂರು ನಗರವನ್ನು ಮೈಸೂರಾಗಿಯೇ ಉಳಿಸಲು ನಾನು ಕೈಗೊಳ್ಳುವ ಕಾರ್ಯಗಳಿಗೆ ನಿಮ್ಮ ಸಹಕಾರ ಅತ್ಯಗತ್ಯವಾಗಿದೆ ಎಂದು ಯದುವೀರ್ ಮನವಿ ಮಾಡಿದರು.

ಈ ವೇಳೆ ಹೊಯ್ಸಳ ಕರ್ನಾಟಕ ಸಮುದಾಯದ 80 ವರ್ಷ ಮೇಲ್ಪಟ್ಟ ಹಿರಿಯರಿಗೆ ಸನ್ಮಾನ, ಸಂಸ್ಥಾಪಕರ 20 ಕುಟುಂಬಗಳಿಗೆ ಗೌರವ, 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 20 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಉತ್ತೇಜಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ವೈ.ಎಸ್.ವಿ.ದತ್ತ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಆರ್.ಸತ್ಯನಾರಾಯಣ, ಮಾಜಿ ಅಧ್ಯಕ್ಷ ಎಂ.ಎಲ್.ಕೃಷ್ಣಸ್ವಾಮಿ, ಸಾಹಿತಿ ಎ.ವಿ.ಸೂರ್ಯ ನಾರಾಯಣರಾವ್, ಮೈಸೂರು ಬ್ರಾಹ್ಮಣ ಸಂಘದ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ್ ವೇದಿಕೆಯಲ್ಲಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್, ರಾಜ್ಯ ವಿಭೂಷಣ ಪ್ರಶಸ್ತಿ ಪ್ರದಾನ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ರಾಜ್ಯ ವಿಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಅವಧೂತ ದತ್ತಪೀಠ ಉತ್ತರ ಪೀಠಾಧಿಪತಿ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಯಲ್ಲಮ್ಮದೇವಿ ಆರಾಧಕಿ ಡಾ.ಅನು.ಆರ್. ಅಮ್ಮ, ಬಾಗಲಕೋಟೆಯ ಲಕ್ಷ್ಮಣ ಶರಣರು, ವೇದಿಕೆ ರಾಜ್ಯಾಧ್ಯಕ್ಷ ಡಾ.ಹುಸೇನಸಾಬ ಕೆರೊರ ಸೇರಿದಂತೆ ಮತ್ತಿತರರು ಇದ್ದರು.

ಸುತ್ತೂರು ಜೆಎಸ್‌ಎಸ್ ಶಾಲಾ ವಿದ್ಯಾರ್ಥಿ ಸಂಘ ಉದ್ಘಾಟನೆ



ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿ ಸಂಘದ ಈ ಸಾಲಿನ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.

ಸುತ್ತೂರು, ಜು.14– ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿ ಸಂಘದ ಈ ಸಾಲಿನ ಚಟುವಟಿಕೆಗಳಿಗೆ ಇಂದು ಚಾಲನೆ ನೀಡಲಾಯಿತು.

ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿದ, ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಎಂ.ಶಿವಮಾದಪ್ಪ, ಶ್ರೀ ಕ್ಷೇತ್ರದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳು ಕಲಿಕೆಯೊಂದಿಗೆ ಕ್ರೀಡೆ, ಯೋಗ, ಮಲ್ಲಕಂಬ, ಸಂಗೀತ, ಗಣಕಯಂತ್ರ ವಿಷಯಗಳಲ್ಲಿ ಪರಿಣತಿ ಹೊಂದಿ ಉನ್ನತ ಬೆಳವಣಿಗೆ ಹೊಂದಲು ಈ ಶಾಲೆಯಲ್ಲಿ ಸದಾವಕಾಶವಿದ್ದು, ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನಿವೃತ್ತ ಪ್ರಾಂಶುಪಾಲ ಕೆ.ಎಂ.ಮಹದೇವಪ್ಪ ಮಾತನಾಡಿ, ಇಂದಿನ ರಾಜಕೀಯದಲ್ಲಿ ವಿದ್ಯಾರ್ಥಿ ಸಂಘಗಳು ರಾಜಕೀಯ ಜೀವನವನ್ನು ರೂಪಿಸಲು ಅಡಿಗಲ್ಲಾಗಿವೆ. ವಿದ್ಯಾರ್ಥಿ ಸಂಘದಿಂದ ನಾಯಕತ್ವದ ಗುಣ ಬೆಳೆಯುತ್ತದೆ. ಇಂತಹ ಸಂಸ್ಕಾರಯುಕ್ತ ಸಂಸ್ಥೆಯಿಂದ ಹೊರಹೊಮ್ಮುವ ವಿದ್ಯಾರ್ಥಿಗಳು ರಾಜಕಾರಣಿಗಳಾದರೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಉತ್ತಮ ರೀತಿಯ ಆಡಳಿತ ನೀಡಬಹುದು ಎಂದರು. ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಮುಖ್ಯಸ್ಥರಾದ ಜಿ.ಎಲ್.ತ್ರಿಪುರಾಂತಕ, ಸಂಪತ್ತು, ವೀರಭದ್ರಯ್ಯ, ಎಸ್.ಶಿವಸ್ವಾಮಿ, ಜಿ.ಶಿವಮಲ್ಲು, ಮ.ಗು.ಬಸವಣ್ಣ, ಜಿ.ಎಂ.ಷಡಕ್ಷರಿ, ಮಹದೇವಪ್ರಸಾದ್, ಶ್ರೀಮತಿ ಪಿ.ಸುಶೀಲ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಭಾಷೆ ಕೃತಕ ಬುದ್ಧಿಮತ್ತೆಯ ಬಹು ದೊಡ್ಡ ಸವಾಲು ಎದುರಿಸಬೇಕಾಗಿದೆ

ಲೇಖಕ ಪ್ರೊ.ರಾಜೇಂದ್ರ ಚೆನ್ನಿ ಎಚ್ಚರಿಕೆ



ಪ್ರೊ.ರಾಜೇಂದ್ರ ಚೆನ್ನಿ ಮಾತನಾಡಿದರು.

ಮೈಸೂರು, ಜು.14(ಬಿಎಲ್‌ಯು)– ಕನ್ನಡ ಭಾಷೆಯು ಎಐ (ಕೃತಕ ಬುದ್ಧಿಮತ್ತೆ)ನ ದೊಡ್ಡ ಸವಾಲು ಎದುರಿಸಬೇಕಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರೂ ಆದ ಲೇಖಕ ಪ್ರೊ.ರಾಜೇಂದ್ರ ಚೆನ್ನಿ ಎಚ್ಚರಿಸಿದ್ದಾರೆ.

ಮೈಸೂರಿನ ವಿಜಯನಗರದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಇಂದು ಮೈಸೂರು ಓಪನ್ ಫೋರಂ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸ್ಥಾಪನೆ ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗತೀಕರಣದ ಹಲವು ಸವಾಲು ಎದುರಿಸಿ ಮೆಟ್ಟಿ ನಿಂತಿರುವ ಕನ್ನಡ ಭಾಷೆ, ಈಗ ಕೃತಕ ಬುದ್ಧಿಮತ್ತೆಯ ಬಹು ದೊಡ್ಡ ಸವಾಲು ಎದುರಿಸಬೇಕಾಗಿದೆ ಎಂದರು.

ಕಂಪ್ಯೂಟರ್‌ಗಳು ಬಂದ ಸಂದರ್ಭದಲ್ಲಿ ನಮ್ಮ ಹಲವು ಸಂಶೋಧಕರು ಕನ್ನಡ ಭಾಷೆ ಅದನ್ನು ಹೊಂದಿಕೊಳ್ಳುವಂತೆ ಹಲವು ಆವಿಷ್ಕಾರ ಮಾಡುವಲ್ಲಿ ಯಶಸ್ವಿಯಾದರು. ಕಂಪ್ಯೂಟರ್‌ನಲ್ಲಿ ಕನ್ನಡ ಅಕ್ಷರಗಳಿಗೆ ಸ್ಥಾನ ನೀಡುವಲ್ಲಿ ಯಶಸ್ವಿಯಾದರು. ಅದರಂತೆ ಈಗ ಕೃತಕ ಬುದ್ಧಿಮತ್ತೆಯ ಸವಾಲು ಎದುರಿಸಬೇಕಾಗಿದೆ ಎಂದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ವಿಜ್ಞಾನದಲ್ಲಿ ಕನ್ನಡ ಭಾಷೆಯನ್ನು ಸಮ್ಮಿಳಿತಗೊಳಿಸುವ ಹಲವು ಸಂಶೋಧನಾ ಕಾರ್ಯಗಳು ನಡೆಯಿತು. ಆದರೆ ಕೆಲವು ಲೇಖಕರು ಬರೆದ ಪುಸ್ತಕಗಳು ಪ್ರಕಟಗೊಳ್ಳಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕನ್ನಡ ರಾಜ್ಯ ಸ್ಥಾಪನೆ ಕುರಿತಂತೆ ಬಹಳಷ್ಟು ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಪ್ರೊ.ರಾಜೇಂದ್ರ ಚೆನ್ನಿ, ರಾಜರ ಕಾಲದಲ್ಲಿ ಕನ್ನಡ ಭಾಷೆ ಯಾವ ರೀತಿ ಬೆಳವಣಿಗೆ ಹೊಂದಿತು, ನಂತರ ಕನ್ನಡ ಭಾಷೆ ಹೇಗೆ ಬೆಳವಣಿಗೆ ಸಾಧಿಸಿತು, ಸವಾಲು ಎದುರಿಸಿತು ಎಂಬ ವಿಚಾರವನ್ನು ಕೂಡ ಸಂಕ್ಷಿಪ್ತವಾಗಿ ವಿವರಿಸಿದರು.

1959ಕ್ಕೂ ಮುಂಚೆ ಕನ್ನಡ ಭಾಷೆ ಬಗ್ಗೆ ಇದ್ದ ಅಭಿಪ್ರಾಯವೇ ಬೇರೆ, ತರುವಾಯ ವ್ಯಕ್ತವಾದ ಅಭಿಪ್ರಾಯಗಳೇ ಬೇರೆಯಾಗಿದೆ. ಕನ್ನಡ ಭಾಷೆಯು ಜನರ ಮನಸ್ಸಿನಲ್ಲಿ ಮಾನಸಿಕವಾಗಿ ರೂಪುಗೊಂಡ ಪರದಿಗಳು, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ವಾಸ್ತವ ನೆಲೆಗಟ್ಟಿನಲ್ಲಿ ಗಟ್ಟಿಯಾಗಿ ನಿಂತ ಬೆಳವಣಿಗೆಗಳ ಬಗ್ಗೆ ಕೂಡ ಮಾಹಿತಿ ನೀಡಿದರು. ಕನ್ನಡ ಭಾಷೆ ಬಗ್ಗೆ ನಡೆದ ಸಂಶೋಧನಾ ಕಾರ್ಯದಲ್ಲಿ ನವೋದಯ ಕಾಲದಲ್ಲೂ ಜಾನಪದ ಸಾಹಿತ್ಯವನ್ನು ಅನುಕರಿಸಿದ ಬೆಳವಣಿಗೆಗಳನ್ನು ಕೂಲಂಕುಶವಾಗಿ ವಿವರಿಸಿದ ಪ್ರೊ.ರಾಜೇಂದ್ರ ಚೆನ್ನಿ, ಹಲವು ರೀತಿಯ ಪ್ರಭಾವಗಳ ನಡುವೆ ಕನ್ನಡ ಭಾಷೆ ಇನ್ನು ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬರಲು ನಡೆದ ಹೋರಾಟ ಬಗ್ಗೆ ವಿವರಣೆ ನೀಡಿದರು. ವಿಚಾರಗೋಷ್ಠಿ ನಂತರ ಮೈಸೂರು ಓಪನ್ ಫೋರಂ ಸದಸ್ಯರೊಡನೆ ಸಂವಾದ ನಡೆಯಿತು.

ವಿದ್ಯಾವರ್ಧಕ ಕಾನೂನು ಕಾಲೇಜಲ್ಲಿ ಎಐ ಕುರಿತು ವಿಚಾರ ಸಂಕಿರಣ



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜು ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸ್ಮರಣಾರ್ಥ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಶುಕುರ್ ಕಮಲ್ ಉದ್ಘಾಟಿಸಿದರು.

ಮೈಸೂರು, ಜು. 14– ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜು ಪ್ರೊ.ಪಿ.ಎಮ್.ಚಿಕ್ಕಬೋರಯ್ಯ ಸ್ಮರಣಾರ್ಥ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಜಸ್ಟೀಸ್ ಸಿಸ್ಟಮ್: ಎಮರ್ಜಿಂಗ್ ಟ್ರೆಂಡ್ಸ್ ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಶುಕುರ್ ಕಮಲ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂದರೆ ಕೃತಕ ಬುದ್ಧಿಮತ್ತೆ ಈ ಆಧುನಿಕ ತಂತ್ರಜ್ಞಾನ ಪ್ರಣೀತ ಸ್ಥಿತ್ಯಂತರವು ಮಾನವ ಜನಾಂಗಕ್ಕೆ ಪೂರಕವೋ ಮಾರಕವೋ ಅನ್ನುವುದನ್ನು ನಾವು ಕಾದು ನೋಡಬೇಕಿದೆ ಎಂದರು.


ಆಧುನಿಕ ತಂತ್ರಜ್ಞಾನದ ಮೇಲೆ ಏಕಸ್ವಾಮ್ಯ ಮತ್ತು ಹಿಡಿತ ಸಾಧಿಸಿದ ರಾಷ್ಟ್ರಗಳೇ ಇವತ್ತು ಅತ್ಯಂತ ಶಕ್ತಿಶಾಲಿ ದೇಶಗಳೆಂದು ಗುರುತಿಸಿಕೊಂಡಿರುವ ಈ ಹೊತ್ತಿನಲ್ಲಿ ಕೃತಕ ಬುದ್ಧಿಮತ್ತೆಯೆಂಬುದು ಅಂಥ ರಾಷ್ಟ್ರಗಳ ಕೈಗೆ ಸಿಕ್ಕಿದರೆ ಏನಾಗಬಹುದು ಎಂಬುದನ್ನು ಅರಿಯಲು ಹೊರಟರೆ ಗಾಬರಿಯಾಗುತ್ತದೆ. ಮನುಷ್ಯ, ನದಿ, ಬೆಟ್ಟಗುಡ್ಡಗಳನ್ನೆಲ್ಲ ವ್ಯಕ್ತಿತ್ವದ ಭಾಗವಾಗಿ ನೋಡುತ್ತಿರುವ ಹೊತ್ತಿನಲ್ಲಿಯೇ ಯುಎಇ ದೇಶವು ಸೋಫಿಯಾ ಎಂಬ ರೊಬೊಟಿಗೆ ನಾಗರಿಕ ಹಕ್ಕುಗಳನ್ನು ನೀಡಿತು. ಈಗಾಗಲೇ ಚಾಲಕರಹಿತ ಕಾರುಗಳು ಚಾಲಕನ ಜಾಗಕ್ಕೆ ಬಂದು ಕೂತಿವೆ. ವಕೀಲರು, ನ್ಯಾಯಾಧೀಶರಿಲ್ಲದೆ ಬರಿಯ ಕೃತಕ ಬುದ್ಧಿಮತ್ತೆಯನ್ನೊಂದಿಟ್ಟುಕೊಂಡೇ ಮುಂದಿನ ದಿನಗಳಲ್ಲಿ ಕೋರ್ಟು ಕಲಾಪಗಳು ನಡೆಯುವ ದಿನಗಳು ದೂರವಿಲ್ಲ ಎಂದು ನ್ಯಾಯಮೂರ್ತಿ ಶುಕುರ್ ಕಮಲ್ ಹೇಳಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಕಳೆದ ವರ್ಷ ನಡೆದ ಪ್ರೊ.ಪಿ.ಎಮ್.ಚಿಕ್ಕಬೋರಯ್ಯ ನೆನಪಿನ ಉಪನ್ಯಾಸ ಮಾಲೆ–5ರ ವಿಶೇಷ ಸಂಚಿಕೆ ಬಿಡುಗಡೆ ಮಾಡಲಾಯಿತು.

ವಿಚಾರ ಸಂಕಿರಣದಲ್ಲಿ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ ಸದಸ್ಯರಾದ ಶಿವಲಿಂಗಯ್ಯ, ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೀಪು, ಕಾರ್ಯಕ್ರಮದ ಸಂಯೋಜಕ ಡಾ.ಎಸ್.ಬಿ.ಬೋರೇಗೌಡ, ಡಾ.ಎ.ಆರ್.ಪ್ರಕೃತಿ, ಡಾ.ಚಂದ್ರಶೇಖರ್ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> "ನ್ಯಾಯಾಲಯದ ಆವರಣಕ್ಕೆ ಕೃತಕ ಬುದ್ಧಿಮತ್ತೆಯು ಕಾಲಿಡುವುದನ್ನು ನಾವು ಸ್ವಾಗತಿಸಲೇಬೇಕಿದೆ. ಇದರಿಂದಾದರೂ ಪ್ರತಿದಿನ, ಪ್ರತಿವರ್ಷ ತೀರ್ಪು, ಇತ್ಯರ್ಥಗಳನ್ನು ಕಾಣದೇ ಬ್ಯಾಕ್‌ಲಾಗ್ ರೂಪದಲ್ಲಿ ಕೊಳೆಯುತ್ತಿರುವ ಲಕ್ಷಾಂತರ ಕೇಸುಗಳಿಗೆ ಮುಕ್ತಿ ಸಿಕ್ಕಿ ಅವು ತುರ್ತು ವಿಲೇವಾರಿ ಕಾಣಬಹುದು. ಭಾರತದ ನ್ಯಾಯ ವ್ಯವಸ್ಥೆಗೆ ಅತ್ಯಂತ ತುರ್ತಾಗಿ ಕೃತಕ ಬುದ್ಧಿಮತ್ತೆಯಿಂದ ಆಗಲೇಬೇಕಿರುವ ಕೆಲಸವೆಂದರೆ ಇದೇ. ಸಮಾನತೆ, ಸಾಮಾಜಿಕ ನ್ಯಾಯ, ಮೂಲ ಹಕ್ಕುಗಳಂತಹ ಸಾಂವಿಧಾನಿಕ ಮೌಲ್ಯಗಳ ಮೇಲೆ ನಿಂತಿರುವ ಭಾರತಕ್ಕೆ ಕೃತಕ ಬುದ್ಧಿಮತ್ತೆಯಂತಹ ಆಧುನಿಕ ತಂತ್ರಜ್ಞಾನದಿಂದ ಅಪಾಯ ಎದುರಾಗದಿದ್ದರೆ ಅದು ನಿಜಕ್ಕೂ ಪ್ರಜಾಪ್ರಭುತ್ವದ ಗೆಲುವು. ಇಲ್ಲಿ ಜಾತಿ, ಧರ್ಮ, ಮತಗಳೆಲ್ಲವೂ ಮನುಷ್ಯನ ಮೂಲ ಅಸ್ಮಿತೆಯಾಗಿರುವುದರಿಂದ ಅದಕ್ಕೆ ಕೃತಕ ಬುದ್ಧಿಮತ್ತೆಯು ಹೇಗೆ ಮುಖಾಮುಖಿಯಾಗಬಹುದು ಎನ್ನುವ ಕುತೂಹಲ ನನಗೂ ಇದೆ. –ಪ್ರೊ.ಸುದೇಶ್.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

15.07.2024 ಸೋಮವಾರ, ಮಳೆ ನಕ್ಷತ್ರ: ಪುನರ್ವಸು 6.07.2024ರಿಂದ 19.07.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಶನ್:** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 10ರಿಂದ ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಮಧ್ಯಾಹ್ನ 1 ಗಂಟೆಗೆ ಸಗ್ರಹಮುಖ ಚಂಡಿಯಾಗ, ಪೂರ್ಣಾಹುತಿ, ಬಲಿಹರಣ, ಕುಮಾರಿ, ಸಂವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ಫೌಂಡೇಶನ್ ಆವರಣ, ಜಯಲಕ್ಷ್ಮೀಪುರಂ.
- **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಉತ್ತಿಷ್ಠ ಭಾರತ ಪ್ರತಿಷ್ಠಾನ (ಜೆ.ಪಿ.ನಗರ, ಮೈಸೂರು):** ವಿಶ್ವ ಜನಸಂಖ್ಯಾ ದಿನಾಚರಣೆ ಪ್ರಯುಕ್ತ ಕವಿಗೋಷ್ಠಿ ಕಾರ್ಯಕ್ರಮ, ಉದ್ಘಾಟನೆ: ಸಂಸ್ಕೃತಿ ಚಿಂತಕರಾದ ಗ.ನಾ.ಭಟ್ಟ, ಜನಸಂಖ್ಯಾ ಸ್ಫೋಟ ಕುರಿತು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸ್ಥಳ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ, ನಿಮಿಷಾಂಬ ಬಡಾವಣೆ, ನಮನ ಪಾರ್ಕ್ ಬಳಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ"– ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಆರ್.ಸುಧಾ, ವ್ಯಾಖ್ಯಾನ: ಡಾ.ಲತಾ ಮೈಸೂರು, 6.50–ರೈತರಿಗೆ ಸಲಹೆ, 7.15–ಭಾವಗೀತೆ ಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ಹಿರಿಯ ರಂಗ ಕಲಾವಿದರು ಹಾಗೂ ಚಿತ್ರ ಸಾಹಿತಿ ಸೋರಟ್ ಅಶ್ವಥ್ ಅವರೊಂದಿಗೆ ಎನ್.ವಿ.ರಮೇಶ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಇ. ಗಾಯತ್ರಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್–ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, 12.30–ದೇವರನಾಮ, 12.45–ನಮ್ಮ ಆರೋಗ್ಯ – ಎಂಬೊಲೈಸೇಷನ್ (Embolization) ಕುರಿತು ನರ ಹಾಗೂ ರಕ್ತ ನಾಳದ ತಜ್ಞರಾದ ಡಾ.ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆಗಳು– ಕೆ.ಜಿ.ಕನಕಲಕ್ಷ್ಮೀ, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಾದ್ಯವೃಂದ ನಿರ್ದೇಶನ, ತಿರುವಾರೂರು ಭಕ್ತವತ್ಸಲಂ, 4.00–ಮಹಿಳಾರಂಗ: "ನಾನು ನನ್ನ ಕಂಪನಿ", ವಿಷಯ: ಮೈಸೂರಿನಲ್ಲಿ ಸಾಹಸ ಕ್ರೀಡಾ ಕ್ಲಬ್ ನಡೆಸುತ್ತಿರುವ ಸಾಹಸ ಕ್ರೀಡಾ ಬೋಧಕರು ಹಾಗೂ ಉದ್ಯಮಿ ರುಕ್ಮಿಣಿ ಚಂದ್ರನ್ ಅವರೊಂದಿಗೆ ಮಾತುಕತೆ.ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ರಾಧಾಮೂರ್ತಿ, 6.50–ಕೃಷಿರಂಗ : ಸಂಬಾರ ಬೆಳೆಗಳ ಬೇಸಾಯ ಹಾಗೂ ಮಾರಾಟ ಅಭಿವೃದ್ಧಿ ಕಾರ್ಯಕ್ರಮಗಳು. ಈ ಕುರಿತು ಸಂಬಾರ ಮಂಡಳಿಯ ನಿವೃತ್ತ ವಿಜ್ಞಾನಿ ಡಾ.ಬಿ.ಎ.ವಾದಿರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ,7.45 ವಿಧಾನ ಮಂಡಲದಲ್ಲಿ ಇಂದು 8.30 ಕನ್ನಡದಲ್ಲಿ ಭಾಷಣ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು. ಎಸ್.ಮಹದೇವಪ್ಪ–ವೈಯೋಲಿನ್, 10.00–ನಾಟಕ

- **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 7 ಗಂಟೆಗೆ ಹೊರೆಯಲ್ಲಿ ಶಯನೋತ್ಸವ, ಸ್ಥಳ: ಕೋಟೆ ತ್ರಿನೇಶ್ವರ ಸ್ವಾಮಿ ದೇವಸ್ಥಾನ, ಅರಮನೆ ಆವರಣ.

ಅಂತರರಾಷ್ಟ್ರೀಯ ಜಾವಾ ದಿನಾಚರಣೆ

ಮೈಸೂರಲ್ಲಿ ಜಾವಾ, ಯೆಜ್ಡಿ ಬೈಕುಗಳು ಘರ್ಜನೆ


ಮೈಸೂರಲ್ಲಿ ಭಾನುವಾರ ಅಂತರರಾಷ್ಟ್ರೀಯ ಜಾವಾ ದಿನಾಚರಣೆಯಲ್ಲಿ ಜಾವಾ ಬೈಕ್ ರ್‍ಯಾಲಿ ಗಮನ ಸೆಳೆಯಿತು.

ಮೈಸೂರು, ಜು.14(ಜಿಎ)–ಮೈಸೂರಲ್ಲಿ ಭಾನುವಾರ ಜಾವಾ ಮತ್ತು ಯೆಜ್ಡಿ ಬೈಕ್‌ಗಳು ಘರ್ಜಿಸುವ ಮೂಲಕ ಮೈಸೂರಿಗರ ಗಮನ ಸೆಳೆಯಿತು.

ಮೈಸೂರು ಜಾವ ಫ್ರೆಂಡ್ಸ್ ಕ್ಲಬ್ ವತಿಯಿಂದ 22ನೇ ಅಂತರರಾಷ್ಟ್ರೀಯ ಜಾವಾ ದಿನದ ಅಂಗವಾಗಿ ಆಯೋಜಿಸಿದ್ದ ಜಾವಾ ಬೈಕ್ ರ್‍ಯಾಲಿಯಲ್ಲಿ ಮೈಸೂರು, ಬೆಂಗಳೂರು, ತುಮಕೂರು, ಮಂಡ್ಯ, ಕೊಡುಗೆ ಜಿಲ್ಲೆ ಸೇರಿದಂತೆ ವಿವಿಧೆಡೆಗಳಿಂದ ಜಾವ ಮತ್ತು ಯೆಜ್ಡಿ ಬೈಕ್‌ಗಳೊಂದಿಗೆ ಆಗಮಿಸಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಆರ್‌ಟಿಓ ಕಚೇರಿ ಮುಂಭಾಗದಿಂದ ಆರಂಭವಾದ ರ್‍ಯಾಲಿ ಸಾತಗಳ್ಳಿ ರಸ್ತೆ ಜಂಕ್ಷನ್, ಬನ್ನೂರು ರಸ್ತೆ ಜಂಕ್ಷನ್, ತಿ.ನರಸೀಪುರ ರಸ್ತೆ, ನಂಜನಗೂಡು ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ಬೋಗಾದಿ ರಸ್ತೆ ಹುಣಸೂರು ರಸ್ತೆ ಕೆಆರ್‌ಎಸ್ ರಸ್ತೆ ಜಂಕ್ಷನ್ ಮೂಲಕ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಮೂಲಕ ಶೀರಂಗಪಟ್ಟಣದ ಸರ್ಕಾರಿ ಅತಿಥಿ ಗೃಹದವರೆಗೂ ಸಂಚರಿಸಿದವು.

ಜಾವ ಬೈಕ್ ರ್‍ಯಾಲಿಯಲ್ಲಿ: ಮೂರ್‍ನಾಲ್ಕು ತಲೆಮಾರಿನವರು ಜಾವ ಮೇಲಿನ ಪ್ರೀತಿಯಿಂದ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಜಾವಾ ರ್‍ಯಾಲಿಯಲ್ಲಿ 1957ರಿಂದ 1996ರವರೆಗೆ ತಯಾರಾದ ವಿವಿಧ ಮಾಡೆಲ್‌ಗಳ ಜಾವಾ ಹಾಗೂ ಯೆಜ್ಡಿ ಬೈಕ್‌ಗಳು ಎಲ್ಲರ ಗಮನ ಸೆಳೆದವು. ಯೆಜ್ಡಿ ಕೊಲ್ಟ್ ಮಾಡೆಲ್‌ನಿಂದ ಹೊಸ ಬೈಕ್‌ಗಳು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವು.

ಬೈಕುಗಳನ್ನು ನೋಡಿ ಫೋಟೋ ಕ್ಲಿಕ್ಕಿಸಿಕೊಂಡ ಜನ

40 ಸಿಸಿಯಿಂದ 400 ಸಿಸಿವರೆಗೆ ಜಾವಾ, ಯೆಜ್ಡಿ, ರೋಡ್ ಕಿಂಗ್ ಸೇರಿದಂತೆ ಇನ್ನಿತರ ಮಾಡೆಲ್‌ಗಳ ಬೈಕ್‌ಗಳನ್ನು ನೋಡಿ ಜನರು ಫೋಟೋ ಕ್ಲಿಕಿಸಿಕೊಂಡಿದ್ದು ವಿಶೇಷವಾಗಿತ್ತು ಈ ವೇಳೆ ಜಾವಾ ಫ್ರೆಂಡ್ಸ್ ಕ್ಲಬ್ ಮೈಸೂರು ಸದಸ್ಯರಾದ ಸಮೀರ್, ಕೈರುರ್, ಶಿವು, ವಿನಿತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಜಾವ ಇತಿಹಾಸ: 1940ರಲ್ಲಿ ಐಡಿಯಲ್ ಜಾವವನ್ನು ಎಫ್.ಕೆ.ಇರಾನಿ ಅವರು ಮೈಸೂರಿನ ಯಾದವಗಿರಿಯಲ್ಲಿ ಆರಂಭಿಸಿ ದೇಶದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. 1960, 70 ಮತ್ತು 80ರ ದಶಕದವರೆಗೂ ನಾನಾ ರೀತಿ ಬೈಕ್‌ಗಳನ್ನು ತಯಾರಿಸಿದರು. ನಂತರ 1981ರಲ್ಲಿ ಉತ್ಪಾದನೆ ಸ್ಥಗಿತಗೊಂಡು ಜಾವಾ ಸಂಸ್ಥೆ ಮುಚ್ಚಲ್ಪಟ್ಟಿತು. ಆದರೆ, ಜಾವಾ ಬೈಕ್ ಮೇಲಿನ ಪ್ರೀತಿಯಿಂದ ಅದರ ಪರಂಪರೆಯನ್ನು ಉಳಿಸುವ ಉದ್ದೇಶದಿಂದ 2001ರಿಂದ ಪ್ರತಿ ವರ್ಷ ಜಾವಾ ಫ್ರೆಂಡ್ಸ್ ಕ್ಲಬ್ ಮೈಸೂರು ಜಾವ ಬೈಕ್ ರ್‍ಯಾಲಿ ಆಯೋಜಿಸಿಕೊಂಡು ಬರುತ್ತಿದ್ದಾರೆ.

ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಸುಳಿವು




ಎಸ್.ಆರ್.ಶ್ರೀನಿವಾಸ್

ಬೆಂಗಳೂರು: ಹಾಲಿನ ದರ ಏರಿಕೆ ಬೆನ್ನಲ್ಲೇ ಇದೀಗ ಕರ್ನಾಟಕದ ಜನತೆಗೆ ಮತ್ತೊಂದು ದರ ಏರಿಕೆ ಶಾಕ್ ಎದುರಾಗುವ ಸಾಧ್ಯತೆ ಇದ್ದು, ಕೆಎಸ್‌ಆರ್‌ಟಿಸಿ ಟಿಕೆಟ್ ದರ ಏರಿಕೆ ಕುರಿತು ಸುಳಿವು ದೊರೆತಿದೆ.

ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆ ಬೆನ್ನಲ್ಲೇ ಸಾರಿಗೆ ಬಸ್ ಪ್ರಯಾಣಿಕರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶಾಕ್ ನೀಡಲು ಮುಂದಾಗಿದ್ದು, ಬಸ್ ಟಿಕೆಟ್ ದರ ಏರಿಕೆ ವಿಚಾರವಾಗಿ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ಸುಳಿವು ನೀಡಿದ್ದಾರೆ.

ಗುಬ್ಬಿ ತಾಲೂಕಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್, ಇಂಧನ ದರ, ವಾಹನ ಬಿಡಿ ಭಾಗಗಳ ಬೆಲೆ ಏರಿಕೆ ಹಾಗೂ ಸಿಬ್ಬಂದಿ ವೇತನ ವೆಚ್ಚದಿಂದ ಕೆಎಸ್‌ಆರ್‌ಟಿಸಿ ನಷ್ಟ ಅನುಭವಿಸುತ್ತಿದೆ. ಹೀಗಾಗಿ ನಷ್ಟ ಸರಿದೂಗಿಸಲು ಟಿಕೆಟ್ ದರ ಏರಿಕೆ ಅನಿವಾರ್ಯ ಎಂದು ಹೇಳುವ ಮೂಲಕ ಬಸ್ ಟಿಕೆಟ್ ದರ ಖಚಿತ ಎಂಬ ಸುಳಿವು ನೀಡಿದ್ದಾರೆ.

ಬಸ್ ಟಿಕೆಟ್ ದರ ಹೆಚ್ಚಿಸುವ ಚಿಂತನೆ ಇದೆ: ರಾಜು ಕಾಗೆ: ಇದಕ್ಕೆ ಇಂಬು ನೀಡುವಂತೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ರಾಜು ಕಾಗೆ ಕೂಡ ಇದೇ ವಿಚಾರವಾಗಿ ಮಾತನಾಡಿದ್ದು, ರಾಜ್ಯ ಸರ್ಕಾರ ಶಕ್ತಿ ಯೋಜನೆ ಆರಂಭಿಸಿ ಒಂದು ವರ್ಷವಾಗಿದೆ. ಇದರಿಂದ ಮಹಿಳೆಯರು ಉಚಿತವಾಗಿ ಪ್ರಯಾಣಿಸುತ್ತಾರೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಷ್ಟದಲ್ಲಿದೆ. ಹೀಗಾಗಿ ಬಸ್ ಟಿಕೆಟ್ ದರವನ್ನು ಹೆಚ್ಚಿಸಲು ಚಿಂತನೆ ನಡೆಸಿದ್ದೇವೆ ಎಂದು ತಿಳಿಸಿದ್ದಾರೆ.

ಕಾಗವಾಡದಲ್ಲಿ ಮಾತನಾಡಿರುವ ಅವರು, ಶಕ್ತಿ ಯೋಜನೆಯಿಂದ ಸಂಸ್ಥೆ ನಷ್ಟ ಅನುಭವಿಸಿದೆ. ಡೀಸೆಲ್ ಮತ್ತು ಬಸ್ ಬಿಡಿ ಭಾಗಗಳ ಬೆಲೆಯೂ ಹೆಚ್ಚಾಗಿದೆ. ಕಳೆದ 10 ವರ್ಷಗಳಿಂದ ಬಸ್ ದರ ಏರಿಕೆ ಮಾಡಿಲ್ಲ. ಈಗಾಗಲೇ ಹಳೆಯ ಕ್ಲಬ್ ಕಟ್ಟಡವನ್ನು ನವೀಕರಿಸಿ ಬಾಡಿಗೆಗೆ ನೀಡಲಾಗುತ್ತಿದೆ. ಹೀಗಾಗಿ ಬಸ್ ಟಿಕೆಟ್ ದರ ಹೆಚ್ಚಿಸುವ ಚಿಂತನೆಯಲ್ಲಿದ್ದೇವೆ ಎಂದು ತಿಳಿಸಿದ್ದಾರೆ.

ರಾಮಲಿಂಗಾರೆಡ್ಡಿ ಅಸಮಾಧಾನ?: ಬಸ್ ಟಿಕೆಟ್ ದರ ಏರಿಕೆ ವಿಚಾರ ವಿರೋಧ ಹೆಚ್ಚಾದ ಹಿನ್ನೆಲೆಯಲ್ಲಿ ಗುಬ್ಬಿ ಶ್ರೀನಿವಾಸ್ ವಿರುದ್ಧ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಟಿಕೆಟ್ ದರ ಏರಿಕೆ ವಿಚಾರವಾಗಿ ಸ್ಪಷ್ಟನೆ ನೀಡಲು ನಿರಾಕರಿಸಿರುವ ರಾಮಲಿಂಗಾರೆಡ್ಡಿ ಅವರು, ದರ ಏರಿಕೆ ಬಗ್ಗೆ ಗುಬ್ಬಿ ಶ್ರೀನಿವಾಸ್‌ರನ್ನೇ ಕೇಳಿಕೊಳ್ಳಿ ಎಂದು ಹೇಳಿದ್ದಾರೆ.

ಜು.22ರಿಂದ ಅಂಗನವಾಡಿಗಳಲ್ಲಿ ಎಲ್‌ಕೆಜಿ–ಯುಕೆಜಿ ಆರಂಭ: ಕಾರ್ಯಕರ್ತೆಯರಿಗೆ ಜೀವ ವಿಮೆ

ಬೆಂಗಳೂರು, ಜು.14– ಜು.22ರಿಂದ ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವಪ್ರಾಥಮಿಕ (ಎಲ್‌ಕೆಜಿ, ಯುಕೆಜಿ) ಶಾಲೆ ಆರಂಭಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ ನೀಡಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜುಲೈ 22ರಂದು ರಾಜ್ಯದ 250 ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳು ಸಾಂಕೇತಿಕವಾಗಿ ಆರಂಭವಾಗಲಿದೆ. ಮಕ್ಕಳಿಗೆ ಇಲಾಖೆ ವತಿಯಿಂದಲೇ ಬ್ಯಾಗ್, ಪುಸ್ತಕ, ಸಮವಸ್ತ್ರ ವಿತರಣೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಅಂಗನವಾಡಿ ಕೇಂದ್ರಗಳ ಉನ್ನತೀಕರಣದ ಮೊದಲ ಭಾಗವಾಗಿ ಕ್ರಮಕೈಗೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ 15–20 ಸಾವಿರ ಶಾಲೆಗಳಲ್ಲಿ ಗವರ್ನಮೆಂಟ್ ಮಾಂಟೆಸ್ಸರಿ ಕೂಡ ಆರಂಭಿಸುತ್ತೇವೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಜೀವವಿಮಾ ಯೋಜನೆ ಕುರಿತು ಶೀಘ್ರ ನಿರ್ಧಾರ ಮಾಡಲಾವುದು ಎಂದಿದ್ದಾರೆ.

ಅಂಗನವಾಡಿ ಶಿಕ್ಷಕಿಯರನ್ನು ಕೆಲಸದಿಂದ ತೆಗೆಯುವ ಪ್ರಶ್ನೆಯೇ ಇಲ್ಲ. ಈಗಾಗಲೇ ಇಲಾಖೆ ವತಿಯಿಂದ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಆಹಾರ ಮತ್ತು ಶಿಕ್ಷಕಿಯರಿಗೆ ಸೀರೆ ನೀಡಲಾಗಿದೆ. ಯಾವುದೇ ಕಾರಣಕ್ಕೂ ಅಂಗನವಾಡಿ ಶಿಕ್ಷಕಿಯರನ್ನು ತೆಗೆಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. 30 ವರ್ಷಕ್ಕಿಂತ ಮೇಲ್ಪಟ್ಟ ಅಂಗನವಾಡಿ ಕೇಂದ್ರಗಳನ್ನು ಉನ್ನತ ದರ್ಜೆಗೆ ಏರಿಸಲಾಗುವುದು ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿ ಆರಂಭಿಸಲು ಸರ್ಕಾರ ಚಿಂತನೆ ನಡೆಸಿತ್ತು. ಆದರೆ ಸರ್ಕಾರದ ಈ ನಿರ್ಧಾರಕ್ಕೆ ಅಂಗನವಾಡಿ ಕಾರ್ಯಕರ್ತೆಯರು ತೀವ್ರ ವ್ಯಕ್ತಪಡಿಸಿದ್ದು, ಪ್ರತಿಭಟನೆ ಕೂಡ ಮಾಡಿದ್ದರು.

ಸರ್ಕಾರಕ್ಕೆ ಈ ಹಿಂದೆ ಹಲವು ಬಾರಿ ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ–ಯುಕೆಜಿ ತರಗತಿ ಆರಂಭಿಸುವುದಕ್ಕೆ ಮನವಿ ಮಾಡಲಾಗಿತ್ತಂತೆ. ಆದರೆ ಈ ಮನವಿಗೆ ಸರ್ಕಾರಗಳು ಪುರಸ್ಕರಿಸಿರಲಿಲ್ಲ. ಆದರೆ ಈಗ ಅಂಗನವಾಡಿಗೆ ಸೇರುವ ಮಕ್ಕಳನ್ನ ಆಯಾ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ–ಯುಕೆಜಿ ತರಗತಿಗೆ ಸೇರಿದರೆ ಅಂಗನವಾಡಿ ಕೇಂದ್ರಗಳು ಖಾಲಿ ಆಗುತ್ತವೆ.

ಕಾರ್ಯಕರ್ತೆಯರು, ಸಹಾಯಕರಿಯರು, ಅಡುಗೆ ಸಹಾಯಕಿರು ಕೆಲಸ ಕಳೆದುಕೊಳ್ಳುವ ಸ್ಥಿತಿ ಬರುತ್ತೆ. ಇದು ಮುಂದೊಂದು ದಿನ ಮಕ್ಕಳಿಲ್ಲದೇ ಅಂಗನವಾಡಿ ಕೇಂದ್ರಗಳು ಬಂದ್ ಆಗಿ ರಾಜ್ಯದಲ್ಲಿರುವ 1.30 ಲಕ್ಷ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರಿಯರು ಕೆಲಸವಿಲ್ಲದೇ ಬೀದಿಗೆ ಬೀಳುವ ಸ್ಥಿತಿ ನಿರ್ಮಾಣವಾಗಲಿದೆ ಎಂದು ಅಂಗನವಾಡಿ ಕಾರ್ಯಕರ್ತೆಯರು ಆಕ್ರೋಶ ಹೊರಹಾಕಿದ್ದರು.

ವಾಲ್ಮೀಕಿ ನಿಗಮ ಹಗರಣ ಬಳಿಕ ವಕ್ಫ್ ಬೋರ್ಡ್‌ನಲ್ಲೂ ಅಕ್ರಮ ಹಣ ವರ್ಗಾವಣೆ; ಎಫ್‌ಐಆರ್ ದಾಖಲು

ಬೆಂಗಳೂರು, ಜು.14– ವಾಲ್ಮೀಕಿ ನಿಗಮದ ಹಗರಣದಲ್ಲಿ 88ರಿಂದ 187 ಕೋಟಿ ರೂ. ಅವ್ಯವಹಾರದ ಬೆನ್ನಲ್ಲೇ ಕರ್ನಾಟಕ ರಾಜ್ಯ ವಕ್ಫ್ ಬೋರ್ಡ್‌ನಲ್ಲೂ ಅಕ್ರಮವಾಗಿ ಹಣ ವರ್ಗಾವಣೆಯಾಗಿರುವುದು ಬೆಳಕಿಗೆ ಬಂದಿದೆ. ಸುಮಾರು 4 ಕೋಟಿ ರೂ. ಹಣ ವರ್ಗಾವಣೆ ಸಂಬಂಧ ಮಾಜಿ ಸಿಇಓ ಝುಲ್ಫಿಕಾರುಲ್ಲಾ ವಿರುದ್ಧ ವಕ್ಫ್ ಮಂಡಳಿ ದೂರು ನೀಡಿದೆ.

ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುವ ಹಾಲಿ ಸಿಇಓ ಮೀರ್ ಅಹ್ಮದ್ ಅಬ್ಬಾಸ್, ಹಿಂದಿನ ಸಿಇಓ ರಾಜ್ಯದ ಬೊಕ್ಕಸಕ್ಕೆ ಒಟ್ಟು 8.03 ಕೋಟಿ ರೂ. ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಕರ್ನಾಟಕ ವಕ್ಫ್ ಮಂಡಳಿಯ ಗುಲ್ಬರ್ಗಾ ದರ್ಗಾಕ್ಕೆ ಸೇರಿದ ಆಸ್ತಿಯನ್ನು ಸರ್ಕಾರ ಒತ್ತುವರಿ ಮಾಡಿಕೊಂಡು ಮಂಡಳಿಗೆ 2.29 ಕೋಟಿ ಹಣವನ್ನು ನೀಡಿತ್ತು. ಜತೆಗೆ ವಕ್ಫ್ ಮಂಡಳಿಯಲ್ಲಿ ಮುಜರಾಯಿ ಕಡೆಯಿಂದ 1.79 ಕೋಟಿ ಹಣವು ಬಂದಿತ್ತು. ಈ ಒಟ್ಟು 4,00,45,465 ರೂ. ಹಣವು ಬೆನ್ಸನ್ ಟೌನ್‌ನ ಇಂಡಿಯನ್ ಬ್ಯಾಂಕ್‌ನ ಎಸ್‌ಬಿ ಖಾತೆಗೆ ಜಮೆ ಮಾಡಲಾಗಿತ್ತು. ಆದರೆ ಈ ಹಣವನ್ನು 2016ರ ನವೆಂಬರ್ 26ರಂದು ಚಿಂತಾಮಣಿಯ ವಿಜಯಾ ಬ್ಯಾಂಕ್‌ನಲ್ಲಿರುವ ವಕ್ಫ್ ಮಂಡಳಿ ಹೆಸರಿನ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ ಎಂದು ದೂರುದಾರರು ಹೇಳಿದ್ದಾರೆ. ಹಣ ವರ್ಗಾವಣೆ ಕುರಿತು ಝುಲ್ಫಿಕಾರುಲ್ಲಾ ವಕ್ಫ್ ಸಂಸ್ಥೆಯ ಗಮನಕ್ಕೆ ತಂದಿಲ್ಲ. ಇದರಿಂದ 8,03,56, 713.64 ರೂ.ಗಳಷ್ಟು ನಷ್ಟವಾಗಿದೆ. ಈ ಮೊತ್ತವನ್ನು ಸೂಕ್ತವಾಗಿ ಹೂಡಿಕೆ ಮಾಡಿದ್ದರೆ ಕಳೆದ 8 ವರ್ಷಗಳಲ್ಲಿ 4,00,45,465 ರೂ.ಗಳ ಮೊತ್ತದ ಮೇಲೆ ಚಕ್ರಬಡ್ಡಿ ಜಮೆಯಾಗುತ್ತಿತ್ತು. ಮಾರ್ಚ್ 31, 2022ರಂದು ಹಣ ದುರುಪಯೋಗದ ಬಗ್ಗೆ ಝುಲ್ಫಿಕಾರುಲ್ಲಾ ನೀಡಿದ ಉತ್ತರ ಅತೃಪ್ತಿಕರವಾಗಿದೆ ಎಂದು ಪರಿಗಣಿಸಲಾಗಿದೆ ಎಂದು ದೂರಿನಲ್ಲಿ ಅಬ್ಬಾಸ್ ತಿಳಿಸಿದ್ದಾರೆ. ಆದಾದ 2 ವರ್ಷಗಳ ನಂತರ, ಜೂನ್ 12, 2024ರಂದು ಈ ವಿಷಯದ ಬಗ್ಗೆ ದೂರು ಸಲ್ಲಿಸಲು ಮಂಡಳಿಯು ನಿರ್ಧರಿಸಿತ್ತು. ಅದರ ಪ್ರಕಾರ ಜುಲೈ 6, 2024 ರಂದು ಪ್ರಕರಣವನ್ನು ದಾಖಲಿಸಲಾಗಿದೆ



ಪಂಜಾಬ್‌ನಲ್ಲಿ ಕೆನಡಾ ಮೂಲದ ಉಗ್ರ ಲಾಂಡಾನ ಐವರು ಸಹಚರರ ಬಂಧನ



ಚಂಡೀಗಢ,ಜು.14–ಕೆನಡಾ ಮೂಲದ ಉಗ್ರ ಲಖ್ಬೀರ್ ಸಿಂಗ್ ಅಲಿಯಾಸ್ ಲಾಂಡಾನ ಐವರು ಸಹಚರರನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ತಿಳಿಸಿದ್ದಾರೆ. ಬಂಧಿತರಿಂದ ಮೂರು ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ತಿಳಿಸಿದ್ದಾರೆ.

ಸಂಘಟಿತ ಅಪರಾಧದ ವಿರುದ್ಧದ ಕಾರ್ಯಾಚರಣೆಯಲ್ಲಿ ಜಲಂಧರ್ ಕಮಿಷನರೇಟ್ ಪೊಲೀಸರು ಕೆನಡಾ ಮೂಲದ ಭಯೋತ್ಪಾದಕ ಲಖ್ಬೀರ್ ಆಲಿಯಾಸ್ ಲಾಂಡಾನ ಐವರು ಸಹಚರರನ್ನು ಬಂಧಿಸಿದ್ದಾರೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದರೊಂದಿಗೆ ಬಂಧಿತ ಲಾಂಡಾ ಗ್ಯಾಂಗ್ ಸದಸ್ಯರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ ಎಂದು ಡಿಜಿಪಿ ತಿಳಿಸಿದ್ದಾರೆ. ಈ ಗ್ಯಾಂಗ್ ಪಂಜಾಬ್‌ನ ಹಲವು ಜಿಲ್ಲೆಗಳಲ್ಲಿ ಕೊಲೆ, ಸುಲಿಗೆ ಮತ್ತು ಅನೇಕ ಇತರ ಅಪರಾಧ ಚಟುವಟಿಕೆಗಳಂತಹ ಬಹು ಘೋರ ಅಪರಾಧಗಳಲ್ಲಿ ತೊಡಗಿದೆ ಎಂದು ಯಾದವ್ ಹೇಳಿದ್ದಾರೆ. ಜೂ.10ರಂದು ಲಾಂಡಾದ ಮೂವರು ಸಹಚರರನ್ನು, ಜೂ.30ರಂದು ಐವರು ಸಹಚರರನ್ನು ಬಂಧಿಸಲಾಗಿತ್ತು ಎಂದು ತಿಳಿಸಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಕಮಲಮ್ಮ : ಇವತ್ತೇನೋ ವಿಶೇಷ ಆಂಟಿ. ನಾಗಪ್ಪಂಗೆ ಹಾಲು ಹಾಕ್ತಿದ್ದೀರಿ...!

ವಿಮಲಮ್ಮ : ಇನ್ನೇನು ಕೊಟ್ಟಿರೋ 50 ML ಹಾಲಿನಲ್ಲಿ ಪೇಡಾ ಮಾಡಕ್ಕಾಗುತ್ತಾ, ಪುಣ್ಯನಾರು ಬರ್ಲಿ ಅಂತಾ...!

ಮೈಸೂರು ಮಿತ್ರ
ಸೋಮವಾರ, 15 ಜುಲೈ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಜೀವನ ಚಿಕ್ಕದು. ನಿಮ್ಮನ್ನು ನಗಿಸುವ, ಪ್ರೀತಿಸುವ ಜನರೊಂದಿಗೆ ಬದುಕಿನ ಆ ನಾಲ್ಕು ದಿನಗಳನ್ನು ಸಂತಸದಿಂದ ಕಳೆಯಿರಿ. ಇರುವಷ್ಟು ದಿನ ಯಾವುದೇ ನ್ಯೂನತೆಯಿಲ್ಲದೆ ಅನ್ಯೋನ್ಯತೆಯಿಂದ ಬದುಕಿ. ಸತ್ತಾಗ ಎಲ್ಲರೂ ನೋಡಲು ಬರುತ್ತಾರೆ. ಆದರೆ ಮಾತನಾಡಲಾಗುವುದಿಲ್ಲ. ಅವಕಾಶ ಸಿಕ್ಕಾಗ ಎಲ್ಲರೊಂದಿಗೆ ಹೃದಯ ಬಿಚ್ಚಿ ಮಾತನಾಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತೋಕೂ ಮೊದಲು ಕುದುರೆ ನೋಡು, ಬಿತ್ತುವುದಕ್ಕೆ ಮೊದಲು ನೆಲ ನೋಡು

ನಿಮ್ಮ ಪತ್ರಗಳು

■ ಈ ವೃತ್ತದಲ್ಲಿ ಸಂಚಾರಿ ಪೊಲೀಸ್ ಹಾಕಿ



ಮಾನ್ಯರೆ,

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಎದುರು ಇರುವ ಶೃಂಗಾರ್ ಹೋಟೆಲ್ ಮುಂಭಾಗದ ಹುಣಸೂರು ರಸ್ತೆ ದಿವಾನ್ಸ್ ರಸ್ತೆ ಕೂಡುವ ಮಾಜಿ ಮೇಯರ್ ರಾಮಸ್ವಾಮಿ (ಅಪ್ಪಾಜಪ್ಪ) ವೃತ್ತದಲ್ಲಿ ಇತ್ತೀಚೆಗೆ ವಾಹನಗಳ ಸಂಚಾರ ದಟ್ಟಣೆ ಆಗುತ್ತಿದೆ. ರಜಾ ದಿನಗಳ ಹಾಗೂ ಸರ್ಕಾರಿ ಕಚೇರಿಗೆ ಹೋಗುವ ಅವಧಿಯಲ್ಲಿ ಪದೇ ಪದೆ ಸಂಚಾರ ಅಸ್ತವ್ಯಸ್ತ ಆಗುತ್ತಿದೆ. ನಗರ ಪೊಲೀಸ್ ಆಯುಕ್ತರು ಈ ವೃತ್ತದಲ್ಲಿ ಸಂಚಾರ ನಿಯಂತ್ರಣ ಸಾಧಿಸಲು ಸಂಚಾರಿ ಪೊಲೀಸ್ ಅಥವಾ ನಿಯಂತ್ರಕರನ್ನು ನೇಮಿಸಲು ಮನವಿ. **–ಪಡುವಾರಹಳ್ಳಿ ಎಂ.ರಾಮಕೃಷ್ಣ, ಮೈಸೂರು.**

■ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ

ಮಾನ್ಯರೆ,

ಬಡವರ ಹಿತರಕ್ಷಣಾ ದೃಷ್ಟಿಯಿಂದ ನೋಡಿದರೆ ನೀವು ಜಾರಿ ಮಾಡಿರುವ ಈ ಗ್ಯಾರಂಟಿ ಯೋಜನೆಗಳು ಒಳ್ಳೆಯ ಕಾರ್ಯಕ್ರಮವಾಗಿವೆ. ಇದರಿಂದ ಎಷ್ಟೋ ಬಡವರಿಗೆ ಅನುಕೂಲವಾಗಿದೆ. ಈಗಲೂ ಕೆಲವರಿಗೆ ಅನುಕೂಲವೇ. ಹಾಗೆಯೇ ಸ್ವಾಭಿಮಾನದಿಂದ ಬದುಕಲು ಇವು ಅನುವು ಮಾಡಿಕೊಟ್ಟಿವೆ. ನುಡಿದಂತೆ ನಡೆದ ನೀವು ಈಗಲೂ ಮುಂದೆಯೂ ಮಾದರಿಯೇ ಸರಿ. ಕೆಲವು ಶಾಸಕರು ಅಭಿವೃದ್ಧಿ ಕುಂಠಿತ ಎಂದೂ ನೀವು ನಿಮ್ಮ ನಿಲುವನ್ನು ಬದಲಿಸಿಲ್ಲ. ನಿಮ್ಮ ಬಗ್ಗೆ ಗೌರವವಿದೆ ಹೆಮ್ಮೆಯಿದೆ.

ಆದರೆ ಈಗ ರಾಜ್ಯದ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ಶಕ್ತಿ ಯೋಜನೆಯು ಗರ್ಭಿಣಿಯರಿಗೆ, ವಿಶೇಷಚೇತನರಿಗೆ, ವೃದ್ಧರಿಗೆ ಮಾತ್ರ ಅನ್ವಯವಾಗಲಿ. ಮಿಕ್ಕವರಿಗೆ ಬೇಡ. ಗೃಹಲಕ್ಷ್ಮಿ ಸಹ ವಯೋವೃದ್ಧರಿಗೆ ಮಾತ್ರ ಸಿಗಲಿ, ಯುವನಿಧಿ ಸಹ ಬೇಡ. ಗೃಹ ಜ್ಯೋತಿ ಇರಲಿ. ಹೀಗೆ ಬೇಕು ಬೇಡಗಳ ಸಾಧ್ಯತೆಗಳನ್ನು ಅವಲೋಕಿಸಿ ಪರಿಷ್ಕರಿಸಿ, ಜಾರಿಗೊಳಿಸಿ. ಅದರಿಂದ ಉಳಿದ ಹಣವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಬಳಸಿ. ಗ್ಯಾರಂಟಿಗಳು ಕೆಲ ಅನರ್ಹರನ್ನು ತಲುಪಿ ತೆರಿಗೆ ಹಣ ಪೋಲಾಗುತ್ತಿದೆ ಎಂಬುದು ನನ್ನ ಭಾವನೆ. ಅದರ ಬದಲು ಪುಕ್ಕಟೆ ಸಿಗುವ ಬದಲಿಗೆ ದುಡಿದು ತಿನ್ನುವ ಯೋಜನೆ ಬೇಕು. ಇಲ್ಲವಾದಲ್ಲಿ ಗ್ಯಾರಂಟಿಗಳು ನಿಲ್ಲುವುದು ಬೇಡ ಎಂದಾದರೆ ಒಂದಷ್ಟು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ. ಇದರಿಂದ ಅರ್ಹರನ್ನು ಗುರುತಿಸಿ ಅವರಿಗೆ ಹಣ ನೀಡಿ. ಒಬ್ಬ ಸಾಮಾನ್ಯ ಪ್ರಜೆಯಾಗಿ ಎಲ್ಲರ ಹಿತಾಸಕ್ತಿ ಗಮನಿಸಿ ಈ ಮೂಲಕ ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. **–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ.**

■ ವರುಣ ಮುಖ್ಯ ರಸ್ತೆಯಲ್ಲಿ ಸಿಗ್ನಲ್ ಲೈಟ್ ಅಳವಡಿಸಿ



ಮಾನ್ಯರೆ,

ವರುಣ ಗ್ರಾಮದ ಸುತ್ತೂರು ರಸ್ತೆಗೆ ಹೋಗುವ ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದು, ವಾಹನ ಚಾಲಕರು ಸಂಚರಿಸಲು ತುಂಬಾ ಕಷ್ಟವಾಗಿದೆ. ಅಲ್ಲದೆ ಪಾದಚಾರಿಗಳ ಓಡಾಟಕ್ಕೆ ಅನಾನುಕೂಲವಾಗಿದೆ. ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳಿಗೆ ಆಹ್ವಾನ ನೀಡಿದಂತಾಗುತ್ತದೆ. ಆದ್ದರಿಂದ ಈ ವೃತ್ತದಲ್ಲಿ ಸಿಗ್ನಲ್ ಲೈಟ್ ಅಳವಡಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ. **–ವಿನಯಕುಮಾರ್, ವರುಣ, ಮೈಸೂರು.**

■ ಸಿಡಬ್ಲ್ಯೂಆರ್ ಸಭೆ ಏಕಪಕ್ಷೀಯ ನಿರ್ಧಾರ

ಮಾನ್ಯರೆ,

ಜುಲೈ 12ರಿಂದ 31ರವರೆಗೆ ಅಂದರೆ 20 ದಿನಗಳ ಕಾಲ ಪ್ರತಿದಿನ ಒಂದು ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಲು ಕಾವೇರಿ ನೀರು ನಿಯಂತ್ರಣ ಸಮಿತಿ ಕರ್ನಾಟಕಕ್ಕೆ ಆದೇಶಿಸಿದೆ. ರಾಜ್ಯದಲ್ಲಿ ಈಗ ತಾನೆ ಮಳೆ ಪ್ರಾರಂಭವಾಗಿದ್ದು, ಜಲಾಶಯಗಳಿಗೆ ಸ್ವಲ್ಪ ಮಟ್ಟಿಗೆ ನೀರು ಬರುತ್ತಿದೆ. ಇದುವರೆಗೂ ಇನ್ನೂ ಯಾವುದೇ ಜಲಾಶಯಗಳು ಭರ್ತಿಯಾಗಿಲ್ಲ. ವಾಸ್ತವ ಪರಿಸ್ಥಿತಿ ಗೊತ್ತಿಲ್ಲದೆ ಸಿಡಬ್ಲ್ಯೂಆರ್ ಸಭೆ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದೆ. ಇದೇ ರೀತಿ ಕರ್ನಾಟಕಕ್ಕೆ ಪದೇ ಪದೆ ಅನ್ಯಾಯವಾಗುತ್ತಲೇ ಇದೆ. ಎಲ್ಲದಕ್ಕಿಂತಲೂ ಆಶ್ಚರ್ಯಕರ ಸಂಗತಿ ಎಂದರೆ, ತಮಿಳುನಾಡು ಸರ್ಕಾರ ಮೆಟ್ಟೂರು ಜಲಾಶಯದಿಂದ ಕಳೆದ 15 ದಿನಗಳಲ್ಲಿ ಸುಮಾರು 5 ಟಿಎಂಸಿ ನೀರನ್ನು ನದಿಗೆ ಹರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈಗ ತಮಿಳುನಾಡಿಗೆ ನೀರಿನ ಅವಶ್ಯಕತೆ ಇಲ್ಲದೇ ಇದ್ದರೂ ನೀರಿಗಾಗಿ ಬೇಡಿಕೆ ಇಟ್ಟಿದ್ದಾರೆ. ಕಾವೇರಿ ನೀರು ನಿಯಂತ್ರಣ ಸಮಿತಿ ಮೊದಲು ವಾಸ್ತವ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**

■ ಹೋಟೆಲ್ ಬಳಿ ಸ್ವಚ್ಛತೆ ಕಾಪಾಡಲು ಮನವಿ

ಮಾನ್ಯರೆ,

ಮೈಸೂರಿನ ಅಬ್ದುಲ್ ಕಲಾಂ (ಹೈವೇ) ವೃತ್ತದಲ್ಲಿರುವ ಹೋಟೆಲೊಂದರ ಬಳಿ ಗ್ಯಾಸ್ ಸಿಲಿಂಡರ್‌ಗಳ ಸಂಗ್ರಹಣ, ಊಟದ ಪ್ರದೇಶ, ಕೈ ತೊಳೆಯುವ ವ್ಯವಸ್ಥೆ ಫುಟ್‌ಪಾತ್‌ನಲ್ಲೇ ನಡೆಯುತ್ತಿದೆ. ಹೋಟೆಲ್‌ನ ತ್ಯಾಜ್ಯವನ್ನು ಫುಟ್‌ಪಾತ್‌ನಲ್ಲಿ ಸಂಗ್ರಹಿಸಲಾಗುತ್ತಿದೆ. ಇದು ಡೆಂಗ್ಯೂಗೆ ಕಾರಣವಾಗಬಹುದು. ನಗರದಲ್ಲಿ ಈಗಾಗಲೇ ಡೆಂಗ್ಯೂ ಆವರಿಸಿದ್ದು, ಯಾವುದೇ ಅಹಿತಕರ ಘಟನೆ ನಡೆಯುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

–ಮಾದಪ್ಪ, ಎಂಸಿಸಿ ಪೌರಕಾರ್ಮಿಕ ಕಾಲೋನಿ, ಬನ್ನಿಮಂಟಪ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಬೆರಗು

ಎಲ್ಲಿ ಓಡುವಿರಿ.....? ನಿಲ್ಲಿ ಯುವಕರೇ.....!

ಇದೊಂದು ವಿಚಿತ್ರ ಕಾಲಘಟ್ಟ, ಇಂದು ಮಕ್ಕಳಿಗೆ ಮುಗ್ಧತೆ ಇಲ್ಲ, ಯುವಕರಿಗೆ ಬದ್ಧತೆ ಇಲ್ಲ, ಹಿರಿಯರಿಗೆ ಅವರಿಂದ ಗೌರವ ಇಲ್ಲ. 'ಬದಲಾವಣೆ ಜಗದ ನಿಯಮ' ಎಂಬುದೇನೋ ಸತ್ಯವಾದ ಮಾತು. ಕಾಲಾನುಕಾಲಕ್ಕೆ ಪೀಳಿಗೆಯಿಂದ ಪೀಳಿಗೆಗೆ ಜನರ ಜೀವನ ಶೈಲಿ, ಬದುಕಿನ ಉದ್ದೇಶ ಎಲ್ಲವೂ ಬದಲಾಗುತ್ತಲೇ ಇದೆ. ಇಂದಿನ ಯುವ ಪೀಳಿಗೆಯ ಬದುಕಿನ ಶೈಲಿಯನ್ನು ಗಮನಿಸಿದಲ್ಲಿ ಆಶ್ಚರ್ಯ ಅಷ್ಟೇ ಅಲ್ಲ, ಆತಂಕವೂ ಆಗುತ್ತದೆ. ನಮ್ಮ ದೇಶದ ಇಂದಿನ ಶಕ್ತಿಯೇ ಯುವಕರು, ಹಾಗೆಯೇ ದೌರ್ಬಲ್ಯ ಯಾವುದು ಎಂದು ಕೇಳಿದರೆ ಅದೇ ಯುವಕರು ಎನ್ನಬಹುದು. ಇಂದಿನ ಯುವಶಕ್ತಿ ಪೋಲಾಗುತ್ತಿರುವ ರೀತಿ ನೋಡಿದರೆ ಭಾರತ ದೇಶವನ್ನು ಭಗವಂತನೇ ಕಾಪಾಡಬೇಕು. ಒಂದು ಕಡೆ ಪೋಷಕರ ಒತ್ತಡಕ್ಕೆ ಬಿದ್ದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಹೆದರಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬುದ್ಧಿವಂತ ಯುವಕ–ಯುವತಿಯರಾದರೆ, ಮತ್ತೊಂದು ಕಡೆ ಆನ್‌ಲೈನ್ ಬ್ಯಾಂಕಿಂಗ್‌ನಿಂದ ಕ್ರಿಕೆಟ್ ಬೆಟ್ಟಿಂಗ್‌ಗೆ ದುಶ್ಚಟಗಳಿಗೆ ಸಾಲ ಮಾಡುವ ಯುವಕರು, ರೀಲ್ಸ್ ದುಷ್ಪರಿಣಾಮದಿಂದ ಯುವತಿಯರು ಅಮೂಲ್ಯವಾದ ಜೀವ ಕಳೆದುಕೊಳ್ಳುತ್ತಿದ್ದಾರೆ. ಯಾವ ತಪ್ಪನ್ನು ಮಾಡದೇ ಇರುವ ಪೋಷಕರು ಮಕ್ಕಳು ಮಾಡುವ ತಪ್ಪುಗಳಿಗೆ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ.

ಇಂದಿನ ಯುವ ಸಮೂಹದ ವೇಷಭೂಷಣ, ಮಾತುಕತೆ, ರೀತಿ–ನೀತಿ, ಹಾವಭಾವ, ಆಹಾರ–ವಿಹಾರ..... ಎಲ್ಲವೂ ವಿಶಿಷ್ಟ ಎನಿಸುವ ಬದಲು ವಿಚಿತ್ರ ಎನಿಸುತ್ತದೆ. ಒಂದು ಕಾಲದಲ್ಲಿ ಪಿತೃವಾಕ್ಯ ಪರಿಪಾಲಕರಾಗಿದ್ದ ಯುವಕರು ಇಂದು ಯಾರ ಮಾತನ್ನೂ ಕೇಳಿಸಿಕೊಳ್ಳದೇ ಇರುವ ಮಟ್ಟಕ್ಕೆ ಬೆಳೆದಿದ್ದಾರೆ. ಅವರನ್ನು ನಿಯಂತ್ರಿಸುವುದು ಮನೆಯಲ್ಲಿ ಪೋಷಕರಿಗೆ ತಲೆನೋವಾದರೆ, ಕಾಲೇಜಿನ ಆಡಳಿತ ಮಂಡಳಿಗೆ ಮತ್ತೊಂದು ರೀತಿಯ ತಲೆನೋವಾಗಿದ್ದಾರೆ. ಎಲ್ಲಾ ಯುವಕ–ಯುವತಿಯರು ಹೀಗೆ ಇರುತ್ತಾರೆ ಎಂದು ಹೇಳಲಾಗುವುದಿಲ್ಲ. ಅನೇಕ ಯುವಕ–ಯುವತಿಯರು ತಮಗೆ ಇರುವ ಅನಾನುಕೂಲಗಳ ನಡುವೆಯೂ ಶೈಕ್ಷಣಿಕ ಪ್ರಗತಿ ಸಾಧಿಸಿ, ಉತ್ತಮ ಕೆಲಸ ಗಿಟ್ಟಿಸಿ, ಹೆತ್ತವರಿಗೆ ಹೆಮ್ಮೆಯಾಗಿ, ದೇಶಕ್ಕೆ ಆಸ್ತಿಯಾಗಿ, ಇತರರಿಗೆ ಮಾದರಿಯಾಗಿದ್ದಾರೆ. ಆದರೆ ಅಂಥವರ ಸಂಖ್ಯೆ ಮಾತ್ರ ಕಡಿಮೆ. ಇಂದು ಬಹುತೇಕ ಯುವಕ–ಯುವತಿಯರು ಸಾಮಾಜಿಕ ಜಾಲತಾಣಗಳ ಜಾಲದಲ್ಲಿ ಸಿಲುಕಿ ನಲುಗುತ್ತಿದ್ದಾರೆ. ತಮ್ಮ ಮುಂದಿನ ಭವಿಷ್ಯದ ಕುರಿತು ಅರಿಯದೆ, ಇಂದಿನ ಮೋಜು–ಮಸ್ತಿಗೆ ಹೆಚ್ಚು ಆದ್ಯತೆ ಕೊಡುತ್ತಿದ್ದಾರೆ. ಅನೇಕ ದುರಭ್ಯಾಸಗಳನ್ನು ಒಳ್ಳೆಯ ಅಭ್ಯಾಸಗಳು ಎನ್ನುವಂತೆ ಬಿಂಬಿಸುತ್ತಿದ್ದಾರೆ. ಐಡೆಂಟಿಟಿ ಕ್ರೈಸಿಸ್‌ನಿಂದ ಬಳಲುತ್ತಿರುವ ಅನೇಕರು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಸ್ಟೇಟಸ್ ತೋರಿಸಿಕೊಳ್ಳಲು ಹೆತ್ತವರಿಂದ ಹೊರಲಾರದಷ್ಟು ಸಾಲ ಮಾಡಿಸಿ ಸ್ಕೂಟರ್, ಬೈಕ್, ದುಬಾರಿ ಮೊಬೈಲ್ ಫೋನ್ ಖರೀದಿಸುತ್ತಾರೆ. ಇಲ್ಲವೇ ತಾವೇ ಅನಗತ್ಯವಾಗಿ ಕಂಡಕಂಡ ಕಡೆ ಸಾಲ ಮಾಡಿ ಶೋಕಿ ಮಾಡುವ ಖಯಾಲಿ ಹೊಂದಿರುತ್ತಾರೆ.

ಕೆಲವು ಯುವಕ ಯುವತಿಯರಂತೂ ತಮ್ಮ ಜನ್ಮ ದಿನಾಚರಣೆಯನ್ನು ಸಿನೆಮಾ ನಟ/ನಟಿಯರಂತೆ ವಿಜೃಂಭಣೆಯಿಂದ ಆಚರಿಸಿಕೊಳ್ಳುತ್ತಾ, ಒಂದು ಕಲ್ಪನಾ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಧೂಮಪಾನ, ಮದ್ಯಪಾನ ಇಂದು ದುರಭ್ಯಾಸವೇ ಅಲ್ಲವೇನೋ ಅನ್ನುವಷ್ಟರ ಮಟ್ಟಿಗೆ ಯುವ ಸಮೂಹ ಯಾವ ಅಂಜಿಕೆ, ನಾಚಿಕೆ ಇಲ್ಲದೆ ಎಲ್ಲೆಂದರಲ್ಲಿ ಮಾಡುವ ಪರಿಪಾಠ ಹೊಂದಿದ್ದಾರೆ. ಈ ದುರಭ್ಯಾಸಗಳು ಯೌವನದ ಲಕ್ಷಣಗಳು ಎಂದು ಭಾವಿಸಿದಂತಿದೆ. ಬದುಕಿನ ಕಷ್ಟ ಸುಖಗಳನ್ನು ಸರಿಯಾಗಿ ಅರಿಯದೆ, ದೂರದೃಷ್ಟಿ ಇಲ್ಲದೆ ಇದೇ ವಯಸ್ಸು, ಹುಮ್ಮಸ್ಸು ಇಡೀ ಜೀವಮಾನ ಇರುತ್ತದೆ ಎಂಬ ಭ್ರಮೆಯಲ್ಲಿ ತೇಲುತ್ತಿರುತ್ತಾರೆ. ಈ ಬದುಕು ಸಿನೆಮಾ ಅಥವಾ ಧಾರಾವಾಹಿಯಲ್ಲ ಎಂಬ ಅರಿವಿಲ್ಲದೆ ಬದುಕುತ್ತಿರುತ್ತಾರೆ.



> “ಯುವ ಪೀಳಿಗೆ ಕೇವಲ ವಿದ್ಯಾವಂತರಾದರಷ್ಟೇ ಸಾಲದು, ಪ್ರಜ್ಞಾವಂತರಾಗುವ ಅಗತ್ಯವಿದೆ. ಗುರುಹಿರಿಯರಿಗೆ ಗೌರವಿಸುವ, ಅವರ ಮಾತುಗಳನ್ನು ಆಲಿಸುವ ಹಾಗೂ ಪಾಲಿಸುವ ಅಗತ್ಯವಿದೆ. ಹೆತ್ತವರು ಮಕ್ಕಳ ಏಳಿಗೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುತ್ತಿರುತ್ತಾರೆ, ತಮ್ಮ ಸುಖವನ್ನು ಬದಿಗೊತ್ತಿ ಮಕ್ಕಳ ಸುಖಕ್ಕಾಗಿ ಹಾತೊರೆಯುತ್ತಿರುತ್ತಾರೆ. ಅಂತಹ ಹೆತ್ತವರ ಪರಿಶ್ರಮ ಹಾಗೂ ತ್ಯಾಗವನ್ನು ಅರಿಯದೆ ದುಷ್ಟ ಜನರ ಸಹವಾಸ ಮಾಡಿ, ದುಶ್ಚಟಗಳಿಗೆ ದಾಸರಾಗಿ, ಯೌವನದ ಮದದಲ್ಲಿ ಹೆತ್ತವರ ಇಚ್ಛೆಗೆ ವಿರುದ್ಧವಾಗಿ ಪ್ರೇಮ ವಿವಾಹವಾಗಿ ಹೆತ್ತವರಿಗೂ ನೋವು ಕೊಟ್ಟು, ತಾವು ಕಷ್ಟನಷ್ಟ ಅನುಭವಿಸು ಅಗತ್ಯವಿದೆಯೇ? ಎಂಬುದನ್ನು ಚಿಂತಿಸಬೇಕು. ಗುರುಗಳು ಏನೇ ಹೇಳಿದರೂ ತಮ್ಮ ಒಳಿತಿಗಾಗಿ ಎಂಬುದನ್ನು ಅರಿಯಬೇಕು. ಸಮಾಜದ ಕುರಿತು ಒಂದು ನೈತಿಕ ಭಯ ಹೊಂದಿರಬೇಕು.

ಇಂದಿನ ದೃಶ್ಯ ಮಾಧ್ಯಮ ಯುವಕರನ್ನು ತಪ್ಪು ದಾರಿಗೆ ದೂಡುತ್ತಿದೆ ಎಂದರೆ ತಪ್ಪಾಗದು. ಮನರಂಜನೆ ಹೆಸರಿನಲ್ಲಿ ಯುವಕರು ವೀಕ್ಷಿಸುತ್ತಿರುವ ಕಾರ್ಯಕ್ರಮಗಳು ಸದಭಿರುಚಿಯಿಂದ ಕೂಡಿರದೆ ಅತಿರೇಕ, ಹಿಂಸಾಚಾರ ವಿಜೃಂಭಿಸುತ್ತದೆ, ಅಕ್ರಮ ಸಂಬಂಧ, ಅನೈತಿಕ ಸಂಬಂಧ ಸಮಾಜ ಒಪ್ಪಿಕೊಂಡಿದೆ ಎಂಬ ರೀತಿಯಲ್ಲಿ ಬಿಂಬಿಸಲಾಗುತ್ತದೆ. ಯುವಕರು ಅಂಧಾನುಕರಣೆಯಿಂದ ಎಲ್ಲವನ್ನೂ ಅನುಸರಿಸುತ್ತಿದಾರೆ. ಬಿಸಿರಕ್ತದ ಬಿರುಸಿನಲ್ಲಿ ತಾವು ಮಾಡಿದ್ದೆಲ್ಲಾ ಸರಿ, ಕೆಟ್ಟದ್ದನ್ನು ಮಾಡಿ ದಕ್ಕಿಸಿಕೊಳ್ಳಬಲ್ಲೆವು ಎಂದು ಭಾವಿಸಿದ್ದಾರೆ.

ಸಿನೆಮಾ ನಾಯಕ ನಟ ಹಾಗೂ ನಟಿಯರನ್ನು ತಮ್ಮ ರೋಲ್ ಮಾಡೆಲ್ ಆಗಿ ಇಟ್ಟುಕೊಳ್ಳುತ್ತಿರುವುದು ಯುವ ಸಮೂಹದ ಹುಚ್ಚಾಟಕ್ಕೆ ಮತ್ತೊಂದು ಕಾರಣ. ಇಂದಿನ ಯುವ ಸಮೂಹಕ್ಕೆ ಸ್ವಾತಂತ್ರ್ಯ ಹೋರಾಟಗಾರರು, ವಿವೇಕಾನಂದ, ಜಮ್‌ಶೆಡ್ ಟಾಟಾ, ಅನೇಕ ಸಾಧಕರು ರೋಲ್ ಮಾಡೆಲ್ ಆಗಿಲ್ಲ. ಯುವಕರನ್ನು ದಾರಿತಪ್ಪಿಸುವ ಉತ್ಪನ್ನಗಳ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಕ್ರಿಕೆಟ್ ಆಟಗಾರರು, ಸಿನೆಮಾ ನಾಯಕ, ನಾಯಕಿರುವ ರೋಲ್ ಮಾಡೆಲ್ ಆಗುತ್ತಿರುವುದು ದುರದೃಷ್ಟಕರ. ಬುದ್ಧಿ ಹೇಳುವ ಅಪ್ಪ–ಅಮ್ಮಂದಿರನ್ನು, ಗುರುಗಳನ್ನು ವಿಲನ್‌ಗಳಂತೆ ಕಾಣುವ ಯುವಕ/ಯುವತಿಯರು ದಾರಿ ತಪ್ಪಿಸುವವರನ್ನು ಹೀರೋಗಳಂತೆ ಸ್ವೀಕರಿಸುತ್ತಿರುವುದು ವಿಪರ್ಯಾಸ.

ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ ಎಂದು ಹೆತ್ತವರನ್ನು, ಗುರುಗಳನ್ನು ಹಾಗೂ ಅತಿಥಿಗಳನ್ನು ಗೌರವಿಸುವ ದೇಶ ನಮ್ಮದು. ತಾಯಿ–ತಂದೆಯ ನಂತರದ ಸ್ಥಾನ ಗುರುಗಳಿಗೆ ಇದೆ. ಆದರೆ ಇಂದು ಗುರುಗಳನ್ನು ವಿದ್ಯಾರ್ಥಿಗಳು ನಡೆಸಿಕೊಳ್ಳುತ್ತಿರುವ ಪರಿ ನೋಡಿದರೆ ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ. ಇತ್ತೀಚೆಗೆ ಮಂಡ್ಯ ನಗರದಲ್ಲಿ ಬುದ್ಧಿ ಹೇಳಿದ ಕಾಲೇಜು ಉಪನ್ಯಾಸಕರಿಗೆ ಕಾಲೇಜಿಗೆ ಬಂದು ಲಾಂಗ್ ಹಿಡಿದು ಹೆದರಿಸಿದ ಕಾಲೇಜು ವಿದ್ಯಾರ್ಥಿಯ ಹುಚ್ಚಾಟ ಮಾಧ್ಯಮಗಳಲ್ಲಿ ಪ್ರಸಾರವಾಯಿತು. ಲೇಖನಿ ಹಿಡಿದು ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಗಳನ್ನು ಬರೆದು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ವಿದ್ಯಾರ್ಥಿಗಳು ಕೈಯಲ್ಲಿ ಚಾಕು ಚೂರಿ ಹಿಡಿದು ಕಾಲೇಜಿಗೆ ಬಂದು ತಮ್ಮ ಬದುಕಿನ ದಿಕ್ಕನ್ನು ತೋರುವ ಗುರುಗಳಿಗೆ ಬೆದರಿಕೆ ಒಡ್ಡುತ್ತಾರೆ ಎಂದರೆ ವಿದ್ಯಾರ್ಥಿಗಳ ಮನಃಸ್ಥಿತಿ ಯಾವ ಹಂತಕ್ಕೆ ಇರಬಹುದು ಊಹಿಸಿ? ಇನ್ನು ಇದೇ ಜುಲೈ 6ರಂದು ಅಸ್ಸಾಂ ರಾಜ್ಯದಲ್ಲಿ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿಯೊಬ್ಬ ಬುದ್ಧಿ ಹೇಳಿದ ಗುರುವಿಗೆ ಚಾಕುವಿನಿಂದ ಇರಿದು ಕೊಂದ ಸುದ್ದಿ ನಿಜಕ್ಕೂ ಆಘಾತಕಾರಿಯಾದುದು. ಬುದ್ಧಿ ಹೇಳಿದ ಗುರುವಿಗೆ ಇಂತಹ ಪರಿಸ್ಥಿತಿ ಎದುರಾದರೆ ಮುಂದೆ ಗುರುಗಳಾದವರು ಬುದ್ಧಿ ಹೇಳಿ, ದಾರಿತಪ್ಪುತ್ತಿರುವ ಯುವಕರನ್ನು ಸರಿದಾರಿಗೆ ತರುವ ಸಾಹಸಕ್ಕೆ ಕೈಹಾಕವುದಾದರೂ ಹೇಗೇ? ಎತ್ತ ಸಾಗುತ್ತಿದೆ ಇಂದಿನ ಯುವಕ ಆಲೋಚನೆ, ಆಚರಣೆ ?

ಶಿಕ್ಷಣದ ಗುಣಮಟ್ಟ ಸುಧಾರಿಸಿದೆ, ಆದರೆ ಶಿಕ್ಷಿತರಾಗುತ್ತಿರುವವರ ಗುಣಮಟ್ಟ ಅಧೋಗತಿಗೆ ತಲುಪುತ್ತಿದೆ. ಶಿಕ್ಷಣ ಎಂದರೆ ಕೆಲಸ ಗಿಟ್ಟಿಸಲು ಬೇಕಾಗುವ ಸರ್ಟಿಫಿಕೇಟ್ ಪಡೆಯುವ ಮಾಧ್ಯಮ ಎಂದು ಯುವಕರು ತಿಳಿದುಕೊಂಡಿರುವುದು ಮೂರ್ಖತನ. ವಿದ್ಯಾವಂತ ಎಂದರೆ ಕೇವಲ ಅಕ್ಷರವಂತ ಎಂದು ಇಂದಿನ ಯುವ ಸಮೂಹ ಭಾವಿಸಿದಂತಿದೆ. ವಿವೇಕ, ವಿನಯ, ವಿಧೇಯತೆ ಇವುಗಳು ಅಕ್ಷರವಂತನಲ್ಲಿ ಇದ್ದರೆ ಮಾತ್ರ ಅವನು ವಿದ್ಯಾವಂತ, ಇವೆಲ್ಲವೂ ಇಲ್ಲದೆ ಕೇವಲ ಪದವಿ ಮುಗಿಸಿದಾಕ್ಷಣ ಅವನನ್ನು ವಿದ್ಯಾವಂತ ಎಂದು ಕರೆಯಲಾಗದು, ಅವನು ಅಕ್ಷರಸ್ಥ ಅಷ್ಟೇ !

ಇಂದಿನ ಪೋಷಕರಿಗೆ ವಯಸ್ಸಿಗೆ ಬಂದ ಮಕ್ಕಳು ಬಿಸಿತುಪ್ಪವಾಗಿ ಪರಿಣಮಿಸಿದ್ದಾರೆ. ತುಂಬಾ ಪ್ರೀತಿಸಿದರೆ ಹೆತ್ತವರನ್ನು ಯಾಮಾರಿಸುತ್ತಾರೆ, ತುಂಬಾ ಶಿಸ್ತಿನಿಂದ ಬೆಳೆಸಲು ಪ್ರಯತ್ನಿಸಿದರೆ ಮನೆಬಿಟ್ಟು ಹೋಗುವ ಅಥವಾ ಆತ್ಮಹತ್ಯೆಯ ಬೆದರಿಕೆ ಹಾಕುತ್ತಾರೆ. ಇರುವುದು ಒಂದೋ ಎರಡು ಮಕ್ಕಳು, ಅದರಿಂದ ಪೋಷಕರು ಬೆದರಿಸಲು ಹೆದರುತ್ತಾರೆ. ಮನೆಯಲ್ಲಿ ಇರುವ ಮಕ್ಕಳು ಏನಾಗುತ್ತಿದ್ದಾರೆ ಎಂಬ ಅರಿವು ಹೆತ್ತವರಿಗೆ ಇರುವುದಿಲ್ಲ. ಮಕ್ಕಳು ಮನೆಯಲ್ಲಿಯೇ ಇದ್ದರೂ ಮೊಬೈಲ್ ಫೋನ್ ಮೂಲಕ ಇಡೀ ಪ್ರಪಂಚದೊಂದಿಗೆ ಸಂಪರ್ಕದಲ್ಲಿರುತ್ತಾರೆ. ಎಳೆಯ ಮಕ್ಕಳಿಗೆ ಮೊಬೈಲ್ ಗೀಳು ಒಂದು ರೀತಿ ಬಾಧಿಸಿದರೆ, ಯುವಕರಿಗೆ ಮತ್ತೊಂದು ರೀತಿ ಬಾಧಿಸುತ್ತಿದೆ. ಇತ್ತೀಚೆಗೆ ಟಿಕ್‌ಟಾಕ್ ಅಥವಾ ರೀಲ್ಸ್ ಮಾಡುವ ಗೀಳು ಯುವಕರಿಗೆ ಮಿತಿಮೀರಿದೆ. ದ್ವಂದ್ವಾರ್ಥ ಸಂಭಾಷಣೆಗಳು, ಸೆನ್ಸಾರ್ ಆಗದಂತಹ ದೃಶ್ಯಗಳನ್ನು ಯುವಕರು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಿದ್ದಾರೆ. ಮುಂದಿನ ಪೀಳಿಗೆಗೆ ಇದರಿಂದ ಕೊಡುವ ಸಂದೇಶವಾದರೂ ಏನು? ಅನೇಕ ಮಕ್ಕಳು ಹಾದಿತಪ್ಪುವ ಸಾಧ್ಯತೆ ಹೆಚ್ಚಿರುತ್ತದೆ. ಅನೇಕ ಯುವತಿಯರಿಗೆ, ಗೃಹಿಣಿಯರಿಗೆ ಕೆಟ್ಟದಾಗಿ ಯುವಕರು ಕಮೆಂಟ್ ಮಾಡಿದ ಕಾರಣಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳಿವೆ. ಅಷ್ಟೇ ಅಲ್ಲ ಸಾಮಾಜಿಕ ಜಾಲತಾಣದಲ್ಲಿ ಮೋಸದಾಟವಾಡಿ ಮರ್ಯಾದಸ್ಥ ಮನೆತನದ ಹೆಣ್ಣುಮಕ್ಕಳನ್ನು ಬುಟ್ಟಿಗೆ ಹಾಕಿಕೊಂಡು ಅವರ ಬದುಕನ್ನು ಹಾಳು ಮಾಡುವ ಯುವಕರ ಸಂಖ್ಯೆ ಕಡಿಮೆ ಏನಿಲ್ಲ. ಗುರುಹಿರಿಯರ ಮಾತನ್ನು ಕೇಳದೆ ಯಾವುದೋ ಒಂದು ವಿಷಯಕ್ಕೆ ಇಷ್ಟವಾದರು ಎನ್ನುವ ಕಾರಣಕ್ಕೆ ಜವಾಬ್ದಾರಿ ಇಲ್ಲದ ವಯಸ್ಸಿನಲ್ಲಿ ಹಿಂದೆ ಮುಂದೆ ವಿಚಾರಿಸಿದೆ ಸಿನೆಮಾ ಸ್ಟೈಲ್‌ನಲ್ಲಿ ಮದುವೆಯಾಗಿ, ನಂತರ ಯಮಯಾತನೆ ಅನುಭವಿಸುತ್ತಾ ತ್ರಿಶಂಕು ಸ್ಥಿತಿಯಲ್ಲಿರುವ ಯುವತಿಯರ ಸಂಖ್ಯೆ ಅಪಾರ.

ಯುವ ಪೀಳಿಗೆ ಕೇವಲ ವಿದ್ಯಾವಂತರಾದರಷ್ಟೇ ಸಾಲದು, ಪ್ರಜ್ಞಾವಂತರಾಗುವ ಅಗತ್ಯವಿದೆ. ಗುರು–ಹಿರಿಯರಿಗೆ ಗೌರವಿಸುವ, ಅವರ ಮಾತುಗಳನ್ನು ಆಲಿಸಿ ಅನುಸರಿಸುವ ಅಗತ್ಯವಿದೆ. ಹೆತ್ತವರು ಮಕ್ಕಳ ಏಳಿಗೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುತ್ತಿರುತ್ತಾರೆ, ತಮ್ಮ ಸುಖವನ್ನು ಬದಿಗೊತ್ತಿ ಮಕ್ಕಳ ಸುಖಕ್ಕಾಗಿ ಹಾತೊರೆಯುತ್ತಿರುತ್ತಾರೆ. ಅಂತಹ ಹೆತ್ತವರ ಪರಿಶ್ರಮ ಹಾಗೂ ತ್ಯಾಗವನ್ನು ಅರಿಯದೆ ದುಶ್ಚಟಗಳಿಗೆ ದಾಸರಾಗಿ, ದುಷ್ಟ ಜನರ ಸಹವಾಸ ಮಾಡಿ, ಯೌವನದ ಮದದಲ್ಲಿ ಹೆತ್ತವರ ಇಚ್ಛೆಗೆ ವಿರುದ್ಧವಾಗಿ ಪ್ರೇಮ ವಿವಾಹವಾಗಿ ಹೆತ್ತವರಿಗೂ ನೋವು ಕೊಟ್ಟು, ತಾವು ಕಷ್ಟನಷ್ಟ ಅನುಭವಿಸು ಅಗತ್ಯವಿದೆಯೇ ಎಂಬುದನ್ನು ಚಿಂತಿಸಬೇಕು. ಗುರುಗಳು ಏನೇ ಹೇಳಿದರೂ ತಮ್ಮ ಒಳಿತಿಗಾಗಿ ಎಂಬುದನ್ನು ಅರಿಯಬೇಕು.

ಯುವ ಜನತೆ ದೇಶದ ಆಸ್ತಿ. ವಯಸ್ಸಿನಲ್ಲಿ ಯಾವುದಾದರೂ ಉದ್ಯೋಗವನ್ನು ಮಾಡಿ ದೇಶದ ಪ್ರಗತಿಗೆ ಶ್ರಮಿಸಬೇಕು. ಕಾಲಹರಣ ಮಾಡುತ್ತಾ, ನಿರುದ್ಯೋಗಿಗಳಾಗಿ ಮನೆಗೂ ಹೊರೆಯಾಗುವುದಲ್ಲದೆ ದೇಶಕ್ಕೂ ಹೊರೆಯಾಗಬಾರದು. ಮೀಸೆ ಬಂದಾಕ್ಷಣ ಬುದ್ಧಿ ಬಂತು ಎಂದರ್ಥವಲ್ಲ, ಪ್ರಜ್ಞೆ, ವಿವೇಕ ಇರಬೇಕು. ಮನುಷ್ಯ ಸಂಘ ಜೀವಿಯಾದ್ದರಿಂದ ಸಮಾಜದ ನಡುವೆಯೇ ಇರಬೇಕು. ಸಮಾಜದ ಕುರಿತು ಒಂದು ನೈತಿಕ ಭಯ ಇರಬೇಕು. ಆಗ ಮಾತ್ರ ಯುವಕರು ಸರಿದಾರಿಯಲ್ಲಿ ನಡೆಯಲು ಸಾಧ್ಯ, ಏನಂತೀರಿ?

ಪದ ತಾಂಬೂಲ:

ಯುವಕರು ಶಕ್ತಿ ಹಾಗೂ ಸಮಯವನ್ನು ಹುಚ್ಚು ಸಾಹಸಕ್ಕೆ ಬಳಸುವ ಬದಲು ಸಾಧನೆ ಮಾಡಲು ಬಳಸಿದರೆ ಅದ್ಭುತ ಸಾಧನೆಯಾಗುತ್ತದೆ !

ಬಸವಣ್ಣ, ಅಲ್ಲಮ ಪ್ರಭು ಮಾರ್ಗದಲ್ಲಿ ಸಾಗಿದ ಹಳಕಟ್ಟಿ ಮಹಾನ್ ವ್ಯಕ್ತಿ

ಡಾ.ಫ.ಗು.ಹಳಕಟ್ಟಿ ಜಯಂತಿಯಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬಣ್ಣನೆ

ಮೈಸೂರು, ಜು.14(ಜಿಎ)–ಬಸವಣ್ಣ ಮತ್ತು ಅಲ್ಲಮ ಪ್ರಭು ಅವರು ಜಗತ್ತಿಗೆ ಮೊದಲ ಪ್ರಜಾಪ್ರಭುತ್ವವನ್ನು ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ ಫ.ಗು.ಹಳಕಟ್ಟಿಯವರು ಮಹಾನ್ ವ್ಯಕ್ತಿ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಟರಾಜ ಸಭಾ ಮಂಟಪದಲ್ಲಿ ಏರ್ಪಡಿಸಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ, ಸಮಾನತೆ ಜಾರಿಗಾಗಿ ಫ.ಗು.ಹಳಕಟ್ಟಿಯವರು ಸಾಕಷ್ಟು ಶ್ರಮಿಸಿದ್ದಾರೆ ಎಂದರು.

ಶೇ.95ರಷ್ಟು ಅನಕ್ಷರಸ್ಥರೇ ತುಂಬಿದ ವಿಜಯಪುರ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಮನೆ–ಮನೆಗಳಿಗೆ ಹೋಗಿ ಪೋಷಕರ ಮನವೊಲಿಸಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬಂದು ಅವರಿಗೆ ಶಿಕ್ಷಣ ನೀಡಿದ ಹಳಕಟ್ಟಿಯವರು ಸಿದ್ದೇಶ್ವರ ಬ್ಯಾಂಕ್ ಸ್ಥಾಪನೆ ಮಾಡಿ ಬಡವರಿಗೆ, ರೈತರಿಗೆ ಸಾಲ ಕೊಡುವ ಪದ್ಧತಿಯನ್ನು ಶುರು ಮಾಡಿದರು. ಅಂತಹವರ ವಿಚಾರಗಳು ಮುಂದಿನ ಜನಾಂಗಕ್ಕೆ ತಲುಪಬೇಕಾದರೇ ಈಗಿನ ಪೀಳಿಗೆಯವರು ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ನಟರಾಜ ಸಭಾ ಮಂಟಪದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಭಾನುವಾರ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಿಸಲಾಯಿತು.

ವಚನ ಪಿತಾಮಹ ಹಳಕಟ್ಟಿಯವರು, ಬಾಲ್ಯದಲ್ಲಿ ವಾಸವಿದ್ದ ಧಾರವಾಡದ ಮನೆಯನ್ನು ಸ್ಮಾರಕವನ್ನಾಗಿ ರೂಪಿಸಲು ಚಿಂತನೆ ನಡೆಸಲಾಗಿದೆ. ಕಂಚಿನ ಮೂರ್ತಿಯನ್ನು ಸ್ಥಾಪನೆ ಮಾಡಬೇಕು ಎನ್ನುವ ಚಿಂತನೆಯನ್ನು ನಾವು ನಾಲ್ಕರು ಮಂದಿ ಜೊತೆಗೂಡಿ ಆಲೋಚನೆ ಮಾಡಿದ್ದೇವೆ. ಸ್ಮಾರಕ ನಿರ್ಮಾಣ ಮಾಡಲು ಎಲ್ಲರ ಸಹಕಾರವೂ ಮುಖ್ಯವಾಗಿದೆ ಎಂದು ತಿಳಿಸಿದರು.

ಲಿಂಗಾಯತರಲ್ಲಿ ಇರುವ ಒಳಪಂಗಡಗಳು ಇವ ನಮ್ಮವ ಎನ್ನುವ, ಇವ ನಮ್ಮವ ಬಸವಣ್ಣನ ವಚನವನ್ನು ಪಾಲನೆ ಮಾಡಿ, ಎಲ್ಲರೂ ಒಂದಾಗಬೇಕು. ತನ್ಮೂಲಕ ಅಣ್ಣ ಹುಟ್ಟು ಹಾಕಿದ ಸಮಾನತೆಯನ್ನು ರಾಷ್ಟ್ರವ್ಯಾಪಿಗೊಳಿಸಬೇಕು. ನಿಜಲಿಂಗಪ್ಪನವರ ಕಾಲದಲ್ಲಿ 103 ಶಾಸಕರು ಆರಿಸಿ ಬರುತ್ತಿದ್ದರು. ಆಗ ಒಳಪಂಗಡಗಳ ಬಗ್ಗೆ ಯಾರು ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗಿನ ಪರಿಸ್ಥಿತಿ ನೋಡಿದರೇ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ ಎಂದರು.

ಒಳಪಂಗಡಗಳಿಗೆ ಒಂದೊಂದು ಪ್ರವರ್ಗಗಳಲ್ಲಿ ಮೀಸಲಾತಿಯನ್ನು ಕೇಳುವುದರಿಂದ ನಮ್ಮಲ್ಲಿನ ಒಗ್ಗಟ್ಟು ಒಡೆದು ಹೋಗುತ್ತಿದೆ. ನಾವೆಲ್ಲರು ಒಂದೇ ಎಂಬ ಭಾವನೆಯಿಂದ ನಮ್ಮಲ್ಲಿನ ಮಕ್ಕಳನ್ನು ಎಲ್ಲರೂ ಗುರುತಿಸಿ, ಪ್ರೋತ್ಸಾಹಿಸಿ ಅವರನ್ನು ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಹೋಗುವಂತೆ ಮಾಡಬೇಕು. ಮಹಿಳೆಯರನ್ನು ಸಬಲೀಕರಣ ಮಾಡಬೇಕು. ಜಾತಿಯ ಎಲ್ಲೆಯನ್ನು ಮೀರಿ ಕಾಯಕವೇ ಕೈಲಾಸವೆನ್ನುವ ತತ್ವದಂತೆ ಎಲ್ಲರೂ ದುಡಿದು, ಹಂಚಿ ತಿನ್ನುವುದನ್ನು ರೂಢಿಸಿಕೊಂಡು ಸಮಾಜವನ್ನು ಒಗ್ಗಟ್ಟುಗೊಳಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೊಸಮಠದ ಚಿದಾನಂದ ಸ್ವಾಮೀಜಿ, ನೀಲಕಂಠ ಮಠದ ಸಿದ್ಧಮಲ್ಲಸ್ವಾಮೀಜಿ, ಕುದೇರು ಮಠದ ಗುರುಶಾಂತಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಡಾ.ಫಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಮದಭಾವಿ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ.ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್.ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ.ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ, ಕಲಾವಿದ ಶಿವಲಿಂಗಪ್ಪ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶ - ವಿದೇಶ

ಯುಎಇ ದೇಶದ ರಸ್ತೆಯೊಂದಕ್ಕೆ ಭಾರತೀಯ ಮೂಲದ ವೈದ್ಯರ ಹೆಸರು: 6 ದಶಕಗಳ ಸಾರ್ಥಕ ಸೇವೆಗೆ ಗೌರವ



ಅಬುಧಾಬಿ (ಯುಎಇ): ಸಂಯುಕ್ತ ಅರಬ್ ಸಂಸ್ಥಾನದ ವೈದ್ಯಕೀಯ ವಲಯದಲ್ಲಿ ಸುಮಾರು 6 ದಶಕಗಳ ಕಾಲ ಸೇವೆ ಸಲ್ಲಿಸಿರುವ ಭಾರತೀಯ ಮೂಲದ ವೈದ್ಯ ಡಾ.ಜಾರ್ಜ್ ಮ್ಯಾಥ್ಯೂ ಅವರಿಗೆ ಯುಎಇ ಸರ್ಕಾರ ಗೌರವಿಸಿದೆ. 84 ವರ್ಷ ವಯಸ್ಸಿನ ಡಾ.ಜಾರ್ಜ್ ಮ್ಯಾಥ್ಯೂ ಅವರ ಹೆಸರನ್ನು ಇಲ್ಲಿನ ರಸ್ತೆಯೊಂದಕ್ಕೆ ನಾಮಕರಣ ಮಾಡಿದೆ. ಯುಎಇ ದೇಶದ ಅಲ್ ಮಫ್ರಾಕ್ ಪ್ರದೇಶದಲ್ಲಿ ಇರುವ ಶೇಖ್ ಶಖ್‌ಬೌತ್ ಮೆಡಿಕಲ್ ಸಿಟಿ ಬಳಿ ಇರುವ ರಸ್ತೆಗೆ ಇದೀಗ ಡಾ. ಜಾರ್ಜ್ ಮ್ಯಾಥ್ಯೂ ಅವರ ಹೆಸರನ್ನು ಇಡಲಾಗಿದೆ. ಸಂಯುಕ್ತ ಅರಬ್ ಸಂಸ್ಥಾನದ ಅಭಿವೃದ್ಧಿಗೆ ಶ್ರಮಿಸಿದವರ ಹೆಸರುಗಳನ್ನು ರಸ್ತೆಗೆ ನಾಮಕರಣ ಮಾಡುವ ಯೋಜನೆಯನ್ನು ಯುಎಇ ಸರ್ಕಾರದ ಮುನ್ಸಿಪಾಲ್ಟಿ ಹಾಗೂ ಸಾರಿಗೆ ಇಲಾಖೆ ರೂಪಿಸಿದ್ದು, ಈ ಯೋಜನೆ ಅನ್ವಯ ಡಾ.ಜಾರ್ಜ್ ಮ್ಯಾಥ್ಯೂ ಅವರಿಗೆ ಗೌರವ ಸಲ್ಲಿಸಲಾಗಿದೆ. ಅಚ್ಚರಿಯ ಸಂಗತಿ ಎಂದರೆ 1967ರಲ್ಲಿ ಡಾ.ಜಾರ್ಜ್ ಮ್ಯಾಥ್ಯೂ ಅವರು ಯುಎಇ ದೇಶಕ್ಕೆ ವಲಸೆ ಹೋದ ಸಂದರ್ಭದಲ್ಲಿ ಆ ದೇಶದಲ್ಲಿ ರಸ್ತೆ, ಆಸ್ಪತ್ರೆ ಸೇರಿದಂತೆ ಯಾವುದೇ ಮೂಲಸೌಕರ್ಯಗಳೂ ಇರಲಿಲ್ಲ. ಇದೀಗ ಅಭಿವೃದ್ಧಿಯ ಉತ್ತುಂಗದಲ್ಲಿರುವ ಯುಎಇ ದೇಶದ ರಸ್ತೆಗೆ ಡಾ.ಜಾರ್ಜ್ ಮ್ಯಾಥ್ಯೂ ಅವರ ಹೆಸರಿಡಲಾಗಿದೆ.

ಅನಂತ್ ಅಂಬಾನಿ ಅದ್ಧೂರಿ ಮದುವೆಯಲ್ಲಿ ಡಿಕೆಶಿ, ಪರಮೇಶ್ವರ್ ಭಾಗಿ



ಮುಂಬೈ: ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಕಿರಿಯ ಮಗ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹವು ಶುಕ್ರವಾರ ಅದ್ಧೂರಿಯಾಗಿ ನಡೆಯಿತು. ದೇಶ, ವಿದೇಶಗಳಿಂದ ಬಂದಿದ್ದ ಸಾವಿರಾರು ಸಂಖ್ಯೆಯ ಅತಿಥಿಗಳು ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದರು. ರಾಜಕೀಯ ಕ್ಷೇತ್ರದ ಹಲವು ಗಣ್ಯರು ಆಗಮಿಸಿ ನವ ದಂಪತಿಗೆ ಆಶೀರ್ವದಿಸಿದರು. ಶನಿವಾರ ಶುಭಾಶೀರ್ವಾದ ಕಾರ್ಯಕ್ರಮ ನಡೆದಿದ್ದು, ಇದರಲ್ಲಿ ಖುದ್ದು ಪ್ರಧಾನಿ ಮೋದಿ ಆಗಮಿಸಿ, ನವ ದಂಪತಿಗೆ ಶುಭ ಕೋರಿದ್ದರು. ಇದರ ಜೊತೆಗೆ ದೇಶದ ಅನೇಕ ರಾಜಕಾರಣಿಗಳು ಸಹ ಭಾಗಿಯಾಗಿದ್ದು, ವಿಶೇಷವಾಗಿ ಕರ್ನಾಟಕದಿಂದ ಡಿಸಿಎಂ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕೂಡ ಭಾಗಿಯಾಗಿದ್ದರು. ಹಿರಿಯ ವಕೀಲ, ಕಾಂಗ್ರೆಸ್ ನಾಯಕ ಕಪಿಲ್ ಸಿಬಲ್ ಮತ್ತು ಡಿಕೆ ಶಿವಕುಮಾರ್ ಅನಂತ್ ಅಂಬಾನಿ ಮದುವೆಯಲ್ಲಿ ಭಾಗಿಯಾಗಿರುವ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹ ಸಮಾರಂಭವು ಅದ್ಧೂರಿಯಾಗಿ ಭಾರತೀಯ ಪರಂಪರೆಯನ್ನು ಪ್ರತಿಬಿಂಬಿಸುವಂತೆ ಮಾಡಲಾಗಿತ್ತು.

ತಿರುಮಲ: ಒಂದೇ ಫೋನ್ ನಂಬರ್‌ನಿಂದ 110 ರೂಂ ಬುಕ್; ಮಧ್ಯವರ್ತಿಗಳ ಕೈವಾಡ



ತಿರುಪತಿ: ಟಿಟಿಡಿ ಇತ್ತೀಚೆಗೆ ರೂ.300 ವಿಶೇಷ ಪ್ರವೇಶ ದರ್ಶನ, ವಸತಿ, ಇತರ ಸೇವೆಗಳು, ವರ್ಚುವಲ್ ಸೇವೆಗಳು, ಆಫ್‌ಲೈನ್ ಎಸ್‌ಎಸ್‌ಡಿ ಟೋಕನ್‌ಗಳು, ವಸತಿ ಮತ್ತು ಇತರ ಸೇವೆಗಳ ಆನ್‌ಲೈನ್ ಬುಕಿಂಗ್‌ಗಳ ಕುರಿತು ತನಿಖೆ ನಡೆಸಿದೆ. ಈ ತನಿಖೆಯಲ್ಲಿ ಮಧ್ಯವರ್ತಿಗಳು ಒಂದೇ ಮೊಬೈಲ್ ನಂಬರ್ ಮತ್ತು ಮೇಲ್ ಐಡಿ ಬಳಸಿ ಬಲ್ಕ್ ಬುಕ್ಕಿಂಗ್ ಮಾಡಿರುವುದು ತಿಳಿದು ಬಂದಿದೆ. ಮಧ್ಯವರ್ತಿಗಳಿಂದ ಒಂದೇ ಮೊಬೈಲ್ ನಂಬರ್ ಮೂಲಕ 110 ಕೊಠಡಿಗಳು ಬುಕ್ ಆಗಿವೆ. ಅದೇ ರೀತಿ ಆನ್‌ಲೈನ್ ಬುಕಿಂಗ್‌ನಲ್ಲಿ ಒಂದೇ ಮೊಬೈಲ್ ಸಂಖ್ಯೆ ಬಳಸಿ 807 ವಸತಿ ಬುಕ್ಕಿಂಗ್, ಒಂದೇ ಇಮೇಲ್ ಐಡಿಯಿಂದ 926 ವಸತಿ ರೂಮ್‌ಗಳ ಬುಕಿಂಗ್‌ಗಳನ್ನು ಆನ್‌ಲೈನ್‌ನಲ್ಲಿ ಮಾಡಲಾಗಿದೆ. ಒಂದೇ ಮೊಬೈಲ್ ಸಂಖ್ಯೆ ಬಳಸಿ ಒಂದು ವರ್ಷದಲ್ಲಿ 1,279 ಡಿಪ್ ನೋಂದಣಿಗಳು, ಸಿಂಗಲ್ ಮೇಲ್ ಐಡಿ ಬಳಸಿ ವರ್ಷದಲ್ಲಿ 48 ಡಿಪ್ ನೋಂದಣಿಗಳು, 14 ಎಸ್‌ಎಸ್‌ಡಿ ಸರ್ವದರ್ಶನ್ ಟೋಕನ್‌ಗಳನ್ನು ಒಂದೇ ಐಡಿ ಪ್ರೂಫ್ ಬಳಸಿ ಮಾಡಿರುವುದು ಕಂಡುಬಂದಿದೆ.

ಬಿಎಸ್‌ಪಿ ರಾಜ್ಯಾಧ್ಯಕ್ಷರ ಹತ್ಯೆ ಆರೋಪಿ ಎನ್‌ಕೌಂಟರ್ ಮಾಡಿದ ತಮಿಳುನಾಡು ಪೊಲೀಸ್


ಕೆ.ಆರ್ಮ್‌ಸ್ಟ್ರಾಂಗ್

ಚೆನ್ನೈ: ತಮಿಳುನಾಡು ಬಹುಜನ ಸಮಾಜ ಪಕ್ಷದ ರಾಜ್ಯಾಧ್ಯಕ್ಷ ಕೆ.ಆರ್ಮ್‌ಸ್ಟ್ರಾಂಗ್ ಹತ್ಯೆ ಆರೋಪಿಯನ್ನು ತಮಿಳುನಾಡು ಪೊಲೀಸರು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ. ಆರೋಪಿ ಕೆ ತಿರುವೆಂಗಡಂ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆಯ ಭಾಗವಾಗಿ ಆರೋಪಿ ಕೆ ತಿರುವೆಂಗಡಂನನ್ನು ಉತ್ತರ ಚೆನ್ನೈನ ಒಂದು ಸ್ಥಳಕ್ಕೆ ಪೊಲೀಸರು ಕರೆದೊಯ್ದಿದ್ದರು. ಸ್ಥಳದಲ್ಲಿ ಬಚ್ಚಿಟ್ಟಿದ್ದ ಆಯುಧಗಳನ್ನು ಪತ್ತೆ ಹಚ್ಚಿದಾಗ ಆತ ಪೊಲೀಸರ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಅಷ್ಟೆ ಅಲ್ಲದೆ ಪೊಲೀಸ್ ಅಧಿಕಾರಿಯ ಮೇಲೆ ಗುಂಡು ಹಾರಿಸಿದ್ದಾನೆ ಎಂದು ತಿಳಿಸಿದ್ದಾರೆ.

ಪೊಲೀಸರು ಆರೋಪಿ ತಿರುವೆಂಗಡಂ ಮೇಲೆ ಗುಂಡು ಹಾರಿಸಿದ ನಂತರ ಆತನನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೆ ಆರೋಪಿ ಮೃತಪಟ್ಟಿದ್ದಾನೆ ಎಂದು ವೈದ್ಯರು ಖಚಿತಪಡಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಯಕ್ವಾಡ್ ಕ್ಯಾನ್ಸರ್ ಚಿಕಿತ್ಸೆಗೆ ಬಿಸಿಸಿಐನಿಂದ ಕೋಟಿ ರೂ. ನೆರವು



ನವದೆಹಲಿ: ರಕ್ತದ ಕ್ಯಾನ್ಸರ್‌ನಿಂದ ಲಂಡನ್‌ನ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾರತದ ಮಾಜಿ ಕೋಚ್ ಅಂಶುಮಾನ್ ಗಾಯಕ್ವಾಡ್ ಅವರ ಚಿಕಿತ್ಸೆಗಾಗಿ 1 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಬಿಸಿಸಿಐ ನಿರ್ಧರಿಸಿದೆ. ಗಾಯಕ್ವಾಡ್ ಅವರಿಗೆ ನೆರವಾಗುವಂತೆ ಟೀಂ ಇಂಡಿಯಾ ಮಾಜಿ ನಾಯಕ ಕಪಿಲ್ ದೇವ್ ಹಾಗೂ ಸಂದೀಪ್ ಪಾಟೀಲ್ ಮನವಿ ಮಾಡಿದ ಬೆನ್ನಲ್ಲೇ ಬಿಸಿಸಿಐ ಈ ನಿರ್ಧಾರಕ್ಕೆ ಬಂದಿದೆ. ಕ್ಯಾನ್ಸರ್‌ನಿಂದ ಬಳಲುತ್ತಿರುವ ಭಾರತದ ಹಿರಿಯ ಕ್ರಿಕೆಟಿಗ ಅಂಶುಮಾನ್ ಗಾಯಕ್ವಾಡ್ ಅವರಿಗೆ ಆರ್ಥಿಕ ನೆರವು ನೀಡಲು ತಕ್ಷಣವೇ 1 ಕೋಟಿ ರೂ. ಬಿಡುಗಡೆ ಮಾಡುವಂತೆ ಜಯ್ ಶಾ ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸೂಚನೆ ನೀಡಿದ್ದಾರೆ ಎಂದು ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಹೇಳಿಕೆಯಲ್ಲಿ ತಿಳಿಸಿದೆ. ಗಾಯಕ್ವಾಡ್ ಅವರ ಪುತ್ರ ಗಾಯಕ್ವಾಡ್ ಲಂಡನ್‌ನ ಕಿಂಗ್ಸ್ ಕಾಲೇಜು ಆಸ್ಪತ್ರೆಯಲ್ಲಿ ರಕ್ತದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಲು ಮತ್ತು ನೆರವು ನೀಡಲು ಗಾಯಕ್ವಾಡ್ ಅವರ ಕುಟುಂಬದೊಂದಿಗೆ ಜಯ್ ಶಾ ಮಾತನಾಡಿದ್ದಾರೆ. ಈ ಬಿಕ್ಕಟ್ಟಿನ ಸಮಯದಲ್ಲಿ ಮಂಡಳಿಯು ಗಾಯಕ್ವಾಡ್ ಅವರ ಕುಟುಂಬದ ಬೆಂಬಲಕ್ಕೆ ನಿಂತಿದೆ ಮತ್ತು ಗಾಯಕ್ವಾಡ್ ಅವರ ತ್ವರಿತ ಚೇತರಿಕೆಗೆ ಅಗತ್ಯವಾದ ಎಲ್ಲ ನೆರವನ್ನು ಮಾಡುತ್ತದೆ ಎಂದು ಬಿಸಿಸಿಐ ಹೇಳಿದೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕರಾಗಿ ಗೌರವ್ ಗೊಗೊಯ್ ನೇಮಕ



ನವದೆಹಲಿ, ಜು.14– ಲೋಕಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕರಾಗಿ ಗೌರವ್ ಗೊಗೊಯ್ ಅವರನ್ನು ನೇಮಿಸಲಾಗಿದೆ.

ಈ ಸಂಬಂಧ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪತ್ರ ಬರೆದಿದ್ದು, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉಪ ನಾಯಕ, ಮುಖ್ಯ ಸಚೇತಕ ಮತ್ತು ಇಬ್ಬರು ವಿಪ್‌ಗಳನ್ನು ನೇಮಿಸುವ ಕುರಿತು ಮಾಹಿತಿ ನೀಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಗೊಗೊಯ್ ಲೋಕಸಭೆಯಲ್ಲಿ ಪಕ್ಷದ ಉಪ ನಾಯಕರಾಗಿದ್ದರೆ, ಕೇರಳದಿಂದ ಎಂಟು ಬಾರಿ ಸಂಸದರಾಗಿರುವ ಕೋಡಿಕುನ್ನಿಲ್ ಸುರೇಶ್ ಪಕ್ಷದ ಮುಖ್ಯ ಸಚೇತಕರಾಗಿರುತ್ತಾರೆ. ವಿರುದುನಗರ ಸಂಸದ ಮಾಣಿಕ್ಕಂ ಟ್ಯಾಗೋರ್ ಮತ್ತು ಕಿಶನ್‌ಗಂಜ್ ಸಂಸದ ಮೊಹಮ್ಮದ್ ಜಾವೇದ್ ಲೋಕಸಭೆಯಲ್ಲಿ ಪಕ್ಷದ ವಿಪ್ ಆಗಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಈ ಹಿಂದೆ ಪಕ್ಷವು ರಾಹುಲ್ ಗಾಂಧಿ ಅವರನ್ನು ವಿರೋಧ ಪಕ್ಷದ ನಾಯಕ ಎಂದು ಹೆಸರಿಸಿದ ನಂತರ ಅವರನ್ನು ಆ ಸ್ಥಾನಕ್ಕೆ ನೇಮಿಸಲಾಯಿತು. ರಾಹುಲ್ ಗಾಂಧಿ ಅವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಮತ್ತು India ಮೈತ್ರಿಕೂಟ ಪಕ್ಷಗಳು ಲೋಕಸಭೆಯಲ್ಲಿ ಜನರ ಸಮಸ್ಯೆಗಳಿಗೆ ಶಕ್ತಿಯುತವಾಗಿ ಹೋರಾಡುತ್ತವೆ ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವಿಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

ಮಾರಾಟಕ್ಕಿದೆ
ಪ್ರವಾಸಿ ತಾಣವಾದ ಬಲಮುರಿ ಫಾಲ್ಸ್‌ಗೆ ಹೊಂದಿಕೊಂಡಂತಿರುವ ರೆಸಾರ್ಟ್‌ಗೆ ಅಲಿಲೇಷನ್ ಆಗಿರುವ ತಲಾ 5 ಎಕರೆಯಂತೆ ಪ್ರತ್ಯೇಕ ಎರಡು ಕಡೆಯಿಂದ ಒಟ್ಟು 10 ಎಕರೆ ಜಮೀನು ಮಾರಾಟಕ್ಕಿದೆ.
9980617254

ಶ್ರೀ ಗೌರೀಶಂಕರ ಟೂರಿಸ್ಟ್
4-8-24 (1 ದಿನ): ಕೋಟಿಲಿಂಗ, ಘಾಟಿ ಸುಬ್ರಮಣ್ಯ, ಇಶಾ ಫೌಂಡೇಷನ್.
29-8-2024 (4 ದಿನ): ಉಜ್ಜಯಿನಿ, ಇಂದೋರ್, ಓಂಕಾರೇಶ್ವರ.
14-9-24 ಮತ್ತು 4-10-24 (6 ದಿನ): ಕಾಶಿ, ಅಯೋಧ್ಯೆ, ಗಯಾ, ಪ್ರಯಾಗ್‌ರಾಜ್. (ವಿಮಾನ, ಬಸ್, ಊಟ, ರೂಂ)
Mob: 9620002114

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

NGO SERVICES
- Regn & Renewal of Society/Trust
- Accounts
- Income Tax Filing / 80G / 12AA
- NGO Darpan Registration

Call Murthy Mob:
9591182589
7259972615

FILE YOUR IT RETURN
- Early Return
- Avoid Interest & Penalty
- Proof of Income
- Quick loan Approval

Call Murthy Mob:
9591182589
7259972615

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಉದ್ಯೋಗ ಮತ್ತು ತರಬೇತಿ
- ವೀಡಿಯೋ ಎಡಿಟಿಂಗ್
- ಕ್ಯಾಮೆರಾ ಮನ್
- ನಿರೂಪಕಿಯರು

ತರಬೇತಿ ಅವಧಿಯಲ್ಲಿ ಶಿಷ್ಯವೇತನ ಸಿಗುತ್ತದೆ. ಕನಿಷ್ಠ ವಿದ್ಯಾರ್ಹತೆ: SSLC/PUC
Call Murthy Mob:
9591182589
7090499000

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಎಂ.ಇ.ಎಸ್ ಕೈಗಾರಿಕಾ ತರಬೇತಿ ಸಂಸ್ಥೆ
ತಿಲಕ ನಗರ, ಮೈಸೂರು-01 ರಲ್ಲಿ
Electrician, Electronics Mechanic & Fitter
ವೃತ್ತಿಗಳಲ್ಲಿ ಕೆಲವೊಂದು ಸೀಟುಗಳು ಮಾತ್ರ ಲಭ್ಯವಿದೆ ಕೂಡಲೇ ಸಂಪರ್ಕಿಸಿ
0821-2494654
9844403929

CHANGE OF NAME
I, RAMESH KOTIAN, S/o. Late BAIKALA aged 59 years, residing at No. 63. 2nd Main, Gokulam 3rd Stage. North of Nanda Gokula, Mysore-570002, Karnataka, do hereby solemnly affirm & state on oath that, I have changed my name from RAMESH BAIKALA to RAMESH KOTIAN on my own free will vide affidavit sworn in before Notary C. Mangala on 13/07/2024. In future in all deeds dealings & transactions whatsoever, I will be identified as RAMESH KOTIAN.
Sd/- RAMESH KOTIAN

ಟೀಚರ್ಸ್ ಟ್ರೇನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ?
SSLC ಪಾಸ್ PUC,
Degree ಪಾಸ್/ಫೇಲ್ !
NURSERY TEACHERS TRAINING
ಟ್ರೈನಿಂಗ್ ನಂತರ ತಕ್ಷಣ ಕೆಲಸ ಬನ್ನಿ, ಸೇರಿ, ಪಾಸಾಗಿ , ಸಂಪಾದಿಸಿ
I PUC ಓದುತ್ತಿರುವವರು ಸಹ ಸೇರಬಹುದು
ವಿವರಗಳಿಗೆ Watsapp/Call
9113980741

ADMISSION OPEN
Govt.of Karnataka Dept. of Tourism
FOOD CRAFT INSTITUTE-MYSURU
EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
Mob: 7676844160

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86,000.
8147560344, 7892046990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು 35 ರೊಳಗೆ, ನಮ್ಮಲ್ಲೇ ಉಳಿದುಕೊಳ್ಳಲು ಸ್ಥಳವಿದೆ. ಸ್ಥಳ: ಬನ್ನಿಮಂಟಪ. ಸಂಪರ್ಕಿಸಿ:
Mob: 9449780098

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ತಾರಸಿ ಸೋರುವಿಕೆ ಬಾತ್ ರೂಂ ಲೀಕೇಜ್ ಸಂಪ್ ಲೀಕೇಜ್ ಸರಿ ಪಡಿಸಲಾಗುವುದು
8971781855

ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ ಪುರುಷರಿಗೆ - 6 ಹುದ್ದೆ (25 ರಿಂದ 55 ವರ್ಷ / ಊಟ / PF / ESI 12,000 ಸಂಬಳವಿರುತ್ತದೆ)
2) ಸೆಕ್ಯೂರಿಟಿ ಗಾರ್ಡ್ಸ್ - 6 ಹುದ್ದೆ (25 ರಿಂದ 35 ವರ್ಷ / ಊಟ / 15,000 ಸಂಬಳ. ಮೈಸೂರು ಸುತ್ತಮುತ್ತ ಇರುವವರಿಗೆ ಆದ್ಯತೆ.)
9972837203, 9036745292

ತಕ್ಷಣ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರು ಮತ್ತು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ ಮತ್ತು ಮನೆ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ. ಸಂಪರ್ಕಿಸಿ:
8105249880, 7795285485

Sudarshan Saur
SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ-ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟಾನಿಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಕೇರಳ ಕೊಳ್ಳೇಗಾಲದ ಶ್ರೀ ಜ್ಯೋತಿಷ್ಯರು
ಪಂ॥ ಎಸ್.ರಾಜು ಗುರೂಜಿ
9902239655
ಸ್ತ್ರೀ-ಪುರುಷ ಪ್ರೇಮ, ಮದುವೆ, ಸಂತಾನ, ಸಾಲಬಾಧೆ, ವ್ಯಾಪಾರ, ಶತ್ರುಕಾಟ, ಪ್ರೇತಬಾಧೆ, ದಾಂಪತ್ಯ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ, ಭೂಮಿ, ಕೋರ್ಟ್ ನಿಮ್ಮ ಯಾವುದೇ ಗುಪ್ತ, ನಿಗೂಢ ಸಮಸ್ಯೆಗಳಿಗೆ ಕೇರಳದ ಮುಡಾಯಿಕಾವು ಶ್ರೀಭಗವತಿ ಭದ್ರಕಾಳಿ ಮಾಂತ್ರಿಕ ಶಕ್ತಿ ಕೊಳ್ಳೇಗಾಲದ ಅಘೋರ, ಮೋಡಿ ಮಾಂತ್ರಿಕ ಶಕ್ತಿಯಿಂದ 2 ದಿನದಲ್ಲಿ ಶಾಶ್ವತ, ಪರಿಹಾರ, ಶತಸಿದ್ಧ
ರೂಂ.9, 2ನೇ ಮಹಡಿ, ಸಿಟಿ ಬಸ್ ಸ್ಟ್ಯಾಂಡ್, ಬಿಲ್ಡಿಂಗ್ ಕೆ.ಆರ್.ಸರ್ಕಲ್, ಮೈಸೂರು

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

SITES for SALE
JP Nagar Ring Road
30x40
33 Lakhs
Near Gurur Bus Stop, Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

FOR SALE
1. 20x30, 30x40, Sites @ Bogadi, Rainbow School
2. 20x30 @ SBM Bogadi Attach
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram
6. 20x30, Sites For Sale At Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಶ್ರೀ ಚಿಕ್ಕದೇವಮ್ಮ ಹೆಚ್.ಪಿ. ಗ್ಯಾಸ್ ಏಜೆನ್ಸಿಗೆ ಡೆಲಿವರಿ ಹುಡುಗರು ಬೇಕಾಗಿದ್ದಾರೆ.
0821-4270704

ಹೊಸ ಮನೆ ಮಾರಾಟಕ್ಕಿದೆ (SALE)
ಮೈಸೂರಿನ ಹೆಬ್ಬಾಳು 1ನೇ ಹಂತದ ಲಕ್ಷ್ಮಿಕಾಂತ ನಗರ, 20x30
$3\frac{1}{2}$ Floor, Piller House
4 Year Old (Muda)
West Face
Price: 72 Lakh (Negotiable)
9980613758

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿ & ಆಫೀಸ್‌ಗಳಿಗೆ Packing, Helper, Quality, Telephone attenders, Receptionist, Typing, Dirvers etc. ಮುಂತಾದ ಕೆಲಸಗಳಿಗೆ 7th, 10th, puc, Any Degree, ITI, Diploma, Pass / Fail ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ: 14500/- 39000/- (ESI+PF OT)
6364103418, 9513829246

MUDA APPROVED
ಸುವರ್ಣನಗರ 40x60 S/F ಸೈಟು @Rs. 52 ಲಕ್ಷ ಬ್ಯಾಂಕ್ ಲೋನ್ ಲಭ್ಯ ಬೋಗಾದಿ ರೋಡ್, ಮೈಸೂರು
9538583377

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, 8th to 2nd PUC ವರೆಗೆ. ಊಟ ವಸತಿ ESI, PF ಮತ್ತು ವಾಹನ ಸೌಲಭ್ಯ ಇರುತ್ತದೆ. ಸಂಬಳ: 11500 ರಿಂದ 18000 ಇರುತ್ತದೆ.
8951869646
9902645646

ಬೇಕಾಗಿದ್ದಾರೆ
1) ಹೌಸ್ ಕೀಪರ್ (ಮಹಿಳಾ / ಪುರುಷ)
ಸ್ಥಳ: 1) ದಟ್ಟಗಳ್ಳಿ
2) ಶಾರದಾದೇವಿನಗರ, 3) ಮೇಟಗಳ್ಳಿ,
2) ಸೆಕ್ಯೂರಿಟಿ ಗಾರ್ಡುಗಳು
1) ಬೆಳಗೊಳ 2) ಶಾರದಾದೇವಿನಗರ
3) ಕುವೆಂಪುನಗರ 4) ಬದನವಾಳು
ಹಾಗೂ ಮೈಸೂರು ಸುತ್ತಮುತ್ತ
ESI/PF ನಿಗದಿತ ಸಮಯಕ್ಕೆ ಸರಿಯಾದ ಸಂಬಳ
9686422400
9242406261

DTCP Approved Layout
21x40 @ Rs. 11.20 Lac
24x40 @ Rs.12.40 Lac
26x40 @ Rs. 13.65 Lac
East Face SIte For Sale
Next to Marashettihalli
Behind Chamundi Hill
9538583377

ತಕ್ಷಣ ಬೇಕಾಗಿದ್ದಾರೆ
ಯಾದವಗಿರಿ ಹಿನಕಲ್ ಒಂಟಿಕೊಪ್ಪಲ್ ಹೆಬ್ಬಾಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು ಸಂಬಳ: 15100/-
ESI & PF ಸೌಲಭ್ಯ ಇರುತ್ತದೆ.
9620667819
9620777819

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
7411273440, 9632831680

WANTED
SSLC, ITI, Diploma & BE Electrical Candidates with ESI & PF for Industry at Mysore
7799848287
9164079895

ಬೇಕಾಗಿದ್ದಾರೆ
ಡ್ರೈವರ್ಸ್, ಆರು ಮತ್ತು ನಾಲ್ಕು ಚಕ್ರದ ಕಂಪನಿ ಗೂಡ್ಸ್ ವಾಹನ ಚಲಾಯಿಸಲು DL ಹೊಂದಿರುವ ಅಭ್ಯರ್ಥಿ ಆಕರ್ಷಕ ಸಂಬಳ ESI, PF ಸೌಲಭ್ಯವಿರುತ್ತದೆ.
9148851387

WANTED
Cafe staff
Education -Puc
Experience 1yr
Salary above 12000rs
Location JP nagar Mysore
For more details contact us
8970607835

NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45, ಸಂಬಳ: 17000+ESI+PF =22000. ಒಳಗೊಂಡು Week off ಹಾಗೂ 3 Shiftಗಳು ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ: ಸ್ಥಳ: CIPET ಕಾಲೇಜ್ ಹತ್ತಿರ ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 15000ರಿಂದ 20000 ವರೆಗೆ
7411304177
7411304176

50×80 (4,000 Sq.Ft)-ನಿವೇಶನ FOR SALE (MUDA) 3BHK
ಮನೆ-EAST DOOR (1,500 Sq. Ft) FRONT COMMERCIAL FREE SPACE WITH CAR PARKING (2,500 Sq. Ft) NORTH - 80 Ft. MAIN ROAD, ಬ್ಲಾಕ್ ನಂ.21, ಮಧುವನ ಲೇಔಟ್, ಭ್ರಮರಾಂಭ ಕಲ್ಯಾಣ ಮಂಟಪ ಹತ್ತಿರ, ಶ್ರೀರಾಂಪುರ 2ನೇ ಹಂತ, ಮೈಸೂರು. PRICE: 2.8Cr (Negotiable) DIRECT OWNER)
9519511866

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18-35, ವಿದ್ಯಾರ್ಹತೆ: ಪಿ.ಯು.ಸಿ ಯಾವುದೇ ಡಿಗ್ರಿ ಡಿ.ಎಡ್. ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
9980623130

20x30 DUPLEX HOUSE FOR SALE - 3BHK
NEW HOUSE, Opp to St. Joseph's Central School, After Belavadi, Hunasuru Main Road, Mysuru. MUDA Approved, Rs.65 Lakhs
9986675044

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ರಧಾನಿ ಜೊತೆ ಮಾತುಕತೆ ನಡೆಸಿ

‘ಕಾವೇರಿ’ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನ

ಅಭಿನಂದನಾ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ

● ನಿಮ್ಮ ಋಣ ತೀರಿಸುವವರೆಗೂ ಮಣ್ಣು ಸೇರಲ್ಲಾ ● ಅದ್ದೂರಿ ಮೆರವಣಿಗೆ, ಭರ್ಜರಿ ಬಾಡೂಟ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಪಾಂಡವಪುರದಲ್ಲಿ ಅತ್ಯಂತ ವೈಭವದಿಂದ ಅಭಿನಂದಿಸಲಾಯಿತು.

ಪಾಂಡವಪುರ,ಜು.14– ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿ ಕಾವೇರಿ ನೀರು ಹಂಚಿಕೆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ.

ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗ ನಡೆದ ಅಭಿನಂದನೆ ಮತ್ತು ಕೃತಜ್ಞತಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡುತ್ತಿದ್ದ ಅವರು, ರಾಜ್ಯದಲ್ಲಿ ನೂರಾರು ವರ್ಷಗಳಿಂದ ಕಾವೇರಿ ಸಮಸ್ಯೆ ಇದೆ. ಅದನ್ನು ತಕ್ಷಣಕ್ಕೆ ಬಗೆಹರಿಸಲು ಸಾಧ್ಯವಿಲ್ಲ. ಆದರೂ ನಾನು ಪ್ರಧಾನಿಗಳ ಜೊತೆ ಮಾತುಕತೆ ನಡೆಸಿ ಸಮಸ್ಯೆ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ ಎಂದರು.



ಕುಮಾರಸ್ವಾಮಿ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಜನಸಾಗರ.

ದೇವೇಗೌಡರು ಸಹ ತಮ್ಮ 90ನೇ ವಯಸ್ಸಿನಲ್ಲಿಯೂ ಹಲವಾರು ನೋವುಗಳ ನಡುವೆಯೂ ಪ್ರಧಾನಿ ನರೇಂದ್ರ ಮೋದಿಯವರ ಜೊತೆಗೆ ಕಾವೇರಿ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನಿಸುತ್ತಿದ್ದಾರೆ ಜೊತೆಗೆ ನಿರಂತರವಾಗಿ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ ಎಂದ ಅವರು, ನಾನು ಲೋಕಸಭೆಗೆ ಆಯ್ಕೆಯಾಗಿ ಎರಡು ತಿಂಗಳು ಮಾತ್ರವಾಗಿದೆ. ಮುಂದಿನ ದಿನಗಳಲ್ಲಿ ರೈತರ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ 1100 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ರೈತರ ರಕ್ಷಣೆ ಬಗ್ಗೆ ಸರಕಾರಕ್ಕೆ ಚಿಂತೆ ಇಲ್ಲ. ರೈತರು ಯಾವುದಕ್ಕೂ ಆತಂಕಕ್ಕೆ ಒಳಗಾಗಬೇಡಿ ಎಂದು ನಾನು ಧೈರ್ಯ ತುಂಬಿಕೊಂಡು ಬರುವ ಕೆಲಸ ಮಾಡಿದ್ದೇನೆ, ಅಧಿಕಾರ ಸಿಕ್ಕಾಗ ರೈತರ ಸಮಸ್ಯೆಗಳನ್ನು ಬಗೆಹರಿಸುವ ಕೆಲಸವನ್ನು ಸಹ ಮಾಡಿದ್ದೇನೆ. ಜನತಾ ದರ್ಶನದಲ್ಲಿ ನಿರುದ್ಯೋಗ, ಆರ್ಥಿಕ ಸಮಸ್ಯೆ, ಬಡತನ, ಕಂದಾಯ ಇಲಾಖೆ ಸಮಸ್ಯೆ ಸೇರಿದಂತೆ ಸಾವಿರಾರು ಅರ್ಜಿಗಳು ಬಂದಿವೆ. ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ನನಗೆ ಮೂರನೇ ಬಾರಿಗೆ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ ಸಹ ಬದುಕಿದ್ದೇನೆ ಎಂದರೆ, ನನ್ನಿಂದ ಈ ನಾಡಿಗೆ ಯಾವುದೋ ಒಳ್ಳೆಯ ಕೆಲಸವಾಗಬೇಕಿದೆ ಎಂಬುದಾಗಿ ಭಾವಿಸಿದ್ದೇನೆ. ಒಕ್ಕಲಿಗ ಸಮುದಾಯ ನನ್ನ ಮತ್ತು ದೇವೇಗೌಡರನ್ನು ಬೆಳೆಸಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ಸಮಾಜಗಳ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತೇನೆ. ನನಗೆ 2ನೇ ರಾಜಕೀಯ ಭವಿಷ್ಯ ಕೊಟ್ಟಿದ್ದೀರಿ ಮುಂದಿನ ದಿನಗಳಲ್ಲಿ ಒಳ್ಳೆಯ ಕೆಲಸ ಮಾಡುವ ಮೂಲಕ ದೇಶದಲ್ಲಿ ಇತಿಹಾಸ ಬರೆದು ಗೌರವ ತರುವ ಕೆಲಸ ಮಾಡುತ್ತೇನೆ. ನಿಮ್ಮೆಲ್ಲರ ಋಣ ತೀರಿಸುವವರೆಗೂ ಈ ನನ್ನ ದೇಹ ಮಣ್ಣು ಸೇರೋದಿಲ್ಲ ಎಂದು ನುಡಿದರು.

ನನಗೆ ಕೊಟ್ಟಿರುವ ಖಾತೆ ಹೆಸರಿಗಷ್ಟೇ ಭಾರಿ ಕೈಗಾರಿಕೆ ಖಾತೆ, ಇಲ್ಲಿ ಸಾಕಷ್ಟು ಸಮಸ್ಯೆ, ಸವಾಲುಗಳಿವೆ. ಅವುಗಳನ್ನು ಬಹಿರಂಗವಾಗಿ ಹೇಳಲು ಆಗೋದಿಲ್ಲ. ಅವುಗಳನ್ನು ಅರ್ಥೈಸಿಕೊಂಡು ಒಂದು ಸರಿದಾರಿಗೆ ತರುವ ಕೆಲಸ ಮಾಡುತ್ತಿದ್ದೇನೆ. ಹಲವು ಕಾರ್ಖಾನೆಗಳು ಮುಚ್ಚುವ ಸ್ಥಿತಿಯಲ್ಲಿವೆ, ಅವುಗಳನ್ನು ಉಳಿಸುವ ಕೆಲಸ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆ ಹಾಗೂ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಲು ಸ್ಪಂದಿಸಿ ಕೆಲಸ ಮಾಡಲಾಗುವುದು.–ಹೆಚ್.ಡಿ.ಕುಮಾರಸ್ವಾಮಿ

ದೇವೇಗೌಡರ ಮೇಲಿನ ಪ್ರೀತಿ, ನೀವು ಕೊಟ್ಟ ಶಕ್ತಿಯಿಂದ ಕೇಂದ್ರದಲ್ಲಿ ನಾನು ಮಂತ್ರಿಯಾಗಿದ್ದೇನೆ. ಹಳೇ ಮೈಸೂರು ಪ್ರಾಂತ್ಯದಲ್ಲಿ 14 ಲೋಕಸಭಾ ಸ್ಥಾನಕ್ಕೆ 12 ಸ್ಥಾನ ಗೆಲ್ಲಿಸಿ ಕೊಟ್ಟಿದ್ದೀರಿ. ಕುಮಾರಸ್ವಾಮಿ ಗೆದ್ದು ಮಂತ್ರಿಯಾದರೆ ರೈತರಿಗೆ ಒಳ್ಳೆಯದಾಗಲಿದೆ ಎಂಬ ಭಾವನೆಯಿಂದ ಗೆಲ್ಲಿಸಿ ಮಂತ್ರಿ ಮಾಡಿದ್ದೀರಿ. ಆ ಕೀರ್ತಿ ಮಂಡ್ಯ ಜಿಲ್ಲೆ ಹಾಗೂ ರಾಜ್ಯದ ಜನರಿಗೆ ಸೇರಿದೆ ಎಂದು ಬಣ್ಣಿಸಿದರು.

ಸಮಾರಂಭದಲ್ಲಿ ರಾಜ್ಯ ಯುವ ಜೆಡಿಎಸ್ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಸಾ.ರಾ.ಮಹೇಶ್, ಕೆ.ಸಿ.ನಾರಾಯಣಗೌಡ, ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕ ಕೆ.ಅನ್ನದಾನಿ, ಜಿ.ಬಿ.ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡರಾದ ಮನ್‌ಮುಲ್ ರಾಮಚಂದ್ರು, ನಲ್ಲಿಗೆರೆಬಾಲು, ಅಮರಾವತಿ ಚಂದ್ರಶೇಖರ್, ಮದ್ದೂರಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಎಚ್.ಮಂಜುನಾಥ್, ಬಿಜೆಪಿ ಮಹಿಳಾಧ್ಯಕ್ಷೆ ಮಂಗಳ ನವೀನ್, ಎಸ್.ಎ.ಮಲ್ಲೇಶ್, ಧನಂಜಯ್. ಗವೀಗೌಡ, ಡಿ.ಶ್ರೀನಿವಾಸ್, ಉದ್ಯಮಿ ಹುಲ್ಕೆರೆ ಕೊಪ್ಪಲು ಮಧುಸೂದನ್ ಮತ್ತು ತಾಲೂಕು ದಲಿತ ಹೋರಾಟ ಸಮಿತಿ ಅಧ್ಯಕ್ಷ ಬೊಮ್ಮರಾಜು ಸೇರಿದಂತೆ ಪುರಸಭೆ ಸದಸ್ಯರು ಹಾಗೂ ಮುಖಂಡರು ಭಾಗವಹಿಸಿದ್ದರು.

15 ಸಾವಿರ ಕೋಟಿ ಕಿಕ್‌ಬ್ಯಾಕ್ ಹಣ

ಬ್ಲಾಕ್‌ಲಿಸ್ಟ್‌ನಲ್ಲಿರುವ ಗುತ್ತಿಗೆದಾರನಿಗೆ ಬೆಂಗಳೂರು ಕಸ ವಿಲೇವಾರಿಯನ್ನು 45 ಸಾವಿರ ಕೋಟಿಗೆ 30 ವರ್ಷಕ್ಕೆ ಗುತ್ತಿಗೆ ನೀಡಿ ಅವರಿಂದ 15 ಸಾವಿರ ಕೋಟಿ ಹಣವನ್ನು ಕಿಕ್‌ಬ್ಯಾಕ್ ಪಡೆದುಕೊಳ್ಳುವ ಕೆಲಸವನ್ನು ಪೆನ್ನು ಪೇಪರ್ ಪಡೆದಿರುವವರು ಮಾಡಿದ್ದಾರೆ ಎಂದು ಪರೋಕ್ಷವಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಕುಮಾರಸ್ವಾಮಿ ಕಿಡಿಕಾರಿದರು.

ನಾನು ಕೇಂದ್ರ ಸಚಿವನಾಗಿರುವುದಕ್ಕೆ ಕೆಲವರಿಗೆ ಹೊಟ್ಟೆ ಕಿವುಚುವಂತಾಗಿದೆ. ರಾಜ್ಯದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿದರು. ಕಾಂಗ್ರೆಸ್‌ನವರು ದ್ವೇಷದ ರಾಜಕೀಯ ಮಾಡಲು ಹೊರಟಿದ್ದಾರೆ. ಎಸ್ಸಿ/ಎಸ್ಟಿ ಸಮುದಾಯದ 187 ಕೋಟಿ, ವಾಲ್ಮೀಕಿ ಸಮುದಾಯದ ಹಣ ಲೂಟಿ ಮಾಡಿ ಕಾಂಗ್ರೆಸ್‌ನವರು ರಾಜಾರೋಷವಾಗಿ ಓಡಾಡುವ ಭಂಡತನದ ರಾಜಕೀಯ ಮಾಡುತ್ತಿದ್ದಾರೆ ಎಂದು ಸರಕಾರದ ವಿರುದ್ಧ ಹರಿಹಾಯ್ದರು.

ಅದ್ದೂರಿ ಮೆರವಣಿಗೆ, ಭರ್ಜರಿ ಭೋಜನ: ಕಾರ್ಯಕ್ರಮಕ್ಕೆ ಆಗಮಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಡಾ.ರಾಜ್‌ಕುಮಾರ್ ವೃತ್ತದಲ್ಲಿ ಬೃಹತ್ ಸೇಬಿನ ಹಾರ ಹಾಕಿ, ಅಲ್ಲಿಂದ ಅದ್ದೂರಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ದಾರಿಯುದ್ದಕ್ಕೂ ಅಭಿಮಾನಿಗಳು ಎಚ್.ಡಿ.ಕುಮಾರಸ್ವಾಮಿ ಪರ ಘೋಷಣೆ ಕೂಗಿದರು. ವೇದಿಕೆಯಲ್ಲಿ ಎಚ್‌ಡಿಕೆ ಅವರಿಗೆ ಭವ್ಯವಾಗಿ ಸನ್ಮಾನಿಸಿ, ಅಭಿನಂದಿಸಲಾಯಿತು.

ಇನ್ನು ಪಟ್ಟಣದ ಟಿಎಪಿಸಿಎಂಎಸ್ ರೈತಸಭಾಂಗಣದಲ್ಲಿ ಭರ್ಜರಿ ಬಾಡೂಟ ಏರ್ಪಡಿಸಲಾಗಿತ್ತು. ಊಟಕ್ಕಾಗಿ ಐದು ಕೌಂಟರ್‌ಗಳನ್ನು ತೆರೆಯಲಾಗಿತ್ತು. ಬೆಳಿಗ್ಗೆ 11.30ರಿಂದ ಆರಂಭಗೊಂಡ ಊಟ ಸಂಜೆವರೆಗೂ ನಡೆಯಿತು. ಪಾಂಡವ ಕ್ರೀಡಾಂಗಣದಲ್ಲಿ ಸಸ್ಯಹಾರಿ ಊಟದ ವ್ಯವಸ್ಥೆ ಮಾಡಲಾಗಿತ್ತು ಸಾವಿರಾರು ಮಂದಿ ಭೋಜನ ಸವಿದರು.

ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಆಷಾಢದ ವಿಶೇಷ ಪೂಜೆ

ಭಾರತೀನಗರ.ಜು.14– ಮೊದಲನೇ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಇಲ್ಲಿನ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಶುಕ್ರವಾರ ವಿಶೇಷ ಪೂಜಾ ಕಾರ್ಯ ಜರುಗಿತು. ಚಾಮುಂಡೇಶ್ವರಿ ದೇವಿಯನ್ನು ಹೂ ಮತ್ತು ಆಭರಣಗಳಿಂದ ಅಲಂಕರಿಸಿದ್ದು ಭಕ್ತರ ಗಮನ ಸೆಳೆಯಿತು. ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು. ಭಕ್ತರು ಸರದಿಯಲ್ಲಿ ಆಗಮಿಸಿ ದೇವಿ ದರ್ಶನ ಪಡೆದರು. ಮಹಾ ಮಂಗಳಾರತಿ ಪ್ರಸಾದ ವಿನಿಯೋಗ ನಡೆಯಿತು. ಮಹಿಳೆಯರು ನಿಂಬೆಹಣ್ಣು, ಬೆಲ್ಲದ ಆರತಿ ಮೂಲಕ ಪೂಜೆ ಸಲ್ಲಿಸಿದರು. ಸುತ್ತ–ಮುತ್ತಲ ಗ್ರಾಮದ ನೂರಾರು ಭಕ್ತರು ಆಗಮಿಸಿ, ದೇವರ ದರ್ಶನ ಪಡೆದುಕೊಂಡರು.

ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆ

ಸದ್ಯದಲ್ಲೇ ಸಮ್ಮೇಳನ ನಡೆಯುವ ಸ್ಥಳ ಘೋಷಣೆ

ಡಿಸಿ ಕಚೇರಿಯಲ್ಲಿ ನೂತನ ಕಸಾಪ ಕಚೇರಿ ಉದ್ಘಾಟನೆ



ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಮಂಡ್ಯ,ಜು.14– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಡಿಸೆಂಬರ್ 20, 21, 22ರಂದು ನಡೆಯಲಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧಿಕಾರಿಗಳೊಂದಿಗೆ ಭಾನುವಾರ ನಗರದ ಹೊರವಲಯದ ಸ್ಯಾಂಜೋ ಆಸ್ಪತ್ರೆ ಹಿಂಭಾಗ ಸೇರಿದಂತೆ ಹಲವೆಡೆ ಸ್ಥಳ ಪರಿಶೀಲನೆ ನಡೆಸಿದರು.

ಬಳಿಕ ನಗರದ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಾ ಸಿದ್ಧತೆಗಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನೂತನ ಕಚೇರಿ ಉದ್ಘಾಟಿಸಿ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿದರು.

ಕಚೇರಿಯಲ್ಲಿ ಕವಿವಾಣಿಗಳ ಕಾವ್ಯದ ಸಿಂಚನಗಳ ಫಲಕಗಳನ್ನು ಅಳವಡಿಸಿ ಕನ್ನಡದ ಕಂಪು ಸೂಸುವಂತೆ ಮಾಡಲಾಗಿದ್ದು, ಕಚೇರಿ ಉದ್ಘಾಟನೆಯ ನಂತರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯ ಜಿಲ್ಲೆಯಲ್ಲಿ ನೆನಪಿಸಲಿ ಎಂಬ ನಿಟ್ಟಿನಲ್ಲಿ ಶ್ರೀಗಂಧದ ಗಿಡವನ್ನು ನೆಟ್ಟಿ ನೀರೆರೆದರು.

ಬಳಿಕ ಮಾತನಾಡಿದ ಸಚಿವ ಎನ್.ಚಲುವರಾಯಸ್ವಾಮಿ, ಸದ್ಯದಲ್ಲೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸ್ಥಳ ನಿಗದಿ ಮಾಡಲಿದ್ದು, ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಜಿಲ್ಲಾಡಳಿತ ಸ್ಯಾಂಜೋ ಆಸ್ಪತ್ರೆ ಹಿಂಭಾಗ, ಚಿಕ್ಕಮಂಡ್ಯ ಮತ್ತು ಬೈಪಾಸ್ ಹಾಗೂ ಆರ್‌ಎಪಿಸಿಎಂಎಸ್ ಆವರಣ ಸೇರಿದಂತೆ 3 ಸ್ಥಳಗಳ ಆಯ್ಕೆ ಮಾಡಿದೆ. ಸದ್ಯದಲ್ಲೇ ಒಂದು ಸ್ಥಳವನ್ನು ನಿಗದಿ ಮಾಡಲಾಗುವುದು ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಚರಣೆ ಮಾಡುವುದಕ್ಕೆ ರಾಜ್ಯ ಸಮಿತಿ ಜಿಲ್ಲಾ ಸಮಿತಿ ಎಲ್ಲಾ ಒಟ್ಟಾಗಿ ಸಭೆ ನಡೆಸಿ ಡಿಸೆಂಬರ್ 20,21,22 ರಂದು ನಡೆಸಲು ತೀರ್ಮಾನಿಸಲಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನ ಆಚರಣೆಗೆ ಬರುವುದಕ್ಕೆ ಜನರಿಗೆ ಯಾವುದೇ ತರಹ ತೊಂದರೆ ಆಗಬಾರದು ಎಂದು ಡಿಸೆಂಬರ್ ಮಾಹೆಯಲ್ಲಿ ಮಳೆಗಾಲ ಇಲ್ಲದಿರುವಾಗ ಮತ್ತು ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಬೇಕು ಎಂಬ ಉದ್ದೇಶದಿಂದ ಡಿಸೆಂಬರ್ ಮಾಹೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮೀರಾ ಶಿವಲಿಂಗಯ್ಯ ಸಂಚಾಲಕಿ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಷಿ ಮಾತನಾಡಿ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಎಂದರೆ ಜಿಲ್ಲಾಧ್ಯಕ್ಷರ ಜವಾಬ್ದಾರಿ ಹೆಚ್ಚಿರುತ್ತದೆ. ಆದರೆ ಇಲ್ಲಿ ಜಿಲ್ಲಾಧ್ಯಕ್ಷರಾಗಿದ್ದ ಸಿ.ಕೆ.ರವಿಕುಮಾರ್ ಚಾಮಲಾಪುರ ಅಕಾಲಿಕ ನಿಧನದಿಂದ ಅಧ್ಯಕ್ಷ ಸ್ಥಾನ ತೆರವಾಗಿದ್ದು, ಸಾಹಿತ್ಯ ಸಮ್ಮೇಳನ ನಡೆಸಲು ಜಿಲ್ಲಾಧ್ಯಕ್ಷರ ಅನುಪಸ್ಥಿತಿಯಲ್ಲಿ ರಾಜ್ಯಾಧ್ಯಕ್ಷರು ಜಿಲ್ಲೆಯಲ್ಲಿ ಒಬ್ಬರಿಗೆ ಜವಾಬ್ದಾರಿ ಕೊಡುವ ನಿಯಮ ಬೈಲಾದಲ್ಲಿದ್ದು, ಆ ಪ್ರಕಾರವಾಗಿ ಸಮ್ಮೇಳನದ ಉದ್ದೇಶದಿಂದ ತಾತ್ಕಾಲಿಕವಾಗಿ ಜಿಲ್ಲಾ ಸಂಚಾಲಕರನ್ನಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮೀರಾ ಶಿವಲಿಂಗಯ್ಯ ಅವರನ್ನು ನೇಮಕ ಮಾಡಲಾಗಿದೆ ಎಂದರು.

ಸಮ್ಮೇಳನದ ಕುರಿತಂತೆ ಈಗಾಗಲೇ ರೂಪುರೇಷೆ ಆರಂಭವಾಗಿದ್ದು, ಜಿಲ್ಲಾಡಳಿತ, ಅಧಿಕಾರಿಗಳು, ಜನಪ್ರತಿನಿಧಿಗಳು, ಕಸಾಪ ಪದಾಧಿಕಾರಿಗಳು, ಸಾಹಿತ್ಯಾಸಕ್ತರು ಸಮ್ಮೇಳನಕ್ಕೆ ಸಂಬಂಧಿಸಿದಂತೆ ಸಿದ್ಧತೆ ಆರಂಭಿಸಿ ಎಂದು ಮನವಿ ಮಾಡಿದರು. ಶಾಸಕ ಪಿ.ರವಿಕುಮಾರ್ ಗಣಿಗ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

8 ಸಾವಿರ ಕ್ಯುಸೆಕ್ ನೀರು ಬಿಡಲು ನಿರ್ಧಾರ

ಸುಮಾರು 20 ದಿನ 20 ಟಿಎಂಸಿ ನೀರು ತಮಿಳುನಾಡಿಗೆ ಬಿಡುವಂತೆ ಆದೇಶಿಸಲಾಗಿತ್ತು ಎಂದು ಹೇಳಿದರು. ಸಾಮಾನ್ಯ ವರ್ಷದಲ್ಲಿ ಜೂನ್ ತಿಂಗಳಲ್ಲಿ 9.4 ಟಿಎಂಸಿ, ಜುಲೈನಲ್ಲಿ 31.24 ಟಿಎಂಸಿ ಸೇರಿ ಒಟ್ಟು 40.43 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಬೇಕಾಗಿದೆ. ಆದರೆ ಇಲ್ಲಿವರೆವಿಗೂ 5 ಟಿಎಂಸಿಗೂ ಹೆಚ್ಚು ನೀರು ಮಾತ್ರ ಬಿಡಲು ಸಾಧ್ಯವಾಗಿದೆ ಎಂದರು.

ಇಂದು ನಡೆದ ಸರ್ವ ಪಕ್ಷ ಸಭೆಯಲ್ಲಿ ಈ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ಕಾವೇರಿ ಜಲಾನಯನ ಪ್ರದೇಶದ ಕಬಿನಿ ಜಲಾಶಯದಲ್ಲಿ ಈ ವರ್ಷ ಶೇ.96, ಹಾರಂಗಿಯಲ್ಲಿ ಶೆ.76, ಹೇಮಾವತಿಯಲ್ಲಿ ಶೇ.56, ಕೆಆರ್‌ಎಸ್‌ನಲ್ಲಿ ಶೇ.54 ಸೇರಿ ಒಟ್ಟಾರೆ ನಮ್ಮ ಜಲಾಶಯಗಳಲ್ಲಿ ಶೇ.63ರಷ್ಟು ನೀರು ಇದೆ. ಕಬಿನಿ ಜಲಾಶಯಕ್ಕೆ ಒಳ ಹರಿವು ಹೆಚ್ಚಾಗಿ ಬಂದ ಕಾರಣ ಜಲಾಶಯದ ಭದ್ರತೆ ದೃಷ್ಟಿಯಿಂದ ಜುಲೈ 12ರಂದು 20 ಸಾವಿರ, 13ರಂದು 19 ಸಾವಿರ ಹಾಗೂ ಇಂದು 13 ಸಾವಿರ ಕ್ಯೂಸೆಕ್ ನೀರು ಬಿಡಲಾಗಿದೆ ಎಂದು ವಿವರಿಸಿದ ಮುಖ್ಯಮಂತ್ರಿಗಳು, ಮಳೆ ಬಂದರೆ ನೀರು ಬಿಡಬಹುದು. ಇಲ್ಲದಿದ್ದರೆ ಬಿಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ಬಂದಿದೆ ಎಂದು ಹೇಳಿದರು. ಕಳೆದ ವರ್ಷ ತಮಿಳುನಾಡಿಗೆ 177 ಟಿಎಂಸಿ ನೀರು ಬಿಡಬೇಕಿತ್ತು. ಆದರೆ ಮಳೆ ಬಾರದ ಕಾರಣ 81 ಟಿಎಂಸಿ ಮಾತ್ರ ಬಿಡಲಾಗಿತ್ತು ಎಂದು ಹೇಳಿದರು. ಈಗಿರುವ ಪರಿಸ್ಥಿತಿ ಯಲ್ಲಿ ಪ್ರತೀ ದಿನ 1 ಟಿಎಂಸಿ ನೀರು ಬಿಡಲು ಸಾಧ್ಯವಿಲ್ಲ. 8 ಸಾವಿರ ಕ್ಯೂಸೆಕ್ ನೀರು ಮಾತ್ರ ಬಿಡಬಹುದು ಎಂದು ತೀರ್ಮಾನಿ ಸಲಾಗಿದೆ. ಮುಂದಿನ ದಿನಗಳಲ್ಲಿ ಮಳೆ ಬಂದರೆ ನೀರು ಬಿಡಬಹುದು, ಮಳೆ ಬಾರದಿದ್ದರೆ 8 ಸಾವಿರ ಕ್ಯೂಸೆಕ್‌ನಿಂದ ಕಡಿಮೆ ನೀರು ಬಿಡಬೇಕಾದ ಪರಿಸ್ಥಿತಿ ಒದಗಬಹುದು ಎಂದು ಹೇಳಿದರು.

ಸಭೆಯಿಂದ ಕಾನೂನು ಸಲಹೆಗಾರರು ನೀಡಿದ ಸಲಹೆಯಂತೆ ಪ್ರತೀ ದಿನ 8 ಸಾವಿರ ಕ್ಯೂಸೆಕ್ ಬಿಡೋಣ. ಅದೇ ವೇಳೆ ಕಾವೇರಿ ನೀರು ನಿಯಂತ್ರಣಾ ಸಮಿತಿ ಆದೇಶ ಪ್ರಶ್ನಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದರು. ತಮ್ಮ ಆದೇಶ ಪಾಲಿಸಲಿಲ್ಲ. ನಾವು ಮೊಂಡಾಟ ಆಡುತ್ತಿದ್ದೇವೆ ಎಂದು ಸಿಡಬ್ಲ್ಯೂಎಂಎಗೆ ಅನ್ನಿಸಬಾರದು. ಹೀಗಾಗಿ 8 ಸಾವಿರ ಕ್ಯೂಸೆಕ್ ನೀರು ಬಿಡೋಣ ಎಂದು ಸಭೆ ತೀರ್ಮಾನಿಸಿದೆ ಎಂದರು.

ಸರ್ವ ಪಕ್ಷ ಸಭೆಯಲ್ಲಿ ಜಲ ಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕ ಎ.ಮಂಜು, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆಅತೀಕ್, ಜಲ ಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಸುಪ್ರೀಂಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ, ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ನೀರಾವರಿ ಹಾಗೂ ಕಾನೂನು ತಜ್ಞರು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಆಯೋಗ ರಚನೆ

ಮನಗಂಡು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಿಂದ ವಿಚಾರಣೆ ನಡೆಸಲು ಆಯೋಗ ರಚಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ತನಿಖೆಯನ್ನು 6 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವರದಿ ಸಲ್ಲಿಸತಕ್ಕದ್ದೆಂದು ಸರ್ಕಾರ ಅಪೇಕ್ಷಿಸುತ್ತದೆ. ಈ ಆಯೋಗಕ್ಕೆ ಸಮಗ್ರ ಮಾಹಿತಿ/ದಾಖಲೆಗಳನ್ನು ಒದಗಿಸಿ ಆಯೋಗವು ವಿಚಾರಣೆಯನ್ನು ಪೂರ್ಣಗೊಳಿಸಲು ಹಾಗೂ ತಾಂತ್ರಿಕ ಸಲಹೆಗಾರರು/ಆರ್ಥಿಕ ಸಲಹೆಗಾರರು/ಆಡಳಿತಾತ್ಮಕ ಸಲಹೆಗಾರರನ್ನು ನಗರಾಭಿವೃದ್ಧಿ ಇಲಾಖೆ ಹಾಗೂ ಮುಡಾ ಒದಗಿಸತಕ್ಕದ್ದು. ಆಯೋಗವು ವಿಚಾರಣೆಗಾಗಿ ಅಪೇಕ್ಷಿಸುವ ಎಲ್ಲಾ ಕಡತಗಳು/ದಾಖಲಾತಿಗಳು ಇತ್ಯಾದಿಗಳನ್ನು ಒದಗಿಸತಕ್ಕದ್ದು ಹಾಗೂ ವಿಚಾರಣೆ ಸಂದರ್ಭದಲ್ಲಿ ಹಾಜರಿದ್ದು, ವಿಚಾರಣಾ ಆಯೋಗದೊಂದಿಗೆ ಸಹಕರಿಸತಕ್ಕದ್ದು ಎಂದು ಒಳಾಡಳಿತ ಇಲಾಖೆ (ಕಾನೂನು ಮತ್ತು ಸುವ್ಯವಸ್ಥೆ) ಅಧೀನ ಕಾರ್ಯದರ್ಶಿ ಎಸ್. ನಾಗರಾಜು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಗುಂಡಿನ ದಾಳಿ

ತೀವ್ರವಾಗಿ ಗಾಯಗೊಂಡಿದ್ದಾರೆ. ಡೊನಾಲ್ಡ್ ಟ್ರಂಪ್ ಮೇಲೆ ಗುಂಡಿನ ದಾಳಿಯಾಗುತ್ತಿದ್ದಂತೆಯೇ ಅವರ ಅಂಗರಕ್ಷಕರು ಟ್ರಂಪ್ ಅವರನ್ನು ವೇದಿಕೆಯಿಂದ ಹೊರಗೆ ಕರೆತಂದರು. ಬಂದೂಕುಧಾರಿ ವೇದಿಕೆ ಕಡೆಗೆ ಹಲವು ಬಾರಿ ಗುಂಡಿನ ದಾಳಿ ನಡೆಸಿದ್ದ. ಕೂಡಲೇ ಟ್ರಂಪ್ ಅವರನ್ನು ಸುತ್ತುವರೆದು ರಕ್ಷಣೆ ಮಾಡಲಾಯಿತು. ಘಟನೆಯಿಂದ ಟ್ರಂಪ್ ಅವರಿಗೆ ಗಾಯವಾಗಿದೆ. ಆದರೆ, ಸುರಕ್ಷಿತವಾಗಿದ್ದಾರೆಂದು US ಸೀಕ್ರೆಟ್ ಸರ್ವಿಸ್ ಹೇಳಿಕೆಯಲ್ಲಿ ತಿಳಿಸಿದೆ. ಘಟನೆ ಬಳಿಕ ಬಂದೂಕುಧಾರಿಯನ್ನು ಹತ್ಯೆ ಮಾಡಲಾಗಿದ್ದು, ಆತನ ಪಕ್ಕದಲ್ಲಿದ್ದ ಮತ್ತೊಬ್ಬರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಒಟ್ಟು ಇಬ್ಬರು ಮೃತಪಟ್ಟಿದ್ದಾರೆ ಎಂದು ಹೇಳಿದೆ.

ದಾಳಿಯ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಟ್ರಂಪ್, ನಮ್ಮ ದೇಶದಲ್ಲಿ ಇಂತಹ ಕೃತ್ಯ ನಡೆಯುವುದು ನಂಬಲಸಾಧ್ಯವಾಗಿದೆ ಎಂದು ಟ್ರಂಪ್ ತಮ್ಮ Truth Social ನೆಟ್‌ವರ್ಕ್‌ನಲ್ಲಿ ಕೆಲವೇ ಗಂಟೆಗಳಲ್ಲಿ ಹೇಳಿದರು. ಹತ್ಯೆಯಾದ ರ‍್ಯಾಲಿಯ ವ್ಯಕ್ತಿಯ ಕುಟುಂಬಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಘಟನೆ ವೇಳೆ ತಕ್ಷಣ ರಕ್ಷಣೆ ಮಾಡಿದ ಹಾಗೂ ತ್ವರಿತ ಕಾನೂನು ಕ್ರಮ ಕೈಗೊಂಡ ಸಿಬ್ಬಂದಿಗಳಿಗೆ ಟ್ರಂಪ್ ಧನ್ಯವಾದ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಮೇಲೆ ಗುಂಡು ಹಾರಿಸಿದ ವ್ಯಕ್ತಿಯನ್ನು ಬೆಥೆಲ್ ಪಾರ್ಕ್‌ನ 20 ವರ್ಷದ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂದು ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಗುರುತಿಸಿದೆ.

ಈತ ರಿಪಬ್ಲಿಕನ್ ಎಂದು ನೋಂದಣಿ ಮಾಡಿಕೊಂಡಿದ್ದ. ನವೆಂಬರ್‌ನಲ್ಲಿ ನಡೆಯಬೇಕಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಮೊದಲ ಬಾರಿಗೆ ಮತದಾನ ಮಾಡುವವನಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೋದಿ ಖಂಡನೆ: ಅಮೆರಿಕಾ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲೆ ಗುಂಡಿನ ದಾಳಿ ನಡೆಸಿ, ಹತ್ಯೆಗೆ ಯತ್ನ ನಡೆಸಲಾಗಿದ್ದು, ಘಟನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ರಾಜಕೀಯ ಮತ್ತು ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಯಾವುದೇ ಸ್ಥಾನವಿಲ್ಲ ಎಂದು ಹೇಳಿದ್ದಾರೆ. ನನ್ನ ಸ್ನೇಹಿತ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲಿನ ದಾಳಿಯಿಂದ ತೀವ್ರ ಕಳವಳಗೊಂಡಿದ್ದೇನೆ. ಘಟನೆಯನ್ನು ಬಲವಾಗಿ ಖಂಡಿಸುತ್ತೇನೆ. ರಾಜಕೀಯ ಮತ್ತು ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ. ಅವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ತಿಳಿಸಿದ್ದಾರೆ. ನಮ್ಮ ಆಲೋಚನೆಗಳು ಮತ್ತು ಪ್ರಾರ್ಥನೆಗಳು ಮೃತರ ಕುಟುಂಬ, ಗಾಯಗೊಂಡವರು ಮತ್ತು ಅಮೇರಿಕಾ ಜನರೊಂದಿಗೆ ಇವೆ ಎಂದು ಹೇಳಿದರು.

ಮಳೆ ಬಂದಾಗ ಕೆರೆ–ಕಟ್ಟೆ ತುಂಬಿಸಬೇಕು, ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಬೇಕು

ಬೆಂಗಳೂರು, ಜು.14– ಕಾವೇರಿ ನೀರಿನ ಸಮಸ್ಯೆ ನೀಗಬೇಕಾದರೆ ಮೇಕೆದಾಟು ಯೋಜನೆ ಶೀಘ್ರ ಅನುಷ್ಠಾನಗೊಳಿಸಬೇಕು. ಮಳೆಗಾಲದಲ್ಲಿ ಕೆರೆ–ಕಟ್ಟೆಗಳಿಗೆ ನೀರು ತುಂಬಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದರು.

ಇಂದು ವಿಧಾನಸೌಧದಲ್ಲಿ ನಡೆದ ಸರ್ವ ಪಕ್ಷ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಳೆ ಬಂದು ಜಲಾಶಯಗಳಿಗೆ ನೀರು ಬರುವ ವೇಳೆ ಕೆರೆ–ಕಟ್ಟೆಗಳನ್ನು ತುಂಬಿಸಬೇಕು. ಆಗ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆಯಾಗುತ್ತದೆ. ಆ ಸಂದರ್ಭದಲ್ಲಿ ನಮ್ಮ ಜಲಾಶಯಗಳಲ್ಲಿ ಹೆಚ್ಚು ನೀರು ಇದೆ ಎಂದು ತಮಿಳುನಾಡಿನವರು ನೀರು ಬಿಡುವಂತೆ ಒತ್ತಡ ಹೇರುವ ಸಾಧ್ಯತೆ ಕಡಿಮೆಯಾಗುತ್ತದೆ. ಕಾವೇರಿ ನೀರು ನಿಯಂತ್ರಣ ಸಮಿತಿಯೂ ಕೂಡ ಜಲಾಶಯದಲ್ಲಿರುವ ನೀರನ್ನೇ ಅನುಸರಿಸಿ ಆದೇಶ ನೀಡಬೇಕಾಗುತ್ತದೆ. ಹೀಗಾಗಿ ಕೆರೆ–ಕಟ್ಟೆಗಳನ್ನು ತುಂಬಿಸಬೇಕು.

ಮೇಕೆದಾಟುವಿನಲ್ಲಿ ಅಣೆಕಟ್ಟೆ ನಿರ್ಮಾಣವಾದರೆ ನಮ್ಮ ಈಗಿನ ಜಲಾಶಯಗಳಿಂದ ಹರಿದು ಹೋಗುವ ನೀರು ಅಲ್ಲಿ ಸಂಗ್ರಹವಾಗುತ್ತದೆ. ಅಂತಹ ಸಂದರ್ಭದಲ್ಲಿ ನಮ್ಮ ಈಗಿನ ಜಲಾಶಯಗಳಲ್ಲಿ ಸಂಗ್ರಹವಾಗುವ ನೀರನ್ನು ಬಿಡದೇ ಮೇಕೆದಾಟುವಿನಿಂದ ನೀರನ್ನು ತಮಿಳುನಾಡಿಗೆ ಬಿಡಬಹುದು. ಆಗ ನಮ್ಮ ರೈತರ ಸಮಸ್ಯೆಯೂ ಬಗೆಹರಿಯುತ್ತದೆ ಎಂದು ಸಲಹೆ ನೀಡಿದರು. ಕೆಲ ವರ್ಷಗಳ ಹಿಂದೆ ತಮಿಳುನಾಡಿಗೆ ಇಷ್ಟೇ ನೀರು ಬಿಡಬೇಕು ಎಂಬ ತೀರ್ಪು ಬಂದಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಜಲಾಶಯಗಳಲ್ಲಿ ನೀರಿನ ಲಭ್ಯತೆ ಆಧರಿಸಿ ತಮಿಳುನಾಡಿಗೆ ನೀರು ಬಿಡುವ ಬಗ್ಗೆ ನಮ್ಮ ಕಾನೂನು ತಜ್ಞರು ಸಮರ್ಪಕವಾಗಿ ವಾದ ಮಂಡಿಸುವ ಮೂಲಕ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಮಂಜೇಗೌಡ ಸಲಹೆ ನೀಡಿದರು.

ಸೂತ್ರ ರಚಿಸಲು ಕ್ರಮ ಕೈಗೊಳ್ಳಬೇಕು

ಇಂದು ವಿಧಾನಸೌಧದಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಪಾಲ್ಗೊಂಡು ಮಾತಾಡಿದ ಅವರು, ಪ್ರತಿ ಬಾರಿಯೂ ತಮಿಳುನಾಡಿನವರು ಮೇಲುಗೈ ಸಾಧಿಸುತ್ತಿದ್ದು, ಕರ್ನಾಟಕ ಯಾಕೆ ವಿಫಲವಾಗುತ್ತಿದೆ ಎಂದು ಜನಸಾಮಾನ್ಯರು ಹಾಗೂ ರೈತರು ಪ್ರಶ್ನಿಸುತ್ತಿದ್ದು, ನಮ್ಮ ಇಂಜಿನಿಯರ್‌ಗಳು, ನೀರಾವರಿ ತಜ್ಞರು ಹಾಗೂ ಕಾನೂನು ತಜ್ಞರು ಸೂಕ್ತವಾಗಿ ವಾದ ಮಂಡಿಸಿ, ಪರಿಸ್ಥಿತಿಯ ವಿವರಣೆ ನೀಡಿ ಪ್ರಾಧಿಕಾರಕ್ಕೆ ಮನದಟ್ಟು ಮಾಡಿಕೊಟ್ಟು ನಾಡಿನ ರೈತರ ಹಿತ ಕಾಪಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದರು. ಸಂಕಷ್ಟ ಸೂತ್ರ ಜಾರಿಗೆ ಬರುವುದರಿಂದ ಡ್ಯಾಮ್‌ಗಳಲ್ಲಿ ನೀರು ಇಲ್ಲದೆ ಇದ್ದಾಗಲೂ ಕೂಡ ಯಾವುದೇ ತೊಂದರೆಯಾಗದಂತೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು. ಈಗಾಗಲೇ ಕಬಿನಿಯಿಂದ ಪ್ರತಿನಿತ್ಯ 20 ಸಾವಿರ ಕ್ಯೂಸೆಕ್ಸ್ ನೀರು ಹರಿದು ಹೋಗುತ್ತಿದ್ದು, ಕಾವೇರಿ ಜಲಾಶಯ ವ್ಯಾಪ್ತಿಯ ಇನ್ನುಳಿದ ಡ್ಯಾಮ್‌ಗಳಾದ ಕೆಆರ್‌ಎಸ್, ಹಾರಂಗಿ ಹಾಗೂ ಹೇಮಾವತಿ ಜಲಾಶಯಗಳಲ್ಲಿ ಶೇಕಡ 36 ಕೊರತೆ ಇದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದು, ಮುಂದೆ ಕಬಿನಿಯಿಂದ ಹರಿದು ಹೋಗುತ್ತಿರುವ ನೀರು ನಿಂತು ಹೋದರೆ, ನಮ್ಮ ಮುಂದಿನ ನಡೆ ಏನು? ಕಳೆದ ಒಂದು ವರ್ಷದಿಂದ ಮಳೆ ಇಲ್ಲದೆ ಬರಗಾಲ ಇದ್ದು, ನಮ್ಮ ರೈತರಿಗೆ, ಕೆರೆ ಕಟ್ಟೆಗಳಿಗೆ ನೀರು ಇಲ್ಲದೆ ಇರುವ ಸಂದರ್ಭದಲ್ಲಿ ಹೇಗೆ ನೀರು ಬಿಡುತ್ತೀರಿ ಆದ್ದರಿಂದ ಸಿಡಬ್ಲ್ಯೂಎಂಎಗೆ ಮೇಲ್ಮನವಿ ಸಲ್ಲಿಸಿ, ಈಗ ಹರಿದು ಹೋಗುತ್ತಿರುವ ನೀರು ನಿಂತ ಮೇಲೆ, ಆದೇಶ ಬರುವವರೆಗೂ ನೀರು ಬಿಡಬಾರದೆಂದು ಸರ್ಕಾರಕ್ಕೆ ಆಗ್ರಹಿಸಿದರು.

ಕರ್ನಾಟಕದ ಕೈ ಹಿಡಿದ ಕಬಿನಿ

ಮೈಸೂರು, ಜು.14(ಬಿಎಲ್‌ಯು)– ಮೈಸೂರಿನ ಕಬಿನಿ ಜಲಾಶಯ ದಿಂದ ಪ್ರತಿ ದಿನ 16 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರು ತಮಿಳುನಾಡಿಗೆ ಬಿಡುತ್ತಿರುವ ಕಾರಣ ಕಬಿನಿ ಜಲಾಶಯ ಕರ್ನಾಟಕದ ಕೈ ಹಿಡಿದಿದೆ. ಇದರಿಂದ ಕರ್ನಾಟಕ ಹಾಗೂ ತಮಿಳುನಾಡಿನ ನದಿ ವಿವಾದಕ್ಕೂ ಸ್ವಲ್ಪ ಮಟ್ಟಿಗೆ ಪರಿಹಾರ ದೊರೆತಂತಾಗಿದೆ. ಕೇರಳದ ವೈನಾಡು ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವುದರಿಂದ ಕಬಿನಿ ಜಲಾಶಯ ಭರ್ತಿಯಾಗಿದೆ. ಕಬಿನಿ ಜಲಾ ಶಯದ ಗರಿಷ್ಟ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,283 ಅಡಿಗಳಾಗಿದೆ. ಜಲಾಶಯಕ್ಕೆ 19,027 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 16,750 ಕ್ಯೂಸೆಕ್ಸ್ ನೀರು ಬಿಡಲಾಗುತ್ತಿದೆ. ಈ ನೀರು ತಮಿಳುನಾಡಿಗೆ ಹೋಗುತ್ತಿದೆ ಕಬಿನಿ ಜಲಾಶಯ ಭರ್ತಿಯಾಗಿರುವ ಕಾರಣ ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ ಹೆಚ್ಚುವರಿ ನೀರನ್ನು ಹೊರಗೆ ಬಿಡಬೇಕಾದ ಅನಿವಾರ್ಯತೆ ಇದೆ. ಜಲಾಶಯ ಭರ್ತಿಯಾಗಿ ಹೆಚ್ಚುವರಿಯಾಗಿ ಬರುತ್ತಿರುವ ನೀರು ಈಗ ತಮಿಳುನಾಡು ಸೇರುತ್ತಿದೆ.

ಜುಲೈ 31ರವರೆಗೆ ತಮಿಳುನಾಡಿಗೆ ಪ್ರತಿ ನಿತ್ಯ ಒಂದು ಟಿಎಂಸಿ ಅಂದರೆ ಸರಾಸರಿ 11,500 ಕ್ಯುಸೆಕ್ (1 ಟಿಎಂಸಿ) ನೀರು ಬಿಡುವಂತೆ ಕಾವೇರಿ ನದಿ ನೀರು ನಿಯಂತ್ರಣಾ ಸಮಿತಿ ಆದೇಶಿಸಿದೆ. ಈಗ ಕಬಿನಿ ಜಲಾಶಯದಿಂದ ಒಂದು ಟಿಎಂಸಿ ಗೂ ಹೆಚ್ಚು ನೀರು ಹರಿಯುತ್ತಿರುವ ಕಾರಣ ಪ್ರಾಧಿಕಾರದ ಆದೇಶ ವನ್ನು ಕರ್ನಾಟಕ ಪಾಲಿಸಿದಂತಾಗಿದೆ. ಇದರಿಂದ ಕರ್ನಾಟಕ ಮತ್ತು ತಮಿಳು ನಾಡು ನಡುವೆ ನದಿ ನೀರು ವಿವಾದ ಕೂಡ ಸದ್ಯಕ್ಕೆ ಉದ್ಭವವಾಗುವುದಿಲ್ಲ.

ಮನೆ ಬಾಡಿಗೆ ಕೇಳುವ ನೆಪದಲ್ಲಿ ನಿವೃತ್ತ ಶಿಕ್ಷಕಿ ಕಟ್ಟಿಹಾಕಿ ಚಿನ್ನಾಭರಣ ದೋಚಿದ್ದ ಪ್ರಕರಣ

ಖತರ್ನಾಕ್ ದಂಪತಿ ಬಂಧನ



ಮೈಸೂರು, ಜು.14– ಬಾಡಿಗೆಗೆ ಮನೆ ಕೇಳುವ ನೆಪದಲ್ಲಿ ನಿವೃತ್ತ ಶಿಕ್ಷಕಿಯನ್ನು ಕಟ್ಟಿಹಾಕಿ ಚಿನ್ನಾಭರಣ ದೋಚಿದ್ದ ಪ್ರಕರಣವನ್ನು ಮೂರೇ ದಿನದಲ್ಲಿ ಬೇಧಿಸಿರುವ ಮೈಸೂರಿನ ಹೆಬ್ಬಾಳು ಠಾಣೆ ಪೊಲೀಸರು, ಈ ಸಂಬಂಧ ಖತರ್ನಾಕ್ ದಂಪತಿಯನ್ನು ಬಂಧಿಸಿದ್ದಾರೆ.

ಹಾಸನ ನಗರದಲ್ಲಿ ವಾಸವಿರುವ ಚಿತ್ರದುರ್ಗ ಮೂಲದ ಆರ್.ಡಿ.ವನಿತಾ (24) ಹಾಗೂ ಡಿ.ಚೇತನ್(29) ದಂಪತಿಯನ್ನು ಶನಿವಾರ ಮೈಸೂರು ರೈಲ್ವೆ ನಿಲ್ದಾಣದ ಬಳಿ ಬಂಧಿಸಿ, ಸುಮಾರು 5.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಕಟ್ಟಿಂಗ್ ಪ್ಲೇಯರ್, ಖಾರದಪುಡಿ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮೈಸೂರಿನ ಹೆಬ್ಬಾಳು 1ನೇ ಹಂತ, 3ನೇ ಮುಖ್ಯ ರಸ್ತೆಯ ಇಡಬ್ಲ್ಯೂಎಸ್‌ನ ನಂ.67ನೇ ಮನೆ ನಿವಾಸಿ ಮಲ್ಲಯ್ಯ ಅವರ ಪತ್ನಿ, ನಿವೃತ್ತ ಶಿಕ್ಷಕಿ ಶಾಂತಮ್ಮ (65) ಅವರು ಜು.10ರಂದು ಮಧ್ಯಾಹ್ನ 12.45 ಗಂಟೆಯಲ್ಲಿ ಮನೆಯಲ್ಲಿದ್ದಾಗ ಆರೋಪಿ ದಂಪತಿ ಬಾಡಿಗೆಗೆ ಮನೆ ಬೇಕಾಗಿದೆ ಎಂದು ಕೇಳಿದ್ದರು. ಮನೆ ಖಾಲಿ ಇದ್ದ ಕಾರಣ ಅವರನ್ನು ಕರೆದು ಮನೆಯೊಳಗೆ ಕೂರಿಸಿದ ಶಾಂತಮ್ಮ, ಅವರ ಬಗ್ಗೆ ವಿಚಾರಿಸಿದ್ದರು. ಆ ವೇಳೆ ಯುವತಿ, ನಾನು ಗರ್ಭಿಣಿ. ಏನಾದರೂ ತಿನ್ನಲು–ಕುಡಿಯಲು ಕೊಡಿ ಎಂದು ಕೇಳಿದ್ದರಿಂದ ಶಾಂತಮ್ಮ ಕಾಫಿ ಮಾಡಿಕೊಟ್ಟ ಬಳಿಕ ಖಾಲಿ ಇದ್ದ ನೆಲಮಹಡಿಯ ಎರಡು ಕೊಠಡಿಗಳುಳ್ಳ ಮನೆ ತೋರಿಸಿ, ಏನೇನು ಸೌಲಭ್ಯವಿದೆ ಎಂಬುದನ್ನು ವಿವರಿಸಿದ್ದರು.

ಮನೆ ನೋಡಿ, ನಮಗೆ ಒಪ್ಪಿಗೆಯಾಗಿದೆ ಎಂದ ದಂಪತಿ, ಊಟ ಮಾಡಿಕೊಂಡು ಎಟಿಎಂನಲ್ಲಿ ಹಣ ಡ್ರಾ ಮಾಡಿಕೊಂಡು ಮಧ್ಯಾಹ್ನ ಅಡ್ವಾನ್ಸ್ ಕೊಡುತ್ತೇವೆಂದು ಹೋಗಿದ್ದಾರೆ. ಈ ವೇಳೆ ಶಾಂತಮ್ಮ ಧರಿಸಿದ್ದ ಒಡವೆಗಳನ್ನು ನೋಡಿಕೊಂಡು, ಖತರ್ನಾಕ್ ಯೋಚನೆ ಮಾಡಿದ್ದರು. ಮತ್ತೆ ಮಧ್ಯಾಹ್ನ 3 ಗಂಟೆಗೆ ವಾಪಸ್ ಶಾಂತಮ್ಮ ಅವರ ಬಳಿ ಬಂದು, ಎಟಿಎಂ ಕಾರ್ಡ್ ವರ್ಕ್ ಆಗುತ್ತಿಲ್ಲ, ಮೊಬೈಲ್ ನಂಬರ್ ಹೇಳಿ ಫೋನ್‌ಪೇ ಅಥವಾ ಗೂಗಲ್‌ಪೇ ಮಾಡುತ್ತೇವೆ ಎಂದಿದ್ದರು. ಆಗ ಶಾಂತಮ್ಮ ಅದ್ಯಾವುದೂ ಇಲ್ಲ ಎಂದಾಗ ಊರಿಗೆ ಹೋಗಿ ಶುಕ್ರವಾರ ಸಾಮಾನುಗಳ ತೆಗೆದುಕೊಂಡು ಬಂದು, ಆ ದಿನವೇ ಅಡ್ವಾನ್ ನೀಡಿ, ಹಾಲು ಉಕ್ಕಿಸಿ ಮನೆಗೆ ಬರುತ್ತೇವೆ ಎಂದು ಹೇಳಿದ್ದರು. ಶಾಂತಮ್ಮ ಇವರ ಮಾತನ್ನು ನಂಬಿದ್ದರು.

ಬಳಿಕ ಆ ದಂಪತಿ, ಸ್ವಲ್ಪ ಸಮಯ ವಿಶ್ರಾಂತಿ ಪಡೆಯುತ್ತೇವೆ, ಮನೆಯ ಕೀ ಕೊಡುವಿರಾ? ಎಂದು ಕೇಳಿ, ಫೋನ್ ಚಾರ್ಜರ್ ಅನ್ನೂ ಶಾಂತಮ್ಮ ಅವರಿಂದ ಪಡೆದಿದ್ದರು. ಅರ್ಧ ಗಂಟೆ ನಂತರ ಶಾಂತಮ್ಮ ಅವರಿದ್ದ ಮನೆಗೆ ಬಂದು ಸಂಜೆ 5 ಗಂಟೆಗೆ ಬೆಂಗಳೂರಿಗೆ ಟ್ರೈನ್ ಇದೆ, ನಾವು ಹೋಗುತ್ತೇವೆ ಎಂದು ಚಾರ್ಜರ್ ವಾಪಸ್ ಕೊಟ್ಟು, ಕುಡಿಯಲು ನೀರು ಕೇಳಿದ್ದಾರೆ. ಶಾಂತಮ್ಮನವರು, ಅಡುಗೆ ಮನೆಗೆ ಹೋಗಿ ಬಾಟಲಿಗೆ ನೀರು ತುಂಬಿಸಿ ಕೊಳ್ಳುತ್ತಿದ್ದಾಗ ಹಿಂದಿನಿಂದ ಹೋಗಿ ಶಾಂತಮ್ಮರ ತಬ್ಬಿ ಹಿಡಿದು, ಬಾಯಿ ಅದುಮಿಟ್ಟುಕೊಂಡು ಅವರನ್ನು ಎಳೆದು ತಂದು ಮೆಟ್ಟಿಲು ಬಳಿ ಕಬ್ಬಿಣದ ರಾಡ್‌ಗೆ ಸೀರೆಯಿಂದ ಕಟ್ಟಿ ಹಾಕಿ, ಕೈ–ಕಾಲುಗಳನ್ನೂ ಕಟ್ಟಿ, ಬಾಯಿಗೆ ಬಟ್ಟೆ ತುರುಕಿ, ಕೂಗಾಡಿದರೆ ಕಣ್ಣಿಗೆ ಖಾರದ ಪುಡಿ ಹಾಕುತ್ತೇವೆ ಎಂದು ಬ್ಯಾಗ್‌ನಿಂದ ಚಾಕು ತೆಗೆದು ಬೆದರಿಸಿ, ಕೊರಳಲ್ಲಿದ್ದ 65 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡು, ಕಟ್ಟಿಂಗ್ ಪ್ಲೇಯರ್‌ನಿಂದ ಕೈಯಲ್ಲಿದ್ದ 12 ಗ್ರಾಂ ಚಿನ್ನದ ಬಳೆಯನ್ನು ಕಟ್ ಮಾಡಿಕೊಂಡು ಸಂಜೆ ಸುಮಾರು 4.30ರ ವೇಳೆಗೆ ಪರಾರಿಯಾಗಿದ್ದರು.

ಶಾಂತಮ್ಮ ಪ್ರಯಾಸಪಟ್ಟು ಅರಚುವುದನ್ನು ಕೇಳಿಸಿಕೊಂಡ ಎದುರು ಮನೆಯ ಮಹಿಳೆ ಓಡಿ ಬಂದು ಕಟ್ಟು ಬಿಡಿಸಿ ನೀರು ಕುಡಿಸಿದ್ದರು. ವಿಷಯ ತಿಳಿದು, ಶಾಂತಮ್ಮ ಅವರ ಸೊಸೆ ಘಟನೆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳ ಪರಿಶೀಲಿಸಿ, ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಾಂತ್ರಿಕ ಮತ್ತು ಗುಪ್ತ ಮಾಹಿತಿದಾರರ ಸಹಾಯದೊಂದಿಗೆ ತನಿಖೆ ಕೈಗೊಂಡಿದ್ದರು. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಮತ್ತು ವಿಜಯನಗರ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಮಾರ್ಗದರ್ಶನದಲ್ಲಿ ಹೆಬ್ಬಾಳ ಠಾಣೆ ಇನ್ಸ್‌ಪೆಕ್ಟರ್ ಎ.ಮಲ್ಲೇಶ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಕೀರ್ತಿ ಮತ್ತು ಪ್ರವೀಣ್, ಸಿಬ್ಬಂದಿ ಹರೀಶ್, ಮಹೇಶ್ ಹೊಸಮನಿ, ವೆಂಕಟೇಶ್, ಸುಭಾನಲ್ಲಾ ಬಾಲ್‌ದಾರ್, ಆಶಾ, ಟೆಕ್ನಿಕಲ್ ಸೆಲ್‌ನ ಕುಮಾರ್ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದ್ದಾರೆ. ಈ ತಂಡವನ್ನು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಶಂಸಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 15 ಜುಲೈ 2024

ಹದಗೆಟ್ಟ ಭಾಗಮಂಡಲ–ಕಕ್ಕಬೆ ರಸ್ತೆ

● ಸಂಚರಿಸಲು ವಾಹನ ಸವಾರರ ಪರದಾಟ ● ದುರಸ್ತಿಗೆ ಸಾರ್ವಜನಿಕರ ಆಗ್ರಹ



ಭಾಗಮಂಡಲ–ಕಕ್ಕಬೆ ಮುಖ್ಯ ರಸ್ತೆಯಲ್ಲಿ ಹೊಂಡಗಳಾಗಿರುವುದು.

ನಾಪೋಕ್ಲು, ಜು.14–ಸಮೀಪದ ಹಳೇ ತಾಲೂಕಿನ ಶ್ರೀ ಪೊನ್ನು ಮುತ್ತಪ್ಪ ದೇವಸ್ಥಾನ ಬಳಿ ಭಾಗಮಂಡಲ–ಕಕ್ಕಬೆ ಮುಖ್ಯ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ಸಂಚರಿಸಲು ಪರದಾಡುವಂತಾಗಿದೆ.

ನಾಪೋಕ್ಲುವಿನಿಂದ ಹಳೇ ತಾಲೂಕು, ಭಾಗಮಂಡಲ, ಕಕ್ಕಬೆ ಮುಖ್ಯ ರಸ್ತೆಯಲ್ಲಿ ಹೊಂಡಗಳಾಗಿ ಏಕಮುಖ ರಸ್ತೆಯಂತಾಗಿದೆ. ದ್ವಿಚಕ್ರ ವಾಹನ ಸವಾರರು ಸೇರಿದಂತೆ ಇತರ ವಾಹನ ಸವಾರರು ಸಂಚರಿಸಲು ಜೀವ ಭಯಪಡುವಂತಾಗಿದೆ.

ಸಂತೆಯ ದಿನವಾದ ಸೋಮವಾರ ವಾಹನಗಳ ಸಂಖ್ಯೆ ಹೆಚ್ಚಿದ್ದು, ಗುಂಡಿ ತಪ್ಪಿಸಲು ಹೋಗಿ ಚಾಲಕರು ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರು ಹಲವು ಬಾರಿ ಬಿದ್ದು ಗಾಯಗೊಂಡಿದ್ದಾರೆ. ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲಿ ಗುಂಡಿಗಳಾಗಿ ಕೆಸರು ನೀರು ತುಂಬಿಕೊಂಡಿದೆ.

ಭಾಗಮಂಡಲ ಹಾಗೂ ಕಕ್ಕಬೆ ಕಡೆಗಳಿಂದ ಬರುವ ವಾಹನಗಳು ಈ ಕಿರುದಾರಿಯಲ್ಲಿ ಸಂಚರಿಸುತ್ತಿವೆ. ವಾಹನ ಸಂಚಾರಕ್ಕೆ ತೀವ್ರ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಕೂಡಲೇ ರಸ್ತೆ ಗುಂಡಿ ಮುಚ್ಚಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಈ ರಸ್ತೆಯಲ್ಲಿ ಎದುರಿನಿಂದ ಬರುವ ವಾಹನಗಳಿಗೆ ಜಾಗ ನೀಡಲು ಆಗುತ್ತಿಲ್ಲ. ರಸ್ತೆಯಲ್ಲಿ ಹೊಂಡ ಬಿದ್ದು, ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ಕೂಡಲೇ ರಸ್ತೆಯಲ್ಲಿನ ಗುಂಡಿ ಮುಚ್ಚಿ, ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು.

–ಶಂಭು ಅಯ್ಯಣ್ಣ, ಶಾಲಾ ಬಸ್ ಚಾಲಕ, ನೆಲಜಿ



ರಸ್ತೆಯಲ್ಲಿ ಗುಂಡಿ ಬಿದ್ದು ವಾಹನಗಳು ಒಂದೇ ಬದಿಯಲ್ಲಿ ಸಂಚರಿಸುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ವರ್ಷವೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ದುಸ್ಥಿತಿಯಿಂದ ಇಲ್ಲಿ ಅಪಘಾತಗಳಾಗುತ್ತಿವೆ. ಹೆಚ್ಚಿನ ಅನಾಹುತ ಆಗುವ ಮೊದಲು ಸಂಬಂಧಪಟ್ಟವರು ಗುಂಡಿಗಳನ್ನು ಮುಚ್ಚಿಸಬೇಕು.

–ಸಿ.ಎಚ್.ಮೈದು, ಆಟೋ ಚಾಲಕ, ಎಮ್ಮೆಮಾಡು

ಮಹಿಳೆಯರಲ್ಲಿ ಶಿಕ್ಷಣದ ಅರಿವು ಹೆಚ್ಚಾದರೆ ಸುಶಿಕ್ಷಿತ ಸಮಾಜ ನಿರ್ಮಾಣ



ಕುಶಾಲನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕುಶಾಲನಗರ, ಜು.14–ಮಹಿಳೆಯರಲ್ಲಿ ಶಿಕ್ಷಣದ ಅರಿವು ಹೆಚ್ಚಾದರೆ ಸುಶಿಕ್ಷಿತ ಸಮಾಜ ನಿರ್ಮಾಣ ಸಾಧ್ಯ ಎಂದು ಉಪನ್ಯಾಸಕ ಡಾ.ಜಮೀರ್ ಅಹಮದ್ ಅಭಿಪ್ರಾಯಿಸಿದರು.

ಪಟ್ಟಣದ ಅಮೃತ ಭಾವನ ಮಹಿಳಾ ಸಂಘದ ವತಿಯಿಂದ ಮಹಾಲಕ್ಷ್ಮಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿ ಕುಟುಂಬದಲ್ಲಿ ಹೆಣ್ಣು ಮಕ್ಕಳು ಸಾಕ್ಷರತೆ ಮಹತ್ವವನ್ನು ತಿಳಿದುಕೊಂಡರೆ ಎಲ್ಲರನ್ನೂ ಶೈಕ್ಷಣಿಕ ಮುನ್ನೆಲೆಗೆ ತರಲು ಸಾಧ್ಯ. ಇದರಿಂದ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವಾಗಲಿದೆ ಎಂದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶ ಪಡೆದುಕೊಂಡು ಸಾಧನೆ ಮಾಡಿದಂತಹ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಮೂಲಕ ಅವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವಂತಹ ಕಾರ್ಯ ಶ್ಲಾಘನೀಯ. ಶಿಕ್ಷಣದ ಮಹತ್ವದ ಕುರಿತು ತಿಳಿದುಕೊಳ್ಳಲು ಇಂತಹ ಕಾರ್ಯಕ್ರಮಗಳನು ಪ್ರತಿ ಸಮುದಾಯದಲ್ಲೂ ನಡೆಯಬೇಕು. ಇದರಿಂದ ಸಾಮಾಜಿಕ ಜವಾಬ್ದಾರಿ ಮತ್ತು ಹೊಣೆಗಾರಿಕೆ ಮತ್ತಷ್ಟು ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೆಂಗಳೂರಿನ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕ ಕುಮಾರಸ್ವಾಮಿ, ಶಿಕ್ಷಣಕ್ಕೆ ನಿರಂತರ ಬೆಂಬಲ ಮತ್ತು ಪ್ರೋತ್ಸಾಹ ನೀಡಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಅಭಿನಂದಿಸುವ ಕೆಲಸ ನಡೆಯಬೇಕು. ಏಕೆಂದರೆ, ಶಿಕ್ಷಣ ಜ್ಞಾನದ ಸಂಪತ್ತು. ಹಾಗಾಗಿ ಶಿಕ್ಷಣದ ಮಹತ್ವ ಮತ್ತು ಅನಿವಾರ್ಯತೆಯನ್ನು ನಾವೆಲ್ಲರೂ ಅರಿತುಕೊಂಡು ಶಿಕ್ಷಣವನ್ನು ಕೇವಲ ಉದ್ಯೋಗಕ್ಕೆ ಮಾತ್ರ ಸೀಮಿತ ಮಾಡದೆ, ಸಮಗ್ರ ಶಿಕ್ಷಣದ ಮೂಲಕ ಸಾಮಾಜಿಕ ಬದುಕನ್ನು ರೂಪಿಸಿಕೊಳ್ಳಬೇಕು ಹಾಗೂ ಪ್ರಾಮಾಣಿಕತೆಯಿಂದ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವುದಕ್ಕೆ ಒತ್ತು ನೀಡಬೇಕು ಎಂದು ತಿಳಿಸಿದರು.

ಅಮೃತ ಭಾವನ ಮಹಿಳಾ ಸಂಘದ ಅಧ್ಯಕ್ಷೆ ಹೆಚ್.ಕೆ.ಶಾಂತಿ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಮೃತ ಭಾವನ ಮಹಿಳಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಜಿಲ್ಲಾ ಪರಿಶಿಷ್ಟ ಜಾತಿ, ಪಂಗಡದ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಬಿ.ಸಿ.ರಾಜು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ, ಶಿಕ್ಷಕಿ ರೂಪಾ ಹಾಜರಿದ್ದರು.

ರೋಟರಿಯಿಂದ ಶಿಕ್ಷಣ, ಆರೋಗ್ಯಕ್ಕೆ ಒತ್ತು



ವಿರಾಜಪೇಟೆ ರೋಟರಿ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ರೋಟರಿ ಆಡಳಿತ ಮಂಡಳಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ವಿರಾಜಪೇಟೆ, ಜೂ.14–ರೋಟರಿ ಸಂಸ್ಥೆ ಹಲವಾರು ವರ್ಷಗಳಿಂದ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚು ಒತ್ತು ನೀಡುತ್ತಿದೆ ಎಂದು ರೋಟರಿ ಸಂಸ್ಥೆ ಜಿಲ್ಲಾ ಚೇರ್‌ಮೆನ್ (31-81) ಎಂ.ಎಸ್.ರಘು ಹೇಳಿದರು.

ನಗರದ ತಾಲೂಕು ಮೈದಾನ ಬಳಿಯ ರೋಟರಿ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಿದ್ದ ರೋಟರಿ ಆಡಳಿತ ಮಂಡಳಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ರೋಟರಿ ಸಂಸ್ಥೆ ರಾಜ್ಯದಲ್ಲಿ 6 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ವಿಧಾನ, ಜೀವನದಲ್ಲಿ ನಂಬಿಕೆ ಮತ್ತು ನಿರ್ಧಾರ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಜತೆಗೆ ರಕ್ತನಿಧಿ ಕೇಂದ್ರ ಸ್ಥಾಪನೆ, ಶಾಲಾ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ದೇವಣಿರ ಎಂ.ಕಿರಣ್ ಮಾತನಾಡಿ, ರೋಟರಿ ಸಂಸ್ಥೆ ಜನರಿಗೆ ಸಂಧ್ಯಾ ಸುರಕ್ಷ ಯೋಜನೆ ಹಾಗೂ ಕ್ಯಾನ್ಸರ್ ತಪಾಸಣೆ, ಚಿಕಿತ್ಸೆ ನಡೆಸಲಾಗುತ್ತಿದೆ. ಅಂಗನವಾಡಿ ಮತ್ತು ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು. ಪ್ರತಿವರ್ಷ ಯೋಜನೆಗಳನ್ನು ಹೆಚ್ಚಿಸಲಾಗುತ್ತಿದೆ ಎಂದರು.

ಇದೇ ವೇಳೆ ಅಧ್ಯಕ್ಷ ಪ್ರಣಾವ್ ಚಿತ್ರಭಾನು ಅವರಿಗೆ ಚೇರ್‌ಮೆನ್ ಎಂ.ಎಸ್.ರಘು ಅಧಿಕಾರ ಹಸ್ತಾಂತರಿಸಿದರು. ಮಾಜಿ ಅಧ್ಯಕ್ಷ ಎಂ.ಎಂ.ಪೂವಣ್ಣ, ಕಾರ್ಯದರ್ಶಿ ಬಿ.ಬಿ.ಮಾದಪ್ಪ, ಚಂಗಪ್ಪ, ಸದಸ್ಯರನ್ನು ಹಾಜರಿದ್ದರು.

ಜು.27ರಿಂದ ರಾಜ್ಯಮಟ್ಟದ ಕೆಸರು ಗದ್ದೆ ಕ್ರೀಡೆ

ನಾಪೋಕ್ಲು, ಜು.14–ಸಮೀಪದ ಬೆಟ್ಟಗೇರಿ ಗ್ರಾಮ ಪಂಚಾಯಿತಿಯ ಅರ್ವತೋಕ್ಲು ಗ್ರಾಮದ ಬೇಕೋಟ್ ಮಕ್ಕ ಕ್ಲಬ್ ವತಿಯಿಂದ ಜು.27 ಮತ್ತು 28ರಂದು ನಾಲ್ಕನೇ ವರ್ಷದ ರಾಜ್ಯಮಟ್ಟದ ಕೆಸರು ಗದ್ದೆ ಕ್ರೀಡಾಕೂಟ ತಳೂರು ಎಂ.ಚಂಗಪ್ಪ ಹಾಗೂ ತಳೂರು ಎಂ.ಕುಶಾಲಪ್ಪನವರ ಗದ್ದೆಯಲ್ಲಿ ನಡೆಯಲಿದೆ.

ಜು.27ರಮದು ಕ್ರಿಕೆಟ್ ಪಂದ್ಯಾವಳಿ ಹಾಗೂ 28ರುದು ಮಹಿಳೆ ಹಾಗೂ ಪುರುಷರಿಗೆ ಹಗ್ಗಜಗ್ಗಾಟ, ಓಟ, ದಂಪತಿಗಳಿಗೆ ಹಾಳೆ ಎಳೆಯುವುದು, ಗೂಟ ಓಟದ ಸ್ಪರ್ಧೆ ಆಯೋಜಿಸಲಾಗಿದೆ. ಭೋಜನದ ವ್ಯವಸ್ಥೆ ಇರುತ್ತದೆ. 28ರಂದು ಮಧ್ಯಾಹ್ನ 3.30ಕ್ಕೆ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಜು.18ರ ಸಂಜೆ 5 ಗಂಟೆಯೊಳಗೆ ಹಗ್ಗಜಗ್ಗಾಟ ಹಾಗೂ ಕ್ರಿಕೆಟ್ ಪಂದ್ಯಾವಳಿಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಸರು ನೋಂದಣಿಗೆ ಕುಮಾರ ಧರ (ಅಣ್ಣಯ್ಯ), ತಳೂರು ಮೊ.ಸಂ: 9611475760, ಜೀತು ತಳೂರು ಮೊ.ಸಂ: 7349527337, ಸಜನ್ ಪೂಣಚ್ಚ ತಳೂರು ಮೊ.ಸಂ: 7338151277 ಹಾಗೂ ವನಿಶ್ ಕುಶಾಲಪ್ಪ ತಳೂರು ಮೊ. ಸಂ: 9906894429 ಅನ್ನು ಸಂಪರ್ಕಿಸಬಹುದು.

ನಲ್ವತ್ತೋಕ್ಲಿನಲ್ಲಿ ಡೆಂಗ್ಯೂ ಜಾಗೃತಿ



ನಲ್ವತ್ತೋಕ್ಲಿನಲ್ಲಿ ಡೆಂಗ್ಯೂ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ಪೊನ್ನಂಪೇಟೆ, ಜು.14–ಹೆಚ್ಚುತ್ತಿರುವ ಡೆಂಗ್ಯೂ ನಿಯಂತ್ರಣ ಮತ್ತು ನಿರ್ಮೂಲನೆಗಾಗಿ ಜನಜಾಗೃತಿ ಕಾರ್ಯಕ್ರಮವನ್ನು ಬಿಳುಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಲ್ವತ್ತೋಕ್ಲು ಗ್ರಾಮದಲ್ಲಿ ಆಯೋಜಿಸಲಾಗಿತ್ತು.

ಗ್ರಾಪಂ ಸದಸ್ಯರಾದ ಪಿ.ಎ.ಹನೀಫ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರ ತಂಡ ಆರೋಗ್ಯ ಇಲಾಖೆ ನಿರ್ದೇಶನದಂತೆ ಡೆಂಗ್ಯೂ ಬಗ್ಗೆ ಗ್ರಾಮದ ಮನೆ ಮನೆಗಳಿಗೆ ತೆರಳಿ ಜಾಗೃತಿ ಮೂಡಿಸಿತು.

ಕಾರ್ಯಕ್ರಮದಲ್ಲಿ ಮನೆಗಳಲ್ಲಿ ನೀರು ಸಂಗ್ರಹಿಸುವ ಸ್ಥಳಗಳನ್ನು ಪರಿಶೀಲಿಸಿ ಡೆಂಗ್ಯೂ ಸೊಳ್ಳೆಗಳ ಲಾರ್ವ ನಾಶಗೊಳಿಸುವ ಬಗ್ಗೆ ವಿಶೇಷವಾಗಿ ತಿಳಿಸಲಾಯಿತು. ಡೆಂಗ್ಯೂ ಖಾತ್ರಿಯಾದರೆ ರೋಗಿ ಚಿಕಿತ್ಸೆ ಹಾಗೂ ವಿಶ್ರಾಂತಿ ಪಡೆಯಬೇಕು ಎಂದು ಜಾಗೃತಿ ಮೂಡಿಸಲಾಯಿತು.

ಗ್ರಾಪಂ ಸದಸ್ಯ ಪಿ.ಎ.ಹನೀಫ್ ಮಾತನಾಡಿ, ಆರೋಗ್ಯದ ದೃಷ್ಟಿಯಿಂದ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸಿದರೆ ರೋಗಗಳಿಂದ ಸಹಜವಾಗಿಯೇ ಮುಕ್ತಿ ಪಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ಸ್ಥಳೀಯರಾದ ಕೆ.ಎ.ಜುಬೈರ್, ಡಿ.ಎಂ. ಮುಸ್ತಫಾ, ಪಿ.ಎ.ನೌಫಲ್, ಆಶಾ ಕಾರ್ಯಕರ್ತರು ಹಾಜರಿದ್ದರು.

ಸಿಎಂ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿಯಿಂದ ಪಂಜಿನ ಮೆರವಣಿಗೆ



ಚಾಮರಾಜನಗರದಲ್ಲಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಸಿಎಂ ರಾಜೀನಾಮೆಗೆ ಒತ್ತಾಯಿಸಿ ಪಂಜಿನ ಮೆರವಣಿಗೆ ನಡೆಸಿದರು.

ಚಾಮರಾಜನಗರ, ಜು.14–ಮೈಸೂರಿನ ಮುಡಾ ಹಗರಣದಲ್ಲಿ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನ ಮುಂಭಾಗದಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜ್ ನೇತೃತ್ವದಲ್ಲಿ ಮೆರವಣಿಗೆ ಹೊರಟ ಕಾರ್ಯಕರ್ತರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದರು. ನಂತರ ತ್ಯಾಗರಾಜ್ ರಸ್ತೆ ಮಾರ್ಗವಾಗಿ ಭುವನೇಶ್ವರಿ ವೃತ್ತ ತಲುಪಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಮುಡಾ ಹಗರಣದಲ್ಲಿ ಸಿಲುಕಿರುವ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವುದು ವಿರೋಧ ಪಕ್ಷಗಳ ಹಕ್ಕು. ಇದನ್ನು ಕಸಿದುಕೊಳ್ಳಲು ಮುಂದಾಗಿರುವ ರಾಜ್ಯ ಸರ್ಕಾರ ಮತ್ತೊಂದು ತುರ್ತು ಪರಿಸ್ಥಿತಿ ಉಂಟು ಮಾಡುತ್ತಿದೆ ಎಂದು ದೂರಿದರು.

ಅಹಿಂದಾ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಆ ವರ್ಗಗಳಿಗೆ ಅನ್ಯಾಯ ಮಾಡುತ್ತಿದ್ದಾರೆ. ಈಗ ಪತ್ನಿಗೆ ಹೆಸರಿಗೆ ನೂರಾರು ಕೋಟಿ ರೂ. ಮೌಲ್ಯದ ನಿವೇಶನಗಳನ್ನು ಪಡೆದುಕೊಂಡಿರುವುದು. ಅಲ್ಲದೇ ತಮ್ಮ ಆಪ್ತರಿಗೆ ಮುಡಾದಿಂದ ಅಕ್ರಮವಾಗಿ ನಿವೇಶನ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈಗ ಈ ಎಲ್ಲಾ ಹಗರಣಗಳು ಬಹಿರಂಗವಾಗುತ್ತಿದ್ದಂತೆ ವಿಪಕ್ಷಗಳು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮುಂದಾದರೆ ಹತಾಶರಾಗಿ ಅಹಿಂದಾ ವರ್ಗದಿಂದ ಬಂದ ನಾನು ಸಿಎಂ ಆಗಿರುವುದು ಬಿಜೆಪಿಗೆ ಇಷ್ಟವಿಲ್ಲ ಎಂದು ಹೇಳುವುದಕ್ಕೆ ನಾಚಿಕೆಯಾಗಬೇಕು ಎಂದು ಪ್ರತಿಭಟನಾಕಾರರು ಜರಿದರು.

ಪ್ರತಿಭಟನೆಯಲ್ಲಿ ಕಾಡಾ ಮಾಜಿ ಅಧ್ಯಕ್ಷ ಜಿ.ನಿಜಗುಣ ರಾಜು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ್, ಟೌನ್ ಪ್ರಧಾನ ಕಾರ್ಯದರ್ಶಿ ಪ್ರವೀಣ್, ಬುಲೆಟ್ ಚಂದ್ರು ಮಾರ್ಕೆಟ್ ಕುಮಾರ್, ಮಾಧ್ಯಮ ಪ್ರಮುಖ್ ಮಂಜುನಾಥ್, ರಾಮಸಮುದ್ರ ಶಿವು, ಗುರುಪ್ರಸಾದ್, ಕುಮಾರ್, ರಾಜೇಂದ್ರ ಹರಿ, ಫೋಟೋ ಕೃಷ್ಣ, ಬಂಗಾರ ನಾಯಕ, ಲೋಕೇಶ್, ಡ್ರೈವರ್ ಮಹದೇವಯ್ಯ, ಪ್ರದೀಪ್, ಲೋಕೇಶ್, ಕಿರಣ್ ಮೊದಲಾದವರು ಇದ್ದರು.

ಕ್ರೀಡಾಕೂಟದಲ್ಲಿ ಸಂಭ್ರಮಿಸಿದ ಪತ್ರಕರ್ತರು

ಕ್ರೀಡಾಕೂಟಕ್ಕೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಚಾಲನೆ



ಚಾನಗರನಗರದ ದೀನಬಂಧು ಶಾಲಾವರಣದಲ್ಲಿ ಆಯೋಜಿಸಿದ್ದ ಪತ್ರಕರ್ತರ ಕ್ರೀಡಾಕೂಟಕ್ಕೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಗುಂಡು ಎಸೆಯುವ ಮೂಲಕ ಚಾಲನೆ ನೀಡಿದರು.

ಚಾಮರಾಜನಗರ, ಜು.14–ಪತ್ರಕರ್ತರ ದಿನಾಚರಣೆ ಅಂಗವಾಗಿ ನಗರದ ದೀನಬಂಧು ಶಾಲಾವರಣದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರು ಹಾಗೂ ಅವರ ಕುಟುಂಬದವರಿಗೆ ಕ್ರೀಡಾಕೂಟಕ್ಕೆ ಆಯೋಜಿಸಲಾಗಿತ್ತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣ ಬೆಳಸಿಕೊಳ್ಳಲು ಕ್ರೀಡೆ ಸಹಕಾರಿಯಾಗಿದೆ. ಪತ್ರಕರ್ತರ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕು ಎಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಮಾತನಾಡಿ, ಪತ್ರಕರ್ತರು ಹಾಗೂ ಪೊಲೀಸರ ಕೆಲಸ ಬಹುತೇಕ ಒಂದೇ ರೀತಿಯಾಗಿದೆ. ಹೀಗಾಗಿ ಇಬ್ಬರೂ ಒತ್ತಡದಲ್ಲಿರುತ್ತೇವೆ. ಯಾವಾಗ ಏನಾಗುತ್ತದೆ ಎನ್ನುವುದು ಹೇಳಲಾಗುವುದಿಲ್ಲ. ನಾವುಗಳು ಸದಾ ಎಚ್ಚರದಿಂದ ಇರಬೇಕಾಗುತ್ತದೆ. ಎಂತಹ ಘಟನೆಗಳು ನಡೆದರೂ ಪೊಲೀಸರೊಂದಿಗೆ ಪತ್ರಕರ್ತರೂ ಸ್ಥಳಕ್ಕೆ ಹೋಗಬೇಕಾಗುತ್ತದೆ. ಪೊಲೀಸರು ಏನು ಕೆಲಸ ಮಾಡುತ್ತಾರೆ ಎನ್ನುವುದನ್ನು ಪತ್ರಕರ್ತರು ಹಾಗೂ ಪತ್ರಕರ್ತರು ಹೇಗೆ ವರದಿ ಮಾಡುತ್ತಾರೆ ಎನ್ನುವುದನ್ನು ಪೊಲೀಸರು ಗಮನಿಸುತ್ತಿರುತ್ತೇವೆ. ಇಂತಹ ಒತ್ತಡದ ಕೆಲಸಗಳ ನಡುವೆ ಸ್ವಲ್ಪ ಬಿಡುವು ಮಾಡಿಕೊಂಡು ಕ್ರೀಡೆಯಲ್ಲಿ ಭಾಗವಹಿಸಿ, ಆರೋಗ್ಯ ವೃದ್ಧಿಸಿಕೊಳ್ಳಬೇಕು. ಎಲ್ಲಾ ಧರ್ಮಕ್ಕಿಂತ ಪತ್ರಿಕಾ ಧರ್ಮ ಮೇಲು ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ದೇವರಾಜ ಕಪ್ಪಸೋಗೆ ಮಾತನಾಡಿ, ಜಿಲ್ಲೆ ಕ್ರೀಡಾ ಕ್ಷೇತ್ರದಲ್ಲಿ ಹಿಂದುಳಿದೆ. ಜಿಲ್ಲೆಯ ಜನಪ್ರತಿನಿಧಿಗಳಿಗೆ ಕ್ರೀಡಾ ಇಚ್ಛಾಶಕ್ತಿ ಇಲ್ಲ. ಹಾಗಾಗಿ ಜಿಲ್ಲೆಯ ಮಕ್ಕಳು ಜಿಲ್ಲಾ, ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಆಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಡಿವೈಎಸ್‌ಪಿ ಲಕ್ಷ್ಮಯ್ಯ, ಹಿರಿಯ ಪತ್ರಕರ್ತ ಅಬ್ರಹಾಂ ಡಿ.ಸಿಲ್ವ ಮಾತನಾಡಿದರು. ಸಂಘದ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಹಾಗೂ ಪತ್ರಕರ್ತರು ಹಾಜರಿದ್ದರು.

ಒತ್ತಡದಿಂದ ಕೊಂಚ ದೂರ

ಪತ್ರಕರ್ತರು ಹಾಗೂ ಅವರ ಕುಟುಂಬದವರು ವಿವಿಧ ಕ್ರೀಡೆಯಲ್ಲಿ ಭಾಗವಹಿಸಿ, ನಿತ್ಯದ ಕೆಲಸದ ಒತ್ತಡದಿಂದ ಕೊಂಚ ದೂರ ಉಳಿದರು. ವಿವಿಧ ಆಟೋಟಗಳಲ್ಲಿ ಪಾಲ್ಗೊಂಡು ಕ್ರೀಡಾ ಸ್ಪೂರ್ತಿ ಮೆರೆದರು.

100 ಮೀಟರ್ ಓಟ, ಮಡಕೆ ಒಡೆಯುವುದು, ಬಕೆಟ್ ಇನ್ ದ ಬಾಲ್, ಗುಂಡು ಎಸೆತ, ಲೆಮೆನ್ ಇನ್ ದ ಸ್ಪೂನ್, ಮ್ಯೂಸಿಕಲ್ ಚೇರ್, ಕೆರೆದಡ, ಕ್ರಿಕೆಟ್ ಇತರೆ ಆಟೋಟಗಳಲ್ಲಿ ಪತ್ರಕರ್ತರು ಹಾಗೂ ಅವರ ಕುಟುಂಬದವರು ಭಾಗವಹಿಸಿ ಸಂಭ್ರಮಿಸಿದರು.

ಜು.21ರಂದು ಪತ್ರಕರ್ತರ ದತ್ತಿ ಪ್ರಶಸ್ತಿ ಪ್ರದಾನ

ಹನೂರು, ಜು.14–ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪ್ರತಿವರ್ಷ ನೀಡುವ ದತ್ತಿ ಪ್ರಶಸ್ತಿಗೆ ಇಬ್ಬರು ಹಿರಿಯ ಪತ್ರಕರ್ತರನ್ನು ಆಯ್ಕೆ ಮಾಡಲಾಗಿದೆ ಎಂದು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಹದೇಶ್ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ವಸತಿಗೃಹದಲ್ಲಿ ದತ್ತಿ ಪ್ರಶಸ್ತಿ ಆಯ್ಕೆ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ಹಿರಿಯ ಪತ್ರಕರ್ತರಾದ ಮೈಸೂರುಮಿತ್ರ ತಾಲೂಕು ವರದಿಗಾರ ಆರ್.ಸೋಮಶೇಖರ್ ಹಾಗೂ ಪ್ರಜಾವಾಣಿ ವರದಿಗಾರ ಬಸವರಾಜ್ ಅವರನ್ನು ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಇಬ್ಬರು ಪತ್ರಕರ್ತರು 12 ವರ್ಷಗಳಿಂದ ತಾಲೂಕಿನ ಕಾಡಂಚಿನ ಗ್ರಾಮಗಳ ಮೂಲಸೌಲಭ್ಯ ಹಾಗೂ ಹಲವಾರು ಸಮಸ್ಯೆಗಳ ಬಗ್ಗೆ ಗಮನ ಸೆಳೆದು ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಈ ಇಬ್ಬರು ಪತ್ರಕರ್ತರಿಗೆ ಜು.21ರಂದು ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ನಡೆಯುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಂಘದ ಜಿಲ್ಲಾ ನಿರ್ದೇಶಕರಾದ ಪ್ರಭುಸ್ವಾಮಿ ಸುರೇಶ್, ತಾಲೂಕು ಕಾರ್ಯದರ್ಶಿ ಬಸವರಾಜು, ಸಹ ಕಾರ್ಯದರ್ಶಿ ಕೆ.ಗೋವಿಂದ್, ಖಜಾಂಚಿ ಮಹದೇವಸ್ವಾಮಿ, ನಿರ್ದೇಶಕರಾದ ಸೋಮಶೇಖರ್, ಮಧು, ಸದಸ್ಯರಾದ ಅಭಿಲಾಷ್, ಮಣಗಳ್ಳಿ ಮಹಾದೇವ, ನಂದೀಶ್, ಮಹದೇವಸ್ವಾಮಿ, ರಾಜೇಶ್, ಶಿವಕುಮಾರ್, ರವಿ ಹಾಜರಿದ್ದರು.

ಚಾಮರಾಜೇಶ್ವರ ಉದ್ಯಾನದಲ್ಲಿ ಸ್ವಚ್ಛತಾ ಕಾರ್ಯ



ಚಾಮರಾಜನಗರದ ಚಾಮರಾಜೇಶ್ವರ ಉದ್ಯಾನದಲ್ಲಿ ನಗರಸಭೆ, ಯೂತ್ ಫಾರ್ ಸೇವಾ ಮತ್ತು ಎನ್‌ಎಸ್‌ಎಸ್ ಘಟಕದಿಂದ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಚಾಮರಾಜನಗರ, ಜು.14–ದೇಶದ ಅಭಿವೃದ್ಧಿಗೆ ಸ್ವಯಂ ಸೇವಾ ಸಂಸ್ಥೆಗಳ ಕೊಡುಗೆ ಅಪಾರವಾಗಿದೆ. ಹಲವಾರು ಕ್ಷೇತ್ರಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದೆ ಎಂದು ಚಾಮರಾಜನಗರ ಯೂತ್ ಫಾರ್ ಸೇವಾ ಸಂಸ್ಥೆ ಮನೋಜ್ ತಿಳಿಸಿದರು.

ನಗರದ ಚಾಮರಾಜೇಶ್ವರ ಉದ್ಯಾನದಲ್ಲಿ ಚಾಮರಾಜೇಶ್ವರ ರಥೋತ್ಸವ ಅಂಗವಾಗಿ ನಗರಸಭೆ, ಯೂತ್ ಫಾರ್ ಸೇವಾ ಮತ್ತು ಚಾಮರಾಜನಗರ ವಿವಿ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಭಾನುವಾರ ನಡೆದ ಸ್ವಚ್ಛತಾ ಕಾರ್ಯದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರು ಸ್ವಚ್ಛತೆ ಬಗ್ಗೆ ಗಮನ ಹರಿಸಬೇಕು. ಸ್ವಚ್ಛತೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಜಾತ್ರೆ, ಉತ್ಸವ, ಸಮಾರಂಭಗಳಲ್ಲಿ ಕಸಗಳನ್ನು ನಿಗದಿತ ಸ್ಥಳಗಳಲ್ಲಿ ಹಾಕುವುದರಿಂದ ಸ್ವಚ್ಛತೆ ಕಾಪಾಡಬೇಕು ಎಂದರು.

ನಗರದಲ್ಲಿ ಹಲವಾರು ಎನ್‌ಜಿಓಗಳು ಸ್ವಯಂ ಪ್ರೇರಿತವಾಗಿ ಸೇವೆ ಸಲ್ಲಿಸುತ್ತಿವೆ. ಚಾಮರಾಜೇಶ್ವರ ರಥೋತ್ಸವ ಅಂಗವಾಗಿ ಎನ್‌ಜಿಓ ಕಾರ್ಯಕರ್ತರು ಪಾರ್ಕ್ ಸ್ವಚ್ಛಗೊಳಿಸಲು ಮುಂದಾಗಿದ್ದಾರೆ. ಎಲ್ಲಾ ಕೆಲಸಗಳನ್ನು ಸರ್ಕಾರದ ಇಲಾಖೆಗಳೆ ಮಾಡಲು ಸಾಧ್ಯವಿಲ್ಲ. ಅದಕ್ಕೆ ಸಂಘಟನೆಗಳು ಕೈ ಜೋಡಿಸಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಆರ್.ಮಹೇಶ್ ಕೋಡಿಉಗನೆ ಮಾತನಾಡಿ, ಜು.20ರಂದು ನಡೆಯುವ ಚಾಮರಾಜೇಶ್ವರ ರಥೋತ್ಸವಕ್ಕೆ ಲಕ್ಷಾಂತರ ಭಕ್ತರು ಬರುವುದರಿಂದ ಸ್ವಚ್ಛತೆಗೆ ಒತ್ತು ನೀಡಬೇಕು. ಸಾರ್ವಜನಿಕರು ಕಸಗಳನ್ನು ರಸ್ತೆಯಲ್ಲಿ ಹಾಕಬಾರದು. ಇದರಿಂದ ಸೊಳ್ಳೆಗಳು ಹೆಚ್ಚಾಗಿ ರೋಗಗಳು ಹರಡಲಿದೆ ಎಂದರು.

ಹಸಿರು ಪಡೆ ಕಾರ್ಯದರ್ಶಿ ಸತೀಶ್ ಸ್ವಚ್ಛತೆ ಕುರಿತು ಮಾತನಾಡಿದರು. ನಗರಸಭೆ ಆರೋಗ್ಯ ನಿರೀಕ್ಷಕ ಮಂಜುನಾಥ್ ಸ್ವಯಂ ಸೇವಕರಿಗೆ ಪ್ರಮಾಣ ಪತ್ರ ವಿತರಿಸಿದರು. ಯೂತ್ ಫಾರ್ ಸೇವಾ ಸಂಸ್ಥೆ ಮನೋಜ್, ಗ್ರಾಮಮಿತ್ರ ಫೌಂಡೇಷನ್ ಕಾರ್ಯದರ್ಶಿ ವಿಜಯಪ್ರಸಾದ್, ಸಮಾಜಸೇವಕರಾದ ಪರಮೇಶ್, ಸುರೇಶ್‌ಗೌಡ ಉಪಸ್ಥಿತರಿದ್ದರು.

ನಿರ್ದೇಶಕರಾಗಿ ಗೌಡಹಳ್ಳಿ ಮಹದೇವಸ್ವಾಮಿ ಆಯ್ಕೆ



ಮಹದೇವಸ್ವಾಮಿ

ಯಳಂದೂರು, ಜು.14– ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾದ ತಾಲೂಕು ನಿರ್ದೇಶಕರಾಗಿ ಗೌಡಹಳ್ಳಿ ಗ್ರಾಮದ ಮಹದೇವಸ್ವಾಮಿ (ಮನು) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಕಾರಾಪುರ ವಿರಕ್ತ ಮಠದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಮಹದೇವಸ್ವಾಮಿ (ಮನು) ಹೊರತುಪಡಿಸಿ ಬೇರೆಯವರು ಯಾರೂ ನಿರ್ದೇಶಕ ಸ್ಥಾನಕ್ಕೆ ಅರ್ಜಿ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿದ್ದ ಎಸ್.ಸಿದ್ದಲಿಂಗಸ್ವಾಮಿ ಅವಿರೋಧ ಆಯ್ಕೆ ಘೋಷಿಸಿದರು.

ಡ್ರೈವರ್ ಶಿವಣ್ಣ ನಿಧನ



ಬೇಗೂರು, ಜು.14–ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ನಿವಾಸಿ ಡ್ರೈವರ್ ಶಿವಣ್ಣ (56) ಭಾನುವಾರ ನಿಧನರಾದರು. ಮೃತರು ಪತ್ನಿ ಅಂಗನವಾಡಿ ಕಾರ್ಯಕರ್ತೆ ಕುಮಾರಿ, ಪುತ್ರ, ಪುತ್ರಿ ಅಗಲಿದ್ದಾರೆ. ಸ್ವಗ್ರಾಮ ಬೇಗೂರಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಶಾಸಕ ಗಣೇಶ್ ಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ಜಡಿ ಮಳೆ: ಜನಜೀವನ ಅಸ್ತವ್ಯಸ್ತ



ಬೇಗೂರಿನಲ್ಲಿ ಜಡಿ ಮಳೆ ಸುರಿದು ಜನಜೀವನ ಜೀವನ ಅಸ್ತವ್ಯಸ್ತವಾಯಿತು.

ಬೇಗೂರು, ಜು.14–ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿ ವ್ಯಾಪ್ತಿ ಜಡಿ ಮಳೆ ಸುರಿದು ಜನಜೀವನ ಅಸ್ತವ್ಯಸ್ತವಾಯಿತು.

ಮುಂಜಾನೆ 5 ಗಂಟೆಗೆ ಪ್ರಾರಂಭವಾದ ಮಳೆ ರಭಸವಾಗಿ ಸುರಿಯಿತು. ನಂತರ ತುಂತುರು ಮಳೆಯಾಯಿತು. ಹಾಲು ಮತ್ತು ಪತ್ರಿಕಾ ವಿತರಕರು ಮನೆ ಮನೆಗೆ ವಿತರಿಸಲು ಹರಸಾಹಸ ಪಡುವಂತಾಯಿತು. ಜೊತೆಗೆ ಸಾರ್ವಜನಿಕರು ಪರದಾಡುವಂತಾಯಿತು. ಮಣ್ಣಿನ ರಸ್ತೆಗಳು ಕೆಸರು ಗದ್ದೆಯಂತಾದವು.

ಲಂಡನ್‌ನ ಥೇಮ್ಸ್ ನದಿ ದಂಡೆಯಲ್ಲಿ

ಜು.20, 'ಪಾರ್ಲಿಮೆಂಟಿನ ಪ್ರದಕ್ಷಿಣೆಗಳು' ಪುಸ್ತಕ ಬಿಡುಗಡೆ

ಇದು ನನ್ನ ಜೀವನದ ಸಾರ್ಥಕ ಕ್ಷಣ: ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅಭಿಪ್ರಾಯ

ಕೆ.ಆರ್.ನಗರ, ಜು.14– ಅನುಭವ ಮಂಟಪದ ಮೂಲಕ ಜಗತ್ತಿನ ಮೊದಲ ಸಂಸತ್ ಆರಂಭಿಸಿ ಸಮಾನತೆಯ ಸಮಾಜಕ್ಕೆ ನಾಂದಿ ಹಾಡಿದ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಇರುವ ಲಂಡನ್ ನಗರದ ಥೇಮ್ಸ್ ನದಿ ದಂಡೆಯಲ್ಲಿ ಪಾರ್ಲಿಮೆಂಟಿನ ಪ್ರದಕ್ಷಿಣೆಗಳು ಪುಸ್ತಕ ಬಿಡುಗಡೆಯಾಗುತ್ತಿರುವುದು ನನ್ನ ಜೀವನದ ಸಾರ್ಥಕ ಕ್ಷಣ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಜು.20ರಂದು ನಡೆಯುವ ಪಾರ್ಲಿಮೆಂಟ್ ಪ್ರದಕ್ಷಿಣೆಗಳು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಲಂಡನ್‌ಗೆ ತೆರಳುತ್ತಿರುವ ತಮಗೆ ಪಟ್ಟಣದ ಕೃಷ್ಣ ಮಂದಿರದಲ್ಲಿ ಅಭಿಮಾನಿಗಳು ಮತ್ತು ಸ್ನೇಹಿತರು ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ನನ್ನ ಕೊನೆ ಉಸಿರು ಇರುವ ತನಕ ರಾಜಕಾರಣ ಮತ್ತು ಸಮಾಜದ ಆಗು–ಹೋಗುಗಳ ಬಗ್ಗೆ ನಿರಂತರವಾಗಿ ಬರೆಯುತ್ತೇನೆ ಎಂದರು.

ಓದುವ ಸಂಸ್ಕೃತಿ ಮತ್ತು ಜನಪರ ಮಾತನಾಡುವ ಚಾತಿ ಇದ್ದರೆ ರಾಜಕಾರಣಿ ಅಭಿವೃದ್ಧಿ ಕೆಲಸ ಮಾಡಿ ಜನರ ನಾಡಿ ಮಿಡಿತ ಅರಿಯಬಹುದು. ಇಂದಿನ ಬಹುತೇಕ ರಾಜಕೀಯ ನಾಯಕರು ಓದುವ ಹವ್ಯಾಸ ಬೆಳೆಸಿಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೆ.ಆರ್.ನಗರ ತಾಲೂಕಿನ ಅಡಗೂರು ಗ್ರಾಮದ ಬಡ ಕುಟುಂಬದಲ್ಲಿ ಜನಿಸಿದ ನನ್ನನ್ನು ಗುರುತಿಸಿದ ಹಿಂದುಳಿದ ವರ್ಗದ ನೇತಾರ ಡಿ. ದೇವರಾಜ ಅರಸರು ಶಾಸನಸಭೆಗೆ ಪ್ರವೇಶ ಪಡೆಯುವ ಅವಕಾಶ ನೀಡಿದರು. ಇದರ ಜೊತೆಗೆ ಕ್ಷೇತ್ರದ ಮತದಾರರು ನಿರಂತರವಾಗಿ ನನಗೆ ಆಶೀರ್ವಾದ ಮಾಡುತ್ತಿದ್ದಾರೆ ಎಂದು ಭಾವುಕರಾಗಿ ನುಡಿದರು.

ದೇಶಕ್ಕೆ ಸಾರ್ವಕಾಲಿಕ ಸಂವಿಧಾನ ರಚಿಸಿಕೊಟ್ಟ ಅಂಬೇಡ್ಕರ್ ದೇವರಾಗಿದ್ದು, ಸಂಸತ್ತು ದೇವಸ್ಥಾನವಾಗಿದೆ. ಹಾಗಾಗಿ ನಾವು ಇದನ್ನು ಅರಿತು ಗೌರವದಿಂದ ನಡೆದುಕೊಳ್ಳಬೇಕು. ನನ್ನ ರಾಜಕೀಯ ಏಳಿಗೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಪಾತ್ರ ಮಹತ್ವದ್ದಾಗಿದೆ ಎಂದರು.

ನಮ್ಮ ಸಂಸತ್ತು ಹಳೆಯ ಕಟ್ಟಡದಲ್ಲಿದ್ದರೆ ತುಂಬಾ ಚೆನ್ನಾಗಿತ್ತು ಎಂದ ಅವರು ಪಾರ್ಲಿಮೆಂಟ್ ಪ್ರದರ್ಶನಗಳು ನನ್ನ 9ನೇ ಪುಸ್ತಕವಾಗಿದ್ದು, ಇದು ಮನಸ್ಸಿಗೆ ಅಪಾರ ಖುಷಿ ನೀಡಿದ ಪುಸ್ತಕ ಎಂದು ಸಂತಸ ಹಂಚಿಕೊಂಡರು. ಇಂಡಿಯನ್ ಎಕ್ಸ್‌ಪ್ರೆಸ್ ಸ್ಥಾನಿಕ ಸಂಪಾದಕ ಕೆ.ಶಿವಕುಮಾರ್ ಮಾತನಾಡಿ, ಸಂಸತ್ತು ಮತ್ತು ಶಾಸನ ಸಭೆಗಳು ಕುಟುಂಬ ರಾಜಕಾರಣ ಮತ್ತು ರಿಯಲ್ ಎಸ್ಟೇಟ್ ಕುಳಗಳ ಅಡ್ಡೆಗಳಾಗಿದ್ದು ಪ್ರಜಾಪ್ರಭುತ್ವ ತನ್ನ ಪಾವಿತ್ರ್ಯ ಕಳೆದುಕೊಳ್ಳುತ್ತಿದೆ ಎಂದರು.

ಚುನಾಯಿತರಾಗಿ ಅಧಿಕಾರದ ಚುಕ್ಕಾಣಿ ಹಿಡಿಯುವವರು ಪರಸ್ಪರ ದ್ವೇಷ ರಾಜಕಾರಣ ಮಾಡುತ್ತಿದ್ದು, ಇದರಿಂದ ಸಂವಿಧಾನಕ್ಕೆ ಅಪಚಾರ ವಾಗುತ್ತಿದ್ದು ಜನರು ಎಚ್ಚೆತ್ತುಕೊಳ್ಳದಿದ್ದರೆ ದೇಶ ವಿನಾಶದ ಅಂಚಿಗೆ ತಲುಪಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮಾರಂಭದಲ್ಲಿದ್ದ ನೂರಾರು ಅಭಿಮಾನಿಗಳು ಮತ್ತು ಹಿತೈಷಿಗಳು ಪಾರ್ಲಿಮೆಂಟ್ ಪ್ರದರ್ಶನಗಳು ಪುಸ್ತಕ ಬಿಡುಗಡೆಗೆ ಲಂಡನ್ ನಗರಕ್ಕೆ ತೆರಳುತ್ತಿರುವ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮತ್ತು ಶಾಂತಮ್ಮ ವಿಶ್ವನಾಥ್ ಅವರನ್ನು ಸನ್ಮಾನಿಸಿ ಬೀಳ್ಕೊಟ್ಟರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್. ಚನ್ನಬಸಪ್ಪ, ಮಾಜಿ ಸದಸ್ಯರಾದ ಎಂ.ಟಿ. ಕುಮಾರ್, ಅಮಿತ್ ವಿ.ದೇವರಹಟ್ಟಿ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆಎನ್.ಬಸಂತ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇ ಗೌಡ, ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್, ಪುರಸಭೆ ಮಾಜಿ ಅಧ್ಯಕ್ಷ ಕೆ.ಜಿ.ಸುಬ್ರಹ್ಮಣ್ಯ, ಸದಸ್ಯ ಕೆ.ಪಿ.ಪ್ರಭುಶಂಕರ್, ಮಾಜಿ ಸದಸ್ಯರಾದ ಕೆ.ಎಸ್. ಉಮಾಶಂಕರ್, ಪೆರಿಸ್ವಾಮಿ, ರಾಜ್ಯ ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ಕಾರ್ಯದರ್ಶಿ ಹೆಚ್.ಡಿ.ಪ್ರಭಾಕರ ಜೈನ್, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ವೈ.ಎಸ್.ಕುಮಾರ್, ತಾಲೂಕು ಕಸಾಪ ಅಧ್ಯಕ್ಷ ಶಂಕರ್, ಹಿಂದೂ ಸೇನಾ ಸಮಿತಿ ಅಧ್ಯಕ್ಷ ಯು.ಕೃಷ್ಣಭಟ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಸ್.ಎಸ್.ಸಂದೇಶ್, ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಪ್ರಧಾನ ಕಾರ್ಯದರ್ಶಿ ಪ್ರಸನ್ನ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಸಾಹಿತಿಗಳಾದ ಪ್ರಭಾಕರ್, ಕೃಷ್ಣ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗಣೇಶ್, ಸುಕೃತಾ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ವೈ.ಆರ್. ಶಿವಕುಮಾರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ನಿರ್ದೇಶಕ ಕೆ.ಎಚ್.ಬುಡೀಗೌಡ, ಜಿಲ್ಲಾ ನಿರ್ದೇಶಕ ಬಸವರಾಜು, ಎಪಿಎಂಸಿ ಮಾಜಿ ನಿರ್ದೇಶಕ ಎಲ್.ಪಿ.ರವಿಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಾಜಶೇಖರ, ದಲಿತ ಮುಖಂಡ ನಾಗರಾಜು, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಸ್.ಪಿ.ಆನಂದ್, ಕ್ರೈಸ್ತ ಮುಖಂಡ ರವೀಶ್ ಮತ್ತಿತರರಿದ್ದರು.



ಕೆ.ಆರ್.ನಗರದ ಕೃಷ್ಣ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಹೆಚ್.ವಿಶ್ವನಾಥ್ ಮತ್ತು ಶಾಂತಮ್ಮ ದಂಪತಿಯನ್ನು ಸನ್ಮಾನಿಸಲಾಯಿತು.

ದೇಶದ ಇತರ ರಾಜಕಾರಣಿಗಳಿಗೆ ಹೆಚ್.ವಿಶ್ವನಾಥ್ ಮಾದರಿ

ಕೆ.ಆರ್.ನಗರ, ಜು.14– ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು ರಾಜಕಾರಣದ ಜೊತೆಗೆ ಸಾಹಿತ್ಯ ಕೃಷಿ ಹಾಗೂ ಬರವಣಿಗೆ ಮೈಗೂಡಿಸಿಕೊಂಡಿದ್ದು, ಇದು ದೇಶದ ಇತರ ರಾಜಕಾರಣಿಗಳಿಗೆ ಮಾದರಿ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥ ಪ್ರೊ.ಮುಜಾಫರ್ ಅಸಾದಿ ತಿಳಿಸಿದರು.

ಪಟ್ಟಣದ ಕೃಷ್ಣ ಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜಕಾರಣಿಗಳು ತಮ್ಮ ಬದುಕು ಮತ್ತು ಸೇವೆ ಜೊತೆಗೆ ಸಾಧನೆಯನ್ನು ಪುಸ್ತಕ ರೂಪದಲ್ಲಿ ದಾಖಲಿಸಿದರೆ ಅದು ಭವಿಷ್ಯದಲ್ಲಿ ಇತರರಿಗೆ ಮಾರ್ಗದರ್ಶನದ ದಾರಿ ದೀಪವಾಗಲಿದ್ದು, ಈ ಕೆಲಸವನ್ನು ಯುವ ರಾಜಕಾರಣಿಗಳು ಚಾಚು ತಪ್ಪದೆ ಮಾಡಬೇಕೆಂದರು.

ಹತ್ತಾರು ದೇಶಗಳ ಸಂಸತ್ತಿನ ರೀತಿ, ರಿವಾಜು ಮತ್ತು ಆಡಳಿತ ವೈಖರಿ ಬಗ್ಗೆ ಅಧ್ಯಯನ ಮಾಡಿ ಅದನ್ನು ಪುಸ್ತಕದಲ್ಲಿ ದಾಖಲಿಸಿರುವ ಹೆಚ್.ವಿಶ್ವನಾಥ್ ನಮ್ಮ ನಡುವೆ ಭಿನ್ನವಾಗಿ ನಿಲ್ಲುವ ವಿಭಿನ್ನ ರಾಜಕೀಯ ನಾಯಕ ಎಂದು ಬಣ್ಣಿಸಿದರು. ಲೇಖಕಿ ಮತ್ತು ಸಂಸ್ಕೃತಿ ಚಿಂತಕಿ ಶುಭದ ಪ್ರಸಾದ್, ಹೆಚ್.ವಿಶ್ವನಾಥ್ ಅವರ ಸಾಹಿತ್ಯ ಜೀವನ ಮತ್ತು ರಾಜಕೀಯ ಸಾಧನೆಯ ಬಗ್ಗೆ ಮಾತನಾಡಿದರು. ಈ ಸಂದರ್ಭ ಪ್ರಕಾಶಕ ಸೃಷ್ಟಿ ನಾಗೇಶ್ ಅವರನ್ನು ಸನ್ಮಾನಿಸಲಾಯಿತು.

ಮಾದೇಗೌಡನಹುಂಡಿ ಪಿಎಸಿಎಸ್ ಚುನಾವಣೆ

ಹೆಚ್.ಎಸ್.ರಾಜೇಶ್ ಅಧ್ಯಕ್ಷ, ನಾಗಮ್ಮ ಉಪಾಧ್ಯಕ್ಷೆ



ಮಾದೇಗೌಡನ ಹುಂಡಿ ಪಿಎಸಿಎಸ್ ಅಧ್ಯಕ್ಷರಾಗಿ ರಾಜೇಶ್, ಉಪಾಧ್ಯಕ್ಷರಾಗಿ ನಾಗಮ್ಮ ಆಯ್ಕೆಯಾದರು.

ತಿ.ನರಸೀಪುರ, ಜು.14– ತಾಲೂಕಿನ ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಎಸ್.ರಾಜೇಶ್, ಉಪಾಧ್ಯಕ್ಷರಾಗಿ ನಾಗಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ರಾಜೇಶ್, ಉಪಾಧ್ಯಕ್ಷ ಸ್ಥಾನಕ್ಕೆ ನಾಗಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಸಹಕಾರ ಇಲಾಖೆ ನಿರ್ದೇಶಕ ರಾಜಣ್ಣ ಘೋಷಿಸಿದರು. ಸಹಾಯಕ ಚುನಾವಣಾಧಿಕಾರಿ ಮುಖ್ಯ ಕಾರ್ಯ ನಿರ್ವಾಧಿಕಾರಿ ಸಿ.ರಾಜೇಶ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಹೆಚ್.ಎಸ್.ರಾಜೇಶ್ ಮಾತನಾಡಿ, ತಮ್ಮ ಆಯ್ಕೆಗೆ ಸಹಕರಿಸಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದ್ದರು. ತಮ್ಮೆಲ್ಲರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಪಡಿಸಿ ರೈತರಿಗೆ ಸರ್ಕಾರದ ಸವಲತ್ತುಗಳನ್ನು ಕೊಡಿಸಲು ಪ್ರಾಮಾಣಿಕ ಪ್ರಯ್ನ ಮಾಡಲಾಗುವುದು ಎಂದರು.

ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಕ್ಷೇತ್ರಕ್ಕೆ ಸಾಕಷ್ಟು ಹಣ ನೀಡಿದ್ದಾರೆ. ಇನ್ನು ಹೆಚ್ಚಿನ ಅಭಿವೃದ್ಧಿಗೆ ಎಂಎಲ್‌ಸಿ ಡಾ.ಯತೀಂದ್ರ ಹಾಗೂ ಸಂಸದ ಸುನೀಲ್ ಬೋಸ್ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡೋಣ ಎಂದರು.

ಈ ವೇಳೆ ಮೇಲ್ವಿಚಾರಕ ರಾಜಪ್ಪ, ನಿರ್ದೇಶಕರಾದ ಹೆಚ್.ಎನ್.ದೇವರಾಜು, ಗುರು, ನಾಗೇಂದ್ರ, ಸಿ.ನಾಗರಾಜು, ಶ್ರೀನಿವಾಶ್, ಅಂಬರೀಶ, ನಾಗಮ್ಮ, ವೆಂಕಟೇಶ, ಗ್ರಾಮದ ಮುಖಂಡರಾದ ಮಾದೇಗೌಡ, ಹೊಂಬೇಗೌಡ, ಚುಂಚೇಗೌಡ, ಹೆಚ್.ಪಿ.ಪ್ರಭಾಕರ್, ಶಿವು, ರಾಜು, ಚನ್ನೇಗೌಡ, ನಂಜುಂಡಸ್ವಾಮಿ, ರಾಜು, ವಿಶ್ವನಾಥ, ಪ್ರೇಮ್ ಕುಮಾರ್ ಹಾಜರಿದ್ದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ನಂಜನಗೂಡು, ಜು.14– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ತೀವ್ರ ಗಾಯಗೊಂಡಿರುವ ಘಟನೆ ಭಾನುವಾರ ನಗರದ ಹೊಸ ರೇಲ್ವೆ ಮೇಲ್ಸೇತುವೆ ಬಳಿ ನಡೆದಿದೆ.

ಕೇರಳದ ಮಲ್ಲಪ್ಪುರಂ ನಿವಾಸಿ ಶರತ್ ಪ್ರಕಾಶ್(24) ಸಾವನ್ನಪ್ಪಿದವರು. ಹಿಂಬದಿ ಸವಾರ ಜುಲಿಯದ್ ಅಯೂಬ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರಿನ ಆಚಾರ್ಯ ನರ್ಸಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಕೇರಳ ಮೂಲದ ಶರತ್ ಪ್ರಕಾಶ್ ಮತ್ತು ಜುಲಿಯದ್ ಅಯೂಬ್ ಕಾಲೇಜಿಗೆ ರಜೆ ಇದ್ದ ಕಾರಣ ಊರಿಗೆ ತೆರಳಿದ್ದರು ಎನ್ನಲಾಗಿದೆ. ಭಾನುವಾರ ಕೇರಳದಿಂದ ಬೆಂಗಳೂರಿಗೆ ತನ್ನ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ತೆರಳಿದ್ದ ವೇಳೆ ನಗರದ ರೈಲ್ವೆ ಮೇಲ್ಸೇತುವೆ ಬಳಿ ಗುಂಡ್ಲುಪೇಟೆ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಶರತ್ ಪ್ರಕಾಶ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಜುಲಿಯದ್ ಅಯೂಬ್ ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ನಗರ ವ್ಯಾಪ್ತಿಯಲ್ಲೇ ಅಪಘಾತ ಸಂಭವಿಸಿ 40 ನಿಮಿಷ ಕಳೆದರೂ ಸ್ಥಳಕ್ಕೆ ಆಂಬುಲೆನ್ಸ್ ಬಾರದ ಕಾರಣ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು, ಸಿಬ್ಬಂದಿಗಳಾದ ಕೇಶವ ಮೂರ್ತಿ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಬಸ್ ಅನ್ನು ವಶಕ್ಕೆ ಪಡೆದು ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಓದು, ಕ್ರೀಡೆ ಜೊತೆಗೆ ಸಾಮಾನ್ಯ ಜ್ಞಾನ ಕಡೆಗೂ ಗಮನಹರಿಸಿ

ವಿದ್ಯಾರ್ಥಿಗಳಿಗೆ ಗುಬ್ಬಿಗೂಡು ರಮೇಶ್ ಸಲಹೆ



ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಜು.14– ನಿರಂತರ ಶ್ರಮ ಮತ್ತು ಸ್ವಸಾಮರ್ಥ್ಯದಿಂದ ವಿದ್ಯಾರ್ಥಿಗಳು ಬದುಕನ್ನು ಬಂಗಾರ ಮಾಡಿಕೊಳ್ಳಬಹುದು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಕ್ರೀಡಾ ವಿಭಾಗ ಬೆಂಗಳೂರು ಜಂಟಿ ನಿರ್ದೇಶಕ ಗುಬ್ಬಿಗೂಡು ರಮೇಶ್ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದ ಎಂ.ಎಂ.ಕೆ. ಪದವಿ ಪೂರ್ವ ಕಾಲೇಜಿನಲ್ಲಿ ನೀಟ್, ಸಿಇಟಿ ತರಬೇತಿ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಹಾಗೂ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳು, ನಿರಂತರವಾಗಿ ಶ್ರಮ ಪಡುವ ಅಭ್ಯಾಸ ಮೈಗೂಡಿಸಿಕೊಳ್ಳಬೇಕು. ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಬೇಕು. ಉದ್ಯೋಗ ಹುಡುಕುವ ಸಂದರ್ಭ ಕನ್ನಡದ ಜೊತೆಗೆ ಆಂಗ್ಲ ಭಾಷೆ ಮತ್ತು ಸಾಮಾನ್ಯ ಜ್ಞಾನ ಮುಖ್ಯ ಎಂದರು.

ಹಳ್ಳಿಗಳಿಂದ ಬಂದ ವಿದ್ಯಾರ್ಥಿಗಳು ಸಾಫ್ಟ್‌ವೇರ್ ಉದ್ಯೋಗಿಗಳಾಗಿದ್ದಾರೆ. ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಬೇಕು. ಇದಕ್ಕೆ ಪೂರ್ವ ತಯಾರಿ ಅಗತ್ಯ ಎಂದರು. ತಾಂತ್ರಿಕತೆ ಯುಗದಲ್ಲಿ ಇಂದು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಂದಿದೆ. ಇದು ಉದ್ಯೋಗ ಕಿತ್ತುಕೊಳ್ಳುವ ಒಂದು ಸಾಧನ. ಕಲಾ ಕ್ಷೇತ್ರದಲ್ಲಿ ಇದರ ಕೈಚಳಕ ಹೆಚ್ಚು. ಹಾಗಾಗಿ ಹಾಲಿವುಡ್ ಸಿನಿಮಾ ಕ್ಷೇತ್ರದಲ್ಲಿ ಎಐ ಬಳಕೆ ಮಾಡಬಾರದು ಎಂಬ ಉದ್ದೇಶದಿಂದ ತಿಂಗಳ ಮಟ್ಟಿಗೆ ಸಿನಿಮಾ ಶೂಟಿಂಗ್ ನಿಲ್ಲಿಸಿ ಕಾರ್ಮಿಕರು ಪ್ರತಿಭಟನೆ ನಡೆಸಿದ್ದರು. ಹಾಗಾಗಿ ಮಕ್ಕಳು ಓದಿನ ಜೊತೆಗೆ ಕ್ರೀಡೆ ಮತ್ತು ಇತರ ಸಾಂಸ್ಕೃತಿಕ ಚಟುವಟಿಕೆ ಹಾಗೂ ಸಾಮಾನ್ಯ ಜ್ಞಾನ ವೃದ್ಧಿಗೆ ಶ್ರಮ ಹಾಕಬೇಕು ಎಂದರು.

ಎಂ.ಎಂ.ಕೆ. ಪ.ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್.ಪಿ.ಪ್ರಕಾಶ್ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ 2020–21ನೇ ಸಾಲಿನಲ್ಲಿ ಪಿಯು ತರಗತಿ ಪ್ರಾರಂಭ ಮಾಡಲಾಯಿತು. ಪ್ರತಿ ವರ್ಷ ಸಂಸ್ಥೆಗೆ ಉತ್ತಮ ಫಲಿತಾಂಶ ಬಂದಿದ್ದು, ತಾಲೂಕಿಗೆ ಮೊದಲ ಸ್ಥಾನದಲ್ಲಿದೆ. ಕಳೆದ ವರ್ಷ ಪಿಯು ವಿಭಾಗದಲ್ಲಿ 112 ಮಕ್ಕಳು ಪರೀಕ್ಷೆ ಬರೆದಿದ್ದು, 110 ಮಕ್ಕಳು ತೇರ್ಗಡೆಯಾಗಿದ್ದು, 31. ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಸಂಸ್ಥೆಯಲ್ಲಿ ಸಿಇಟಿ ಮತ್ತು ನೀಟ್ ತರಬೇತಿ ಕೊಡಲಾಗುತ್ತಿದೆ. ಈ ಸಾಲಿನಲ್ಲಿ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ಹುಣಸೂರು ಸ.ಪ.ಪೂ. ಕಾಲೇಜಿನ ಪ್ರಾಂಶುಪಾಲ ರಾಮೇಗೌಡ, ಸಿಇಟಿ ಮತ್ತು ನೀಟ್ ಬಗ್ಗೆ ವಿವರಿಸಿದರು.

ಪ್ರತಿಭಾ ಪುರಸ್ಕಾರ: ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ರೇಷ್ಮಾ, ಮೋನಿಕ ಮತ್ತು ಸಿಂಧು ಅವರೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 28 ಮಕ್ಕಳನ್ನು ಸನ್ಮಾನಿಸಲಾಯಿತು.

ಈ ವೇಳೆ ಸಂಸ್ಥೆ ಅಧ್ಯಕ್ಷ ಕೆ.ಆರ್. ಸತೀಶ್, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಪ್ರೊ.ಚಂದ್ರೇ ಗೌಡ, ಸಿಡಿಎಸ್ ಅಧ್ಯಕ್ಷ ಮೋಹನ್, ನಿರ್ದೇಶಕರಾದ ಶ್ರೀನಿವಾಸ್, ಸಕಲೇಶ್, ಅಶೋಕ್, ಕೆನರಾ ಬ್ಯಾಂಕ್ ವ್ಯವಸ್ಥಾಪಕ ಆನಂದ್ ಶೇಖರ್, ಲತಾ, ಸ್ಮಿತಾ ಹಾಜರಿದ್ದರು.

ದೇವರಾಯಶೆಟ್ಟಿಪುರ ಪಿಎಸಿಎಸ್‌ಗೆ ನಿರ್ದೇಶಕರು ಆಯ್ಕೆ



ಮಲ್ಕುಂಡಿ, ಜು.14– ಇಲ್ಲಿನ ದೇವರಾಯಶೆಟ್ಟಿಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ 12 ನಿರ್ದೇಶಕರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಮೂವರು ಅವಿರೋಧವಾಗಿ ಆಯ್ಕೆಯಾದರೇ, ಉಳಿದ 9 ಸ್ಥಾನಗಳಿಗೆ 12 ಮಂದಿ ಸ್ಪರ್ಧಿಸಿದ್ದರು. ಅಂತಿಮವಾಗಿ ಕೀರ್ತಿ, ಶಿವನಾಗಪ್ಪ, ಕೆಂಪಣ್ಣ, ಜ್ಯೋತಿ, ಮಹದೇವಸ್ವಾಮಿ, ಶಿವಪ್ರಸಾದ್, ಮಹೇಶ್, ರಮೇಶ್, ಹೇಮಾ, ಮಂಜುಳ, ನಾಗಮ್ಮ, ಕುಮಾರ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಸಾದ್ ಘೋಷಿಸಿದರು. ಬಸವಣ್ಣ, ಗೌರಮ್ಮ, ವೀರಭದ್ರಸ್ವಾಮಿ ಪರಾಭವಗೊಂಡರು. ಗ್ರಾಪಂ ಉಪಾಧ್ಯಕ್ಷ ಬಿ.ಟಿ.ಕುಮಾರ್, ಸದಸ್ಯ ಜಗದೀಶ್, ಪಾಂಡು, ಸಿದ್ದರಾಜು ಸೇರಿದಂತೆ ಇತರರಿದ್ದರು.

ಮೂತ್ರ ವಿಸರ್ಜನೆ ಮಾಡಿದ ಕಾರಣಕ್ಕೆ

ಅಂಗವಿಕಲ ಬುದ್ಧಿಮಾಂದ್ಯ ಬಾಲಕನ ಮೇಲೆ ಹಲ್ಲೆ

ಹುಣಸೂರು, ಜು.14– ಜಮೀನಿನಲ್ಲಿ ಮೂತ್ರ ವಿಸರ್ಜನೆ ಮಾಡಿದ ಕಾರಣಕ್ಕೆ ಅಂಗವಿಕಲ ಬುದ್ಧಿಮಾಂದ್ಯ ಬಾಲಕನ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಕಾಳೇಗೌಡನಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ತಿಮ್ಮಯ್ಯ ಅವರ ಪುತ್ರ ಗಣೇಶ್(22) ಹಲ್ಲೆಗೊಳಗಾಗಿದ್ದು, ಇದೀಗ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈತ ಜಡಗನಕೊಪ್ಪಲು ಬಳಿಯ ತಮ್ಮ ಜಮೀನಿಗೆ ಹೋಗಿ ಬರುವಾಗ ಪಕ್ಕದ ಜಮೀನಿನಲ್ಲಿ ಮೂತ್ರ ವಿಸರ್ಜನೆ ಮಾಡಿದ್ದಾರೆ. ಈ ವೇಳೆ ಜಮೀನಿನ ಮಾಲೀಕ ರವಿಗೌಡ ಗಣೇಶನ ಮೇಲೆ ದೊಣ್ಣೆಯಿಂದ ಗಂಭೀರವಾಗಿ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದ್ದು, ಈ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಭೇಟಿ: ವಿಷಯ ತಿಳಿದು ನಗರದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ತಾಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರೇಣುಕಾ ಪ್ರಸಾದ್, ನೊಂದ ಕುಟುಂಬಕ್ಕೆ ಸ್ವಾಂತನ ಹೇಳಿದರು. ಅಲ್ಲದೇ ಹಲ್ಲೆಗೊಳಗಾದ ಗಣೇಶ್ ಆರೋಗ್ಯ ವಿಚಾರಿಸಿದರು. ಬಳಿಕ ಘಟನೆ ಬಗ್ಗೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಮೂತ್ರ ವಿಸರ್ಜನೆ ಮಾಡಿದ ಕಾರಣಕ್ಕೆ ರವಿಗೌಡ ಅಂಗವಿಕಲ ಬುದ್ಧಿಮಾಂದ್ಯ ಹುಡುಗನಿಗೆ ದೊಣ್ಣೆಯಿಂದ ಹೊಡೆದಿರುವುದನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ ಹುಣಸೂರು ನಗರ ಸಂಚಾಲಕ ಕಿರಣ್ ಕರ್ನಾಟಕ ಅಂಬೇಡ್ಕರ್ ಸೇನೆ ಹುಣಸೂರು ತಾಲೂಕು ಅಧ್ಯಕ್ಷರು ಅಭಿಲಾಷ್, ಮುಖಂಡ ಅಪ್ಪಣ್ಣ, ಅರುಣ್, ಆಸ್ಪತ್ರೆಗೆ ಭೇಟಿ ನೀಡಿ ಗಣೇಶ್ ಆರೋಗ್ಯ ವಿಚಾರಿಸಿದರು.



ಮಂಜುಳಾ ನಿಧನ



ಸರಗೂರು, ಜು.14– ಪಟ್ಟಣದ ಆರ್ಯ ಈಡಿಗ ಸಮಾಜದ ಖಜಾಂಚಿ ಟಿ.ಕರಿಯಪ್ಪ ಅವರ ಪತ್ನಿ ಮಂಜುಳಾ(59) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆರ್ಯ ಈಡಿಗ ಸಮಾಜದ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜುಂಡ ನಾಯಕ



ಹುಲ್ಲಹಳ್ಳಿ, ಜು.14– ಹುಲ್ಲಹಳ್ಳಿ ಗ್ರಾಪಂ ಉಪಾಧ್ಯಕ್ಷ ನಂಜುಂಡ ನಾಯಕ(90) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಗೌರಮ್ಮ, ಬಸವರಾಜು ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ ಇನ್ನಿತರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕಪಿಲಾ ನದಿ ದಂಡೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಸಿ.ನಾಗೇಶ್



ಬೆಟ್ಟದಪುರ, ಜು.14– ಗ್ರಾಮದ ನಿವಾಸಿ ಬಿ.ಸಿ.ನಾಗೇಶ್(53) ಭಾನುವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಮಾಜಿ ಗ್ರಾಪಂ ಸದಸ್ಯೆ ಹರಿಣಾಕ್ಷಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿ.ನರಸೀಪುರದಲ್ಲಿ ವೀರಶೈವ ಅಂಗಾಯತ ಮುಖಂಡರ ಸಭೆ

ಚುನಾವಣೆ ಗೆದ್ದು ಸಮಾಜ ಸೇವೆ ಮಾಡುವುದು ಕನಸಿನ ಮಾತು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬೇಸರ



ಹೆಳವರಹುಂಡಿಯಲ್ಲಿ ವೀರಶೈವ ಲಿಂಗಾಯತ ಮುಖಂಡರ ಸಭೆ ನಡೆಯಿತು

ತಿ.ನರಸೀಪುರ, ಜು.14– ಚುನಾವಣೆಯಲ್ಲಿ ಗೆದ್ದು ಸಮಾಜದ ಸೇವೆ ಮಾಡುತ್ತೇವೆ, ಮುನ್ನಡೆಸುತ್ತೇವೆ ಎಂಬುದು ಕನಸಿನ ಮಾತು ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬೇಸರ ವ್ಯಕ್ತಪಡಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕಾರ್ಯಕಾರಿ ಸಮಿತಿಗೆ ಜು.21 ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ತಾಲೂಕಿನ ಹೆಳವರ ಹುಂಡಿ ಗ್ರಾಮದ ತಮ್ಮ ನಿವಾಸದಲ್ಲಿ ಭಾನುವಾರ ನಡೆದ ವೀರಶೈವ ಲಿಂಗಾಯತ ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಶಕಗಳಿಂದಲೂ ತಿ.ನರಸೀಪುರ ವೀರಶೈವ ಘಟಕಕ್ಕೆ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡುವ ಪದ್ಧತಿ ಬೆಳೆದು ಬಂದಿತ್ತು. ಕಳೆದ ಚುನಾವಣೆಯಲ್ಲಿ ಕಠಿಣ ಸ್ಪರ್ಧೆ ಇದ್ದರೂ ಅಭ್ಯರ್ಥಿಗಳ ಮನವೊಲಿಸಿ ಅವಿರೋಧ ಆಯ್ಕೆ ಮಾಡಲಾಗಿತ್ತು ಆದರೆ ಬದಲಾದ ಪರಿಸ್ಥಿತಿಯಲ್ಲಿ ಚುನಾವಣೆ ನಡೆಸುವ ಅನಿವಾರ್ಯತೆ ಎದುರಾಗಿದ್ದು, ಅವಿರೋಧ ಆಯ್ಕೆ ಸಾಧ್ಯವಾಗದಿರುವುದು ವಿಷಾದದ ಸಂಗತಿ ಎಂದರು.

ಈ ಚುನಾವಣೆಯಲ್ಲಿ 10 ಮಂದಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದು, ಅವರಲ್ಲಿ ಒಮ್ಮತ ಮೂಡಿಸುವ ಸಲುವಾಗಿ ಅನೇಕ ಸುತ್ತಿನ ಚರ್ಚೆ, ಸಂಧಾನ, ಸಂವಾದ ಹಾಗೂ ರಾಜಿ ಪ್ರಯತ್ನ ಮಾಡಲಾಯಿತು. ಚುನಾವಣೆ ನಡೆಸುವುದು ಬೇಡ. ಒಮ್ಮತದಿಂದ ಅಭ್ಯರ್ಥಿ ಆಯ್ಕೆ ಮಾಡಿಕೊಳ್ಳೋಣ ಎಂಬ ಸದುದ್ದೇಶದಿಂದ ತಾಲೂಕಿನ ಎಲ್ಲಾ ವೀರಶೈವ ಲಿಂಗಾಯತ ಮುಖಂಡರ ಸಭೆಯನ್ನು ವಾಟಾಳು ಮಠದಲ್ಲಿ ಕರೆಯಲಾಗಿತ್ತು. 3 ಬಾರಿ ಸಭೆ ನಡೆದ ನಂತರ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡಲು ಎಲ್ಲಾ ಆಕಾಂಕ್ಷಿಗಳು ಒಮ್ಮತ ಸೂಚಿಸಿದ್ದರಾದರೂ, ಮಠದಿಂದ ಹೊರಬಂದ ನಂತರ ಅವಿರೋಧ ಆಯ್ಕೆಗೆ ವಿರೋಧ ವ್ಯಕ್ತಪಡಿಸಿದರು. ನಾನೂ ಕೂಡ 10 ಆಕಾಂಕ್ಷಿಗಳ ಬಳಿ ಮಾತನಾಡಿ, ಮನವೊಲಿಸುವ ಪ್ರಯತ್ನ ಮಾಡಿದೆ. ಪ್ರಯತ್ನದ ಫಲವಾಗಿ ಆಕಾಂಕ್ಷಿಗಳಾಗಿದ್ದ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಹೆಳವರಹುಂಡಿ ಕೇಬಲ್ ರಾಜಶೇಖರ ಹಾಗೂ ಕರೋಹಟ್ಟಿ ಬಸವರಾಜು ನಾಮಪತ್ರ ವಾಪಸ್ ಪಡೆದ ನಂತರ 7 ಆಕಾಂಕ್ಷಿಗಳು ಕಣದಲ್ಲುಳಿ ದರು. ಹಾಗಾಗಿ ಹಲವಾರು ಮಠಾಧೀಶರು ಸಮಾಜದ ಹಿರಿಯ ಮುಖಂಡರ ಸಮಕ್ಷಮದಲ್ಲಿ ಅವರ ರಾಜಿ ಸಂಧಾನಕ್ಕೆ ಮುಂದಾದೆವಾದರೂ 7 ಜನರ ಮನವೊಲಿಸಲು ನಾವು ವಿಫಲರಾದೆವು ಎಂದರು.

ಈಗ ಚುನಾವಣೆ ಅನಿವಾರ್ಯ. ಚುನಾವಣೆಗೆ ನಿಲ್ಲುವಂತೆ ಒತ್ತಾಯ ಬಂದರೂ ನಾನು ಸ್ಪರ್ಧಿಸದೇ ಸಹಕಾರ ಸಂಘದ ಅಧ್ಯಕ್ಷರಾಗಿ ಅಪಾರ ಅನುಭವ ಹೊಂದಿರುವ ಬಿ.ವೀರಭದ್ರಪ್ಪನವರಿಗೆ ನನ್ನ ಬೆಂಬಲ ಸೂಚಿಸಿದ್ದೇನೆ ಎಂದರು.

ನನ್ನ ನೇತೃತ್ವದಲ್ಲೇ ಚುನಾವಣೆ: ಬಿ.ವೀರಭದ್ರಪ್ಪ ನಮ್ಮ ತಂಡದ ಒಮ್ಮತದ ಅಭ್ಯರ್ಥಿಯಾಗಿದ್ದು, ನನ್ನ ನೇತೃತ್ವದಲ್ಲಿ ನಡೆಯುವ ಚುನಾವಣೆಯಲ್ಲಿ ನಾವೆಲ್ಲರೂ ಅವರ ಗೆಲುವಿಗೆ ಶ್ರಮ ವಹಿಸಿ ಕೆಲಸ ಮಾಡೋಣ. ನಮ್ಮ ಪ್ರಯತ್ನಕ್ಕೆ ತಾಲೂಕಿನ ಎಲ್ಲಾ ಮಠಾಧೀಶರ ಸಹಕಾರ, ಆಶೀರ್ವಾದ ದೊರಕಿದೆ ಎಂದರು.

7 ಸ್ಥಾನಕ್ಕೆ ಮಾತ್ರ ಅಭ್ಯರ್ಥಿ: ಪ್ರಸಕ್ತ ಚುನಾವಣೆಯಲ್ಲಿ ನಿರ್ದೇಶಕರ ಸ್ಥಾನ 13 ಸ್ಥಾನಗಳಿಗೆ ನಿಗದಿಯಾಗಿದೆ. ಆದರೆ ನಮ್ಮ ತಂಡದಿಂದ ಚನ್ನಮಲ್ಲಿಕಾರ್ಜುನಸ್ವಾಮಿ, ಪುಟ್ಟಬುದ್ಧಿ, ಟಿ.ಸಿ.ಮಲ್ಲೇಶ್, ಮಹದೇವಸ್ವಾಮಿ, ಬಿ.ಮಹದೇವಸ್ವಾಮಿ, ಕೆ.ವಿ. ಶಿವಶಂಕರ್ ಹಾಗೂ ಎಂ.ಸಂತೋಷ್ ಅವರನ್ನು ಕಣಕ್ಕಿಳಿಸಿದ್ದು ಹೆಚ್ಚು ಮತಗಳ ಅಂತರದ ಗೆಲುವು ತಂದುಕೊಡುವಂತೆ ಮನವಿ ಮಾಡಿದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ತಾಪಂ ಮಾಜಿ ಸದಸ್ಯ ಕೆ.ಜಿ.ವೀರಣ್ಣ, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಸಮಾಜದ ಮುಖಂಡರಾದ ಕು.ಶಿ.ಬ್ಯಂಗೀಶ್, ವಾಟಾಳ್ ಗುರುಪಾದ, ಕೆಬ್ಬೇಹುಂಡಿ ಶಿವಕುಮಾರ್, ಅದೃಷ್ಟ ಮಾದಪ್ಪ, ಕೇಬಲ್ ರಾಜಶೇಖರ್, ಗೌತ್ರ ಪ್ರಕಾಶ್, ಬಜ್ಜಿ ನಿಂಗಪ್ಪ, ಸಿದ್ದೇಶ್ (ಗೊಂಬೆ) ಸೇರಿದಂತೆ ಮುಖಂಡರು ಹಾಜರಿದ್ದರು.

"ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದೇನೆ. ನನಗೆ ಬೆಂಬಲ ಸೂಚಿಸಿ ಹಲವು ಹಿರಿಯರು ಕಣದಿಂದ ಹಿಂದೆ ಸರಿದಿದ್ದಾರೆ. ಈಗ ನನ್ನ ಮತ್ತು ಎಸ್‌ಎಂಆರ್ ಪ್ರಕಾಶ್ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ಹಾಗಾಗಿ ಸಮಾಜ ಸೇವೆಯನ್ನೇ ಗುರಿಯಾಗಿಸಿಕೊಂಡಿರುವ ನನಗೆ ಮತ್ತು ನನ್ನ ತಂಡಕ್ಕೆ ಸಮಾಜದ ಬೆಂಬಲ ಬೇಕಿದೆ. ಸಹಕಾರ ಸಂಘದ ಅಧ್ಯಕ್ಷನಾಗುವ ಮೂಲಕ ಈಗಾಗಲೇ ಸಮಾಜ ಸೇವೆಗೆ ನನ್ನನ್ನು ತೊಡಗಿಸಿಕೊಂಡಿದ್ದೇನೆ. ಸಮಾಜದ ಬಂಧುಗಳು ನನಗೆ ಸಂಪೂರ್ಣ ಬೆಂಬಲ ನೀಡಿ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನೇ ಆಯ್ಕೆ ಮಾಡುವ ಮೂಲಕ ಇನ್ನಷ್ಟು ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕು.

-ಬಿ.ವೀರಭದ್ರಪ್ಪ, ಅಧ್ಯಕ್ಷ ಸ್ಥಾನದ ಆಕಾಂಕ್ಷಿ.

ಮೈಸೂರು ಮಿತ್ರ ಸೋಮವಾರ 15 ಜುಲೈ 2024

ಒಂದೆಡೆ ಬಿಡಾಡಿ ಜಾನುವಾರುಗಳ ಹಾವಳಿ ಮತ್ತೊಂದೆಡೆ ಡಕೋಟಾ ವಾಹನಗಳ ಕಾಟ!







ಮೋಹನ್ ಕಾಯಕ

ಮೈಸೂರು, ಜು.14– ಮೈಸೂರು ಸೌಂದರ್ಯಕ್ಕೆ ಡಕೋಟಾ ವಾಹನಗಳಿಂದ ಧಕ್ಕೆ... ಗ್ಯಾರೇಜ್‌ನಲ್ಲಿರಬೇಕಾದ ಗುಜರಿ ಗಾಡಿಗಳು ರಸ್ತೆ ಬದಿಯಲ್ಲಿ... ಕ್ರಿಮಿನಲ್ ಕೃತ್ಯಕ್ಕೆ ಬಳಸುವ ಆತಂಕ...!

ಸ್ವಚ್ಛ ನಗರ ಕಿರೀಟ ಹೊತ್ತ ಮೈಸೂರಿನಲ್ಲಿ ಕಸ ವಿಲೇವಾರಿ ಸಮಸ್ಯೆ, ಬಿಡಾಡಿ ಜಾನುವಾರುಗಳ ಹಾವಳಿ ಜೊತೆಗೆ ದಿನೇ ದಿನೆ ರಸ್ತೆ ಬದಿಯಲ್ಲಿ ಗುಜರಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ನಗರದ ಸೌಂದರ್ಯಕ್ಕೆ ಕಪ್ಪುಚುಕ್ಕೆಯಾಗುತ್ತಿವೆ. ಗುಜರಿಯಲ್ಲಿರಬೇಕಾದ ಡಕೋಟಾ ವಾಹನಗಳು ರಸ್ತೆ ಬದಿಯಲ್ಲಿ ವರ್ಷದಿಂದಲೂ ನಿಂತಿದ್ದು, ಕಳವು ವಾಹನಗಳೆಂಬ ಅನುಮಾನದ ಜೊತೆಗೆ ಸ್ವಚ್ಛತೆಗೆ ಮಾರಕವಾಗಿವೆ. ನಗರದ ಶಿವಾಜಿ ರಸ್ತೆ ಸೇರಿದಂತೆ ಹಲವು ಪ್ರಮುಖ ರಸ್ತೆಗಳು ಹಾಗೂ ಸಣ್ಣ-ಪುಟ್ಟ ಗಲ್ಲಿಗಳಲ್ಲಿ ಕಾರು, ಲಾರಿ, ಜೀಪ್ ಇನ್ನಿತರೆ ಹಳೇ ವಾಹನಗಳನ್ನು ನಿಲ್ಲಿಸಿದ್ದು, ಅವುಗಳ ಮಾಲೀಕರ್‍ಯಾರು ಎಂಬುದೇ ಯಾರಿಗೂ ಗೊತ್ತಿಲ್ಲ. ರಸ್ತೆ ಬದಿ ಮಾತ್ರವಲ್ಲದೆ ಫುಟ್‌ಪಾತ್ ಅನ್ನು ಆಕ್ರಮಿಸಿಕೊಂಡಿರುವ ಡಕೋಟಾ ವಾಹನಗಳಿಂದ ಸಾರ್ವಜನಿಕರಿಗೆ ತೀವ್ರ ಕಿರಿಕಿರಿ ಉಂಟಾಗಿದೆ. ಹಾಗೆಯೇ ಖಾಲಿ ನಿವೇಶನಗಳಲ್ಲಿಯೂ ವರ್ಷದಿಂದ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸದಿರುವುದು ಜನರನ್ನು ಹೈರಾಣಾಗಿಸಿದೆ.

ರಸ್ತೆ ಬದಿಯಲ್ಲಿ ನಿಲ್ಲಿಸಿರುವ ಹಳೇ ವಾಹನಗಳು ಅಪಾಯಕ್ಕೂ ಆಹ್ವಾನ ನೀಡುತ್ತಿವೆ. ವಾಹನ ಸವಾರರು ರಸ್ತೆ ಬದಿಯಲ್ಲಿರುವ ಗುಜರಿ ವಾಹನಗಳಿಗೆ ಡಿಕ್ಕಿ ಹೊಡೆಯುವುದು ಸಾಮಾನ್ಯ. ಹೀಗೆ ಡಿಕ್ಕಿ ಹೊಡೆದು ಕೈ-ಕಾಲು ಮುರಿದುಕೊಂಡ ಘಟನೆಗಳು ನಡೆದಿವೆ. ಅಲ್ಲದೆ ಎಲ್ಲೆಂದರಲ್ಲಿ ನಿಲ್ಲಿಸಿರುವ ವಾಹನಗಳನ್ನು ಕ್ರಿಮಿನಲ್ ಕೃತ್ಯಕ್ಕೆ ಬಳಕೆ ಮಾಡಿರುವ ಅನುಮಾನದ ಜೊತೆಗೆ ದುಷ್ಕರ್ಮಿಗಳು ಕದ್ದ ಬೈಕ್ ಬಳಸಿ ಅಪಘಾತವೆಸಗಿ ಪುನಃ ಮತ್ತೊಂದು ಕಡೆ ನಿಲ್ಲಿಸಿ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗಿದೆ. ಅಷ್ಟು ಮಾತ್ರವಲ್ಲದೆ ಮಾದಕ ವಸ್ತು ಸಾಗಾಟ ಸೇರಿದಂತೆ ಇನ್ನಿತರೆ ಕೃತ್ಯಗಳಿಗೆ ಬಳಸಬಹುದು ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.


ತೆರವು ಕಾರ್ಯ ಯಾರದು?

ರಸ್ತೆ ಬದಿ ವರ್ಷದಿಂದ ನಿಲ್ಲಿಸಿರುವ ಗುಜರಿ ಗಾಡಿಗಳನ್ನು ತೆರವುಗೊಳಿಸುವುದು ಸಂಚಾರ ಪೊಲೀಸರದ್ದಾ ಅಥವಾ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪೊಲೀಸರದ್ದಾ.. ಎಂಬುದು ಸಾರ್ವಜನಿಕರ ಗೊಂದಲ. ಕಂಪ್ಲೆಂಟ್ ಅನ್ನು ಎಲ್ ಅಂಡ್ ಒ ಠಾಣೆಗೆ ಕೊಡಬೇಕಂತೆ... ಆದರೆ ಕಂಪ್ಲೆಂಟ್ ಪಡೆದುಕೊಂಡ ಎಲ್ ಅಂಡ್ ಒ ಠಾಣೆ ಪೊಲೀಸರು ನೀಡಿದ ಮಾಹಿತಿ ಮೇರೆಗೆ ಸಂಚಾರ ಠಾಣೆ ಪೊಲೀಸರು ತೆರವುಗೊಳಿಸಬೇಕಂತೆ. ಹಾಗಾಗಿ ಗುಜರಿ ಗಾಡಿಗಳು ಶಾಶ್ವತವಾಗಿ ರಸ್ತೆ ಬದಿಯಲ್ಲೇ ಇರುತ್ತವೆಯೇ ಹೊರತು ತೆರವಾಗುವುದಿಲ್ಲ. ಮೈಸೂರು ನಗರದಲ್ಲಿ ರಸ್ತೆಬದಿ, ಫುಟ್‌ಪಾತ್‌ನಲ್ಲಿ ಅತಿ ಕ್ರಮಿಸಿಕೊಂಡಿರುವ ಡಕೋಟಾ ಗಾಡಿಗಳ ಸಂಖೆ ಹೆಚ್ಚಾಗುತ್ತಿದ್ದು, ಪೊಲೀಸರು ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಮೈಸೂರಿನ ಸೌಂದರ್ಯ ಈ ಗುಜರಿ ಗಾಡಿಗಳಂತಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಮಳೆ ಬಂದರೆ ರೋಗಕ್ಕೆ ಆಹ್ವಾನ: ರಸ್ತೆ ಬದಿ ನಿಲ್ಲಿಸಲಾದ ನಿರುಪಯುಕ್ತ ವಾಹನಗಳಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದೆ. ಈ ಗುಜರಿ ವಾಹನಗಳ ಟಯರ್‌ಗಳು, ಅವುಗಳ ಒಳಗೆ ನೀರು ನಿಂತರೆ, ಸೊಳ್ಳೆಗಳು ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಇದೆ. ಹಾಗೆಯೇ ಈ ವಾಹನಗಳು ನಿಂತಿರುವ ಜಾಗದಲ್ಲಿ ಕಸದ ರಾಶಿ ಹೆಚ್ಚಾಗುತ್ತಿದೆ. ನಿಂತಲ್ಲೇ ಪೊದೆಗಳಿಂದ ಆವೃತ್ತವಾಗಿರುವ ಹಳೇ ವಾಹನಗಳನ್ನು ಕಸದ ತೊಟ್ಟಿ ಮಾಡಿಕೊಂಡಿರುವ ಕೆಲವರು ಅಲ್ಲಿಯೇ ಕಸ ಸುರಿಯುವುದು ಸಾಮಾನ್ಯವಾಗಿದೆ. ಪೌರಕಾರ್ಮಿಕರು ಇಂತಹ ವಾಹನಗಳ ಬಳಿಯೂ ಸುಳಿಯದಿರುವುದರಿಂದ ಕಸ ವಿಲೇವಾರಿಗೂ ತೊಡಕಾಗುತ್ತಿದೆ. ಹಾಗೆಯೇ ಕಸ ವಿಲೇವಾರಿ ಸಮಸ್ಯೆ, ಬಿಡಾಡಿ ಜಾನುವಾರುಗಳಿಂದ ಕಂಗೆಟ್ಟಿರುವ ಮೈಸೂರಿಗರಲ್ಲಿ ಡಕೋಟಾ ವಾಹನಗಳಿಂದ ಆತಂಕ ಇನ್ನಷ್ಟು ಹೆಚ್ಚಿದೆ.

ಕ್ರಮ ಕೈಗೊಳ್ಳದ ಪೊಲೀಸರು: ಮೈಸೂರು ನಗರದ ಹಲವೆಡೆ ಡಕೋಟ ಗಾಡಿಗಳು ಸಾಲು ಸಾಲು ನಿಂತಿದ್ದರೂ ಅವುಗಳನ್ನು ತೆರವುಗೊಳಿಸುವಲ್ಲಿ ಮೈಸೂರು ಪೊಲೀಸರ ವೈಫಲ್ಯತೆ ಎದ್ದು ಕಾಣುತ್ತಿದೆ. ಹಳೇ ಗುಜರಿ ಗಾಡಿಗಳು ವರ್ಷದಿಂದ ನಿಂತಲ್ಲೇ ನಿಂತು ಸಂಪೂರ್ಣ ಹಾಳಾಗಿದ್ದರೂ ಅವುಗಳ ಮಾಲೀಕರ್‍ಯಾರು ಎಂಬ ಮಾಹಿತಿ ಕಲೆಹಾಕಿ ತೆರವುಗೊಳಿಸುವ ಯಾವ ಕ್ರಮವನ್ನು ಕೈಗೊಂಡಿಲ್ಲ. ಖದೀಮರು ಅಡಗಿಕೊಳ್ಳಲು ಪೊಲೀಸರೇ ಸಹಾಯ ಮಾಡುತ್ತಿರುವಂತಿದೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಟೋಯಿಂಗ್ ವಾಹನ ಬರಬೇಕಂತೆ: ಮನೆ ಮುಂದೆ ಸ್ಕಾರ್ಪಿಯೋ ಜೀಪ್ ಕಳೆದೊಂದು ವರ್ಷದಿಂದಲೂ ನಿಂತಿದೆ. ಸಂಪೂರ್ಣ ಹಾಳಾಗಿರುವ ಈ ಹಳೇ ವಾಹನವನ್ನು ತೆರವುಗೊಳಿಸುವಂತೆ ಎನ್.ಆರ್.ಠಾಣೆ ಪೊಲೀಸರಿಗೆ ಖುದ್ದು ಕರೆಮಾಡಿ ಮಾಹಿತಿ ನೀಡಿಯೇ ಎರಡ್ಮೂರು ತಿಂಗಳಾಗಿದೆ. ಕೇಳಿದಾಗಲ್ಲೆಲ್ಲಾ ಟೋಯಿಂಗ್ ವೆಹಿಕಲ್‌ಗೆ ಬರೆದಿದ್ದೇವೆ. ಟೋಯಿಂಗ್ ವೆಹಿಕಲ್ ಬಂದ ಕೂಡಲೇ ತೆರವು ಮಾಡುತ್ತೇವೆ ಎಂದೇಳುತ್ತಿದ್ದಾರೆ ಹೊರತು ಸ್ಥಳಕ್ಕೆ ಬಂದು ನೋಡಿಲ್ಲ. ಒಂದು ಸ್ಥಳದಲ್ಲಿರುವ ಗುಜರಿ ಗಾಡಿಯನ್ನು ತೆರವುಗೊಳಿಸಲು ಎರಡ್ಮೂರು ತಿಂಗಳಾದರೆ ನಗರದಲ್ಲೆಡೆ ರಸ್ತೆ ಬದಿಯಲ್ಲಿ ವರ್ಷದಿಂದ ನಿಲ್ಲಿಸಿರುವ ನೂರಾರು ಗುಜರಿ ಗಾಡಿಗಳನ್ನು ತೆರವು ಮಾಡಲು ಶತಮಾನವೇ ಬೇಕಾಗಬಹುದು ಎಂದು ಪೊಲೀಸರ ಅಸಡ್ಡೆಗೆ ಶಿವಾಜಿ ರಸ್ತೆ ಬಳಿಯಲ್ಲಿರುವ ನಿವಾಸಿಯೊಬ್ಬರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.



ಶ್ರೀ ಮಹಾಲಕ್ಷ್ಮಿ ದೇವಿಗೆ ವಿಶೇಷ ಹೂವಿನ ಅಲಂಕಾರ



ಮೊದಲ ಆಷಾಢ ಶುಕ್ರವಾರದಂದು ಹಂಚ್ಯಾ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮಿಗೆ ವಿಶೇಷವಾಗಿ ಬಗೆ ಬಗೆಯ ಹೂವಿನಿಂದ ಅಲಂಕಾರ ಮಾಡಲಾಗಿತ್ತು. ಪ್ರಧಾನ ಅರ್ಚಕ ಆನಂದ ಮೂರ್ತಿರವರು ದೇವಿಗೆ ಮಹಾ ಮಂಗಳಾರತಿ, ನಂತರ ಭಕ್ತರೆಲ್ಲರಿಗೂ ಪ್ರಸಾದ ವಿನಿಯೋಗ ಮಾಡಿದರು.

'ಬಿಸಿಲ ಬೆರಗು' ಅಭಿನಂದನಾ ಕೃತಿ ಬಿಡುಗಡೆ

ಮೈಸೂರು, ಜು.14(ಎಸ್‌ಬಿಡಿ)– ಯಶಸ್ಸು ಕಂಡಕಂಡಲ್ಲಿ ಬೆಳೆಯುವ ಕಣಗಿಲೆ ಹೂವಲ್ಲ. ಅದು ಸೃಜನಶೀಲ ಪವಿತ್ರ ಹೃದಯದಲ್ಲಿ ಅರಳುವ ಮಂದಾರ ಪುಷ್ಪ ಎಂದು ನಿವೃತ್ತ ಮುಖ್ಯ ಸಂಚಾರ ವ್ಯವಸ್ಥಾಪಕ ಶರಣ ಸಾರಂಗಮಠ ಹಂಪಯ್ಯ ಅಭಿಪ್ರಾಯಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ, ಡಾ.ಯಲ್ಲಪ್ಪ ಕೆಕೆ ಪುರ ಅವರ 'ಬಿಸಿಲ ಬೆರಗು' ಅಭಿನಂದನಾ ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಯಶಸ್ಸು ಸುಲಭವಾಗಿ ಲಭಿಸುವುದಿಲ್ಲ. ಅದು ಎಲ್ಲೆಡೆ ಬೆಳೆಯುವಂತಹ ಕಣಗಿಲೆ ಹೂವಿನಂತಲ್ಲ. ಆತ್ಮವಿಶ್ವಾಸ ಹಾಗೂ ಸೃಜನಶೀಲತೆಯುಳ್ಳ ಪವಿತ್ರ ಹೃದಯಗಳಲ್ಲಿ ಅರಳುವ ಮಂದಾರ ಪುಷ್ಪವಿದ್ದಂತೆ. ಪ್ರತಿಭೆ, ನಿಷ್ಠೆ ಹಾಗೂ ಪ್ರಯತ್ನದಿಂದ ಸಾಧನೆ ಜೊತೆಗೆ ಗೌರವ ಸಲ್ಲುತ್ತದೆ. ಹೀಗೆಯೇ ಯಲ್ಲಪ್ಪ ಕೆಕೆ ಪುರ ಅವರೂ ಸಾಧನೆ ಮೆರೆದಿದ್ದಾರೆ. ಆತ್ಮತೃಪ್ತಿಗಾಗಿ ಮಾತ್ರವಲ್ಲದೆ ಸಮಾಜದ ಕಲ್ಯಾಣಕ್ಕಾಗಿಯೂ ಸಾಹಿತ್ಯ ಕೃಷಿ ಮಾಡಿದ್ದಾರೆ. ಇವರು ಸಾರಿಗೆ ಸಂಸ್ಥೆಯಲ್ಲಿ ಮೂರು ದಶಕಗಳ ಸೇವೆ ಜೊತೆಗೆ 180ಕ್ಕೂ ಹೆಚ್ಚು ಕೃತಿ ರಚಿಸಿರುವುದು ಆಶ್ಚರ್ಯ ಸಂಗತಿ. ವೃತ್ತಿ ಜೀವನದಲ್ಲಿ ಸಾಕಷ್ಟು ನೋವು, ಅವಮಾನ ಅನುಭವಿಸಿದರೂ ಎದೆಗುಂದದೆ ಸಾಹಿತ್ಯದಲ್ಲಿ ಸಾಧಿಸಿದ್ದಾರೆ. ಇವರಿಗೆ ಸಾಕಷ್ಟು ಪ್ರಶಸ್ತಿ ದಕ್ಕಿವೆಯಾದರೂ ಕನ್ನಡ ರಾಜ್ಯೋತ್ಸವ ಹಾಗೂ ನಾಡೋಜ ಪ್ರಶಸ್ತಿ ಸಲ್ಲಬೇಕು ಎಂದು ಆಶಿಸಿದರು.



ಮೈಸೂರು ಜಿಲ್ಲಾ ಸಾಹಿತ್ಯ ಭವನದಲ್ಲಿ ಡಾ.ಯಲ್ಲಪ್ಪ ಕೆಕೆ ಪುರ ಅವರ 'ಬಿಸಿಲ ಬೆರಗು' ಅಭಿನಂದನಾ ಕೃತಿ ಬಿಡುಗಡೆಗೊಂಡಿತು.

ಊರು–ಕೇರಿ ಒಂದಾಗಲಿ: ವಿಶ್ರಾಂತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಕೃತಿ ಕುರಿತು ಮಾತನಾಡಿ, ಅದೆಷ್ಟೋ ಸಾಧು–ಸಂತರು ಸಾರಿದ ಸಂದೇಶವನ್ನು ಸಮಾಜ ಆಲಿಸಿದೆಯೇ ಹೊರತು, ಪಾಲಿಸುತ್ತಿಲ್ಲ. ನಾವೆಲ್ಲಾ ಒಂದೇ ಎಂಬ ಮಹನೀಯರ ಸಂದೇಶವನ್ನು ಓದಿದ್ದೇವೆಯೇ ಹೊರತು ಅನುಷ್ಠಾನಕ್ಕೆ ತಂದಿಲ್ಲ. ನಮ್ಮ ಸಮಾಜವೂ ಬಂಡೆಯಂತಾಗಿದ್ದು, ಬದಲಾಗುತ್ತಿಲ್ಲ. ಈ ನಿಟ್ಟಿನಲ್ಲಿ ಯಲ್ಲಪ್ಪ ಅವರು ಸಮಾಜವನ್ನು ಮೃದುಗೊಳಿಸುವ ಕವಿತೆಗಳ ರಚಿಸಿದ್ದಾರೆ. ಜನವೊಂದೇ, ಮನವೊಂದೇ ಆದರೆ ಯಾಕೋ ಊರು–ಕೇರಿ ಒಂದಾಗಿಲ್ಲ ಎಂದು ಸಮಾಜದ ಗಮನ ಸೆಳೆದಿದ್ದಾರೆ. ಧ್ವನಿ ಇಲ್ಲದ ಸಮಾಜದಿಂದ ಬಂದಿರುವ ಯಲ್ಲಪ್ಪ ಅವರ ಉತ್ಸಾಹ, ಬದ್ಧತೆ ಬರಹಗಾರರಿಗೆ ಮಾದರಿಯಾಗಿದೆ ಎಂದು ಬಣ್ಣಿಸಿದರು.


ಕವಿ, ಮಾಜಿ ಸಂಸದ ಡಾ.ಎಲ್.ಹನುಮಂತಯ್ಯ 'ಬಿಸಿಲ ಬೆರಗು' ಕೃತಿ ಬಿಡುಗಡೆಗೊಳಿಸಿ, ಮಾತನಾಡಿದರು. ಇದೇ ವೇಳೆ ಸಾಹಿತಿ ಡಾ.ಯಲ್ಲಪ್ಪ ಕೆಕೆ ಪುರ ಅವರನ್ನು ಅಭಿನಂದಿಸಲಾಯಿತು. ಕೃತಿ ಸಂಪಾದಕರೂ ಆದ ಕವಿ ಡಾ.ಜಯಪ್ಪ ಹೊನ್ನಾಳಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

'ಇಂಡಿಯನ್ ಮೆಥಡ್ ಇನ್ ಆಕ್ಟಿಂಗ್' ಪರಿಷ್ಕೃತ ಆವೃತ್ತಿ ಬಿಡುಗಡೆ

ಮೈಸೂರು, ಜು.14(ಎಂಕೆ)– ಹಿರಿಯ ರಂಗಕರ್ಮಿ ಪ್ರಸನ್ನ ರಚಿತ 'ಇಂಡಿಯನ್ ಮೆಥಡ್ ಇನ್ ಆಕ್ಟಿಂಗ್' ಪರಿಷ್ಕೃತ ಆವೃತ್ತಿಯ ಪುಸ್ತಕವನ್ನು ಭಾನುವಾರ ಬಿಡುಗಡೆ ಮಾಡಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿನ ಹಾರ್ಡ್ವಿಕ್ ಶಾಲೆ ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ರಂಗಸಂಸ್ಥೆಯಲ್ಲಿ ರಂಗವಲ್ಲಿ ಹಾಗೂ ಮೈಸೂರು ಆರ್ಟ್ ಸೆಂಟರ್ ಸಹಯೋಗದೊಂದಿಗೆ ಆಯೋಜಿಸಿದ್ದ ಕೃತಿ ಬಿಡುಗಡೆ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ ಬೆಟ್ಟಕೋಟೆ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಪ್ರಸನ್ನ ಅವರು ರಂಗಭೂಮಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡವರು. ಆದರೆ, ರಂಗಭೂಮಿಯಲ್ಲೇ ಅವರು ಹೆಚ್ಚು ಗುರ್ತಿಸಿಕೊಂಡಿದ್ದರೂ ಸಾಮಾಜಿಕ ಕಳಕಳಿಯ ಮುನ್ನೋಟ ಇಟ್ಟುಕೊಂಡು ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಬಹುಮಾಧ್ಯಮದ ಮಟ್ಟಕ್ಕೆ ಬೆಳೆಸುವ ನಿಟ್ಟಿನಲ್ಲಿ ಬೆಳೆಸಬೇಕಾಗಿದೆ ಎಂದರು.



ಹಿರಿಯ ರಂಗಕರ್ಮಿ ಪ್ರಸನ್ನ ರಚಿತ 'ಇಂಡಿಯನ್ ಮೆಥಡ್ ಇನ್ ಆಕ್ಟಿಂಗ್' ಪರಿಷ್ಕೃತ ಆವೃತ್ತಿಯ ಪುಸ್ತಕವನ್ನು ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ ಬೆಟ್ಟಕೋಟೆ ಬಿಡುಗಡೆ ಮಾಡಿದರು. ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ ಉಪಸ್ಥಿತರಿದ್ದರು.

ಇಂದಿನ ದಿನಮಾನಗಳಲ್ಲಿ ಒಂದೆರಡು ನಾಟಕಗಳನ್ನು ಬರೆದು ದೊಡ್ಡ ನಾಟಕಕಾರರೆನ್ನುವುದು, ಒಂದು ನಾಟಕ ನಿರ್ದೇಶನ ಮಾಡಿ ದೊಡ್ಡ ನಿರ್ದೇಶಕ ಎನಿಸಿಕೊಳ್ಳುವುದಕ್ಕೆ ಏನೇನೂ ಕೆಲಸ ಮಾಡಬೇಕೋ ಅದೆಲ್ಲವನ್ನು ಮಾಡುವವರನ್ನು ಹೆಚ್ಚಾಗಿ ಕಾಣುತ್ತಿದ್ದೇವೆ. ರಂಗಭೂಮಿಗೆ ಬದ್ಧತೆಯಿಂದ ದುಡಿಯುವವರು ತೀರಾ ವಿರಳ. ಇವತ್ತು ಬದ್ಧತೆಯ ಕೊರತೆ ಎದ್ದುಕಾಣುತ್ತಿದೆ ಎಂದು ವಿಷಾದಿಸಿದರು.

ಕಲಿಕಾ ರಂಗಭೂಮಿ ಎಂಬುದು ಸಂಪೂರ್ಣವಾಗಿ ಪತನವೇ ಆಗಿದೆ. ಕಲಿಕಾ ರಂಗಭೂಮಿ ಎಂಬುದೇ ಇಲ್ಲ. ಎಲ್ಲವೂ ಆಗಿಂದಾಗಲೇ ಬಂದು ಮರೆಯಾಗುವಂತಹದ್ದೇ ಆಗಿದೆ. ರಂಗಭೂಮಿಯಲ್ಲಿ ಕಲಿತು ತೊಡಗಿಸಿಕೊಳ್ಳಬೇಕು ಎನ್ನುವ ಮಹದಾಸೆ ಸಾಕಷ್ಟು ರಂಗಕರ್ಮಿಗಳಲ್ಲಿ ಇದ್ದರೂ, ವಿಲಾಸಿ ಜೀವನದ ಕಡೆಗೆ ಗಮನ ನೀಡುತ್ತಾ ರಂಗಭೂಮಿಯ ಅಗತ್ಯತೆಯನ್ನು ಕಡೆಗಣಿಸುತ್ತಿರುವಂತಿದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ ಪ್ರಾಯೋಜಕತ್ವದ ರಂಗಭೂಮಿಗೆ ಹೆಚ್ಚಿನ ಆದ್ಯತೆ ನೀಡುತ್ತಿರುವ ಕಾಲದಲ್ಲಿಯೂ ಪ್ರಸನ್ನ ಅವರು, ಸದಾ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದಾರೆ. ರಂಗಭೂಮಿ ಹಾಗೂ ಸಮಾಜದ ಕಳಕಳಿಯಲ್ಲಿ ಒಂದಲ್ಲ ಒಂದು ಯೋಜನೆಗಳನ್ನು ಹಾಕಿಕೊಂಡು ಬರುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> ಕಲೆ ಸಿದ್ಧಿಸಲು ಬೇಕಾದ ತಾಳ್ಮೆ ಈಗಿನ ಕಲಾವಿದರಿಗೆ ಇಲ್ಲವಾಗಿದೆ. ತಾತ್ಕಾಲಿಕ ಯಶಸ್ಸು ಮಾತ್ರವೇ ಮುಖ್ಯವಾಗಿದೆ. ಹೀಗಾದರೆ ಕಲಾವಿದನಲ್ಲಿನ ಕಲೆ ಬೆಳೆಯುವುದಿಲ್ಲ. ಸೃಜನಶೀಲರು ತಮ್ಮ ಮಿತಿಗಳನ್ನು ದಾಟಬೇಕು. ಒಳಗಿರುವ ಕಲೆಯನ್ನು ವಿಸ್ತರಿಸಿಕೊಳ್ಳಬೇಕು. ಆಂಗಿಕ, ವಾಚಿಕ ಸೇರಿದಂತೆ ರಂಗಭೂಮಿಯ ಎಲ್ಲಾ ಕೌಶಲಗಳನ್ನು ಕಲಿಯಬೇಕು.
> - ಓ.ಎಲ್.ನಾಗಭೂಷಣಸ್ವಾಮಿ, ಹಿರಿಯ ವಿಮರ್ಶಕ

ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ ಮಾತನಾಡಿ, ಈಚೆಗೆ ರಂಗಭೂಮಿಯ ಬಗ್ಗೆ ಗಂಭೀರ ಪುಸ್ತಕಗಳು ಕಡಿಮೆಯಾಗುತ್ತಿರುವಾಗ ಪ್ರಸನ್ನ ಅವರ ಪರಿಷ್ಕೃತ ಪುಸ್ತಕವು ಆ ಕೊರತೆಯನ್ನು ನೀಗಿಸಲಿದೆ. ನಟನಿಗೆ ತರಬೇತಿ ಕೊಡುವ ತಂತ್ರಜ್ಞನಿಗೆ ಬೇಕಾದ ಸಾಮಗ್ರಿಯನ್ನು ಕೃತಿಯು ಕೊಡುತ್ತದೆ. ಇದು 52 ಅಧ್ಯಾಯ ಹೊಂದಿದ್ದು, ಥಿಯರಿ ಹಾಗೂ ಪ್ರಾಯೋಗಿಕ ಅಂಶಗಳಿವೆ ಎಂದು ವಿವರಿಸಿದರು.

ಕಾವ್ಯ ಹಾಗೂ ಲೋಕದ ಸತ್ಯ ಬೇರೆಯೇ ಇದೆ ಎಂಬುದು ಭಾರತೀಯ ತತ್ವ ಚಿಂತನೆಯಾಗಿದೆ. ವಾಸ್ತವ ಹಾಗೂ ಸತ್ಯಗಳ ವ್ಯತ್ಯಾಸವು ಕಲಾವಿದರಿಗೆ ಇರಬೇಕು. ಸತ್ಯದ ಕಣ್ಣಿಗೆ ಕಾಣದ ಮಗ್ಗಲನ್ನು ವಾಸ್ತವತೆ ಹೊಂದಿರುತ್ತದೆ. ಸತ್ಯದ ತೋರಿಕೆಗಳಿಗೆ ವಾಸ್ತವವನ್ನು ಓರೆ ಹಚ್ಚಿ ನೋಡುವ ಕೌಶಲ ಸಿದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ರಂಗಕರ್ಮಿ ಪ್ರಸನ್ನ ಮಾತನಾಡಿ, ನಟನೆ ಎಂಬುದು ಪ್ರದರ್ಶನ ಆಧಾರಿತ ಕಲೆಯಲ್ಲ. ಅದಕ್ಕೆ ಕ್ರೀಡೆಯಂತೆ ಅಭ್ಯಾಸ ಮುಖ್ಯ. ನಟನೆಯಲ್ಲಿ ಯಶಸ್ಸು ಗಳಿಸಲು ಕ್ರಿಕೆಟಿಗ ಸಚಿನ್‌ರಂತೆ ಅಭ್ಯಾಸ ಮಾಡಬೇಕು. ಪೂರ್ವಾಭ್ಯಾಸದಿಂದಲೇ ನಟನೆ ಮೈಗೂಡುತ್ತದೆ ಎಂದು ಕಿವಿಮಾತು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಇಂಡಿಯನ್ 2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಹಿಂದೂಸ್ತಾನಿ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಇಂಡಿಯನ್ 2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಸರ್ಫಿರಾ (ಹಿಂ)	4 ಪ್ರದರ್ಶನಗಳು
ಸಂಗಂ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ಜಾಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ತೆ): ಬೆ.9.35ಕ್ಕೆ, ಇಂಡಿಯನ್ 2 (ತ): ಮ.1ಕ್ಕೆ, ಇನ್‌ಸೈಟ್ ಔಟ್ 2 (3ಡಿ)(ಇಂ): ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸರ್ಫಿರಾ (ಹಿಂ): ಬೆ.9.45ಕ್ಕೆ, ಮ.12.50ಕ್ಕೆ, ರಾ.7.20ಕ್ಕೆ, ರಾ.10.20ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಬೆ.9.30ಕ್ಕೆ, ಮ.12.55ಕ್ಕೆ, ಫ್ಲೈ ಮಿ ಟು ದಿ ಮೂನ್ (ಇಂ): ಸಂ.4.20ಕ್ಕೆ, ರಾ.10.25ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.9.25ಕ್ಕೆ, ಮ.3.10ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆ

ಮತ ಎಣಿಕೆಯಲ್ಲಿ ಗೊಂದಲ; ಇಂದು ಮರು ಮತ ಎಣಿಕೆ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಚುನಾವಣೆ ಭಾನುವಾರ ನಡೆದಿದ್ದು, ಮತದಾನದ ನಂತರ ಮತಪೆಟ್ಟಿಗೆಯನ್ನು ಚುನಾವಣಾಧಿಕಾರಿಗಳ ಸಮ್ಮುಖದಲ್ಲಿ ಭದ್ರಗೊಳಿಸುತ್ತಿರುವುದು.

ಮೈಸೂರು, ಜು.14(ಎಂಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2024–26ನೇ ಸಾಲಿನ ಪದಾಧಿಕಾರಿಗಳ ಚುನಾವಣೆ ಭಾನುವಾರ ನಡೆಯಿತು.

ಮೈಸೂರಿನ ತ್ಯಾಗರಾಜ ರಸ್ತೆಯ ಅಕ್ಕನ ಬಳಗ ಶಾಲೆ ಎದುರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಬೆಳಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಬಿರುಸಿನ ಮತದಾನ ನಡೆಯಿತು. 398 ಮತದಾರರ ಪೈಕಿ 392 ಮಂದಿ ಮತ ಚಲಾಯಿಸಿದರೆ, 6 ಮಂದಿ ಗೈರಾದರು. ಇದೇ ಮೊದಲ ಬಾರಿಗೆ ಬಹುತೇಕ ಎಲ್ಲಾ ಹುದ್ದೆಗಳಿಗೂ ಹೆಚ್ಚಿನ ಮಂದಿ ಸ್ಪರ್ಧಿಸಿದ್ದರು. ಸಂಜೆ 4 ಗಂಟೆಯ ನಂತರ ಮೊದಲಿಗೆ ಕಾರ್ಯಕಾರಿ ಸಮಿತಿ ಸದಸ್ಯರ ಮತ ಎಣಿಕೆ ಕಾರ್ಯ ಆರಂಭವಾಯಿತು. ರಾತ್ರಿ 11.30ರ ವೇಳೆಗೆ ಎಣಿಕೆ ಕಾರ್ಯ ಪೂರ್ಣಗೊಂಡ ನಂತರ ಗೊಂದಲ ಸೃಷ್ಟಿಯಾದ ಹಿನ್ನಲೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನದ ಮರು ಮತ ಎಣಿಕೆ ಮಾಡಲು ತೀರ್ಮಾನಿಸಲಾಗಿದ್ದು, ನಾಳೆ(ಸೋಮವಾರ) ಬೆಳಗ್ಗೆ 9 ಗಂಟೆಗೆ ಮೊದಲಿಗೆ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನದ ಮತ ಎಣಿಕೆ ನಡೆದ ನಂತರ, ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ಸ್ಥಾನದ ಮತ ಎಣಿಕೆ ಕಾರ್ಯ ನಡೆಯಲಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	104.90 ಅಡಿ
ಒಳಹರಿವು	5237 ಕ್ಯೂಸೆಕ್
ಹೊರಹರಿವು	2258 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಭಾನುವಾರ	2282.80 ಅಡಿ
ಒಳಹರಿವು	12910 ಕ್ಯೂಸೆಕ್
ಹೊರಹರಿವು	20500 ಕ್ಯೂಸೆಕ್

ನಾಲ್ವಡಿಯವರ ಆಡಳಿತಾವಧಿಯ ಸುವರ್ಣ ಯುಗಕ್ಕೆ ಅಡಿಪಾಯ ಹಾಕಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರ್

ಮಳವಳ್ಳಿ, ಕಪ್ಪಡಿ, ಹೊನ್ನನಾಯಕನಹಳ್ಳಿ ಕ್ಷೇತ್ರಗಳ ಮಠಾಧಿಪತಿ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್



ಮೈಸೂರಿನ ಗೋಕುಲಂನ ಶ್ರೀ ಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀಮನ್ ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವದಲ್ಲಿ ಮುಮ್ಮಡಿಯವರ ಬೃಹತ್ ಫೋಟೋವನ್ನು ಮಳವಳ್ಳಿ, ಕಪ್ಪಡಿ ಮತ್ತು ಹೊನ್ನನಾಯಕನಹಳ್ಳಿ ಕ್ಷೇತ್ರಗಳ ಮಠಾಧಿಪತಿಗಳಾದ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ಅನಾವರಣಗೊಳಿಸಿದರು.

ಮೈಸೂರು,ಜು.14(ಪಿಎಂ)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯ ಆಧುನಿಕ ಮೈಸೂರನ್ನು ಸುವರ್ಣಯುಗವೆಂದೇ ಬಣ್ಣಿಸಲಾಗಿದ್ದು, ಇದಕ್ಕೆ ಅಡಿಪಾಯ ಹಾಕಿದವರು ಮುಮ್ಮಡಿ ಕೃಷ್ಣರಾಜ ಒಡೆಯರ್ ಎಂದು ಮಳವಳ್ಳಿ, ಕಪ್ಪಡಿ ಮತ್ತು ಹೊನ್ನನಾಯಕನಹಳ್ಳಿ ಕ್ಷೇತ್ರಗಳ ಮಠಾಧಿಪತಿಗಳಾದ ಶ್ರೀ ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ಹೇಳಿದರು.

ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಗಾನಸಭಾದ ಆಳ್ವಾರ್ ಕಲಾಭವನದಲ್ಲಿ ಗಾನಸಭಾದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಶ್ರೀಮನ್ ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ 230ನೇ ಜಯಂತ್ಯುತ್ಸವದಲ್ಲಿ ಮುಮ್ಮಡಿಯವರ ಬೃಹತ್ ಫೋಟೋ ಅನಾವರಣಗೊಳಿಸಿ ಅವರು ಮಾತನಾಡಿದರು.

ಮೈಸೂರು ನಮ್ಮ ರಾಜ್ಯದ ಸಾಂಸ್ಕೃತಿಕ ಕೇಂದ್ರವಾಗಿದ್ದು, ಇದಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾರಣೀಭೂತರು. ಅವರು 1794ರ ಜು.14ರಂದು ಜನಿಸಿ, 1799ರ ಜೂ.30ರಂದು ಪಟ್ಟಕ್ಕೆ ಬಂದರು. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್‌ಗೆ ಸೋಲಾಗುತ್ತದೆ. ನಂತರದಲ್ಲಿ ಮೈಸೂರು ರಾಜವಂಶಸ್ಥರಿಗೆ ರಾಜ್ಯಾಡಳಿತ ದಕ್ಕುತ್ತದೆ. 1799ರಲ್ಲಿ ಐದು ವರ್ಷದ ಮುಮ್ಮಡಿಯವರಿಗೆ ಪಟ್ಟ ಕಟ್ಟಲಾಗುತ್ತದೆ. ಅವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಮುಮ್ಮಡಿ ಅವರ ಅಜ್ಜಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಹಾಗೂ ದಿವಾನ್ ಪೂರ್ಣಯ್ಯ ಆಡಳಿತ ನೋಡಿಕೊಳ್ಳುತ್ತಾರೆ. 1810ರಲ್ಲಿ ಮುಮ್ಮಡಿಯವರಿಗೆ 16 ವರ್ಷಗಳು ತುಂಬಿದ ಬಳಿಕ ಅವರು ಪೂರ್ಣ ಪ್ರಮಾಣದಲ್ಲಿ ಆಡಳಿತ ನಡೆಸುವಂತಾಗುತ್ತದೆ ಎಂದರು.

ಮುಮ್ಮಡಿಯವರು ಹಲವಾರು ಕೆರೆ–ಕಟ್ಟೆಗಳು ನಿರ್ಮಿಸುತ್ತಾರೆ. ಲಿಂಗಾಂಬುದ್ಧಿ ಕೆರೆ, ಈಗ ವರುಣ ಕೆರೆಯೆಂದು ಕರೆಯುವ ದೇವಾಂಬುದ್'ದಿ ಕೆರೆ, ಕುಕ್ಕರಹಳ್ಳಿ ಕೆರೆ ಅವರ ಕಾಲದಲ್ಲಿ ನಿರ್ಮಾಣಗೊಂಡವು. ನಮ್ಮ ನಾಡಿನ ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ಕೊಡಬೇಕೆಂದು ಎಲ್ಲಾ ರೀತಿ ವಿದ್ವಾಂಸರು ಮೈಸೂರಿನಲ್ಲಿ ನೆಲೆಸುವ ವಾತಾವರಣ ನಿರ್ಮಿಸಿದರು. ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ಮುಖ್ಯ ರಸ್ತೆಗಳಲ್ಲಿ ಸಾಲುಮರಗಳ ಬೆಳೆಯುವಂತೆ ಮಾಡಿದ್ದರು. ಮೈಸೂರಿಗೆ ಪ್ರವೇಶ ಕಲ್ಪಿಸುವ ಮುಖ್ಯದ್ವಾರಗಳಲ್ಲಿ ಛತ್ರಗಳನ್ನು ನಿರ್ಮಿಸಿ, ಪ್ರವಾಸಿಗರಿಗೆ ವಸತಿ ಹಾಗೂ ಊಟದ ವ್ಯವಸ್ಥೆ ದೊರೆಯುವಂತೆ ಮಾಡಿದ್ದರು ಎಂದು ತಿಳಿಸಿದರು.

ಹಳೆಯ ದಾಖಲೆಯೊಂದನ್ನು ಇತ್ತೀಚೆಗಷ್ಟೇ ನೋಡಿದ್ದು, ಆ ಪ್ರಕಾರ ತ್ಯಾಗರಾಜರು ಸಹ ಜಗನ್ಮೋಹನ ಅರಮನೆಯಲ್ಲಿ ಹಲವು ಕಾರ್ಯಕ್ರಮ ಕೊಟ್ಟಿದ್ದನ್ನು ಕಾಣಬಹುದು. ಅಂತಹ ಪಂಡಿತರು, ಮೇಧಾವಿಗಳು ಮೈಸೂರಿಗೆ ಅಂದು ಭೇಟಿ ನೀಡುವ ವಾತಾವರಣ ಕಲ್ಪಿಸಿದ್ದರು. ಕನ್ನಡ ಭಾಷೆ ಹಾಗೂ ಸಾಹಿತ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಮುಮ್ಮಡಿಯವರ ಕೊಡುಗೆ ಅಪಾರ. ಸುಮಾರು 50ಕ್ಕೂ ಹೆಚ್ಚು ಕೃತಿಗಳನ್ನು ಮುಮ್ಮಡಿ ರಚಿಸಿದ್ದು, ಆ ಪೈಕಿ ಮುಖ್ಯವಾಗಿ 'ಶ್ರೀತತ್ವನಿಧಿ' ಎಲ್ಲರಿಗೂ ಚಿರಪರಿಚಿತವಾದುದು. ಅವರ ಕಾಲದಲ್ಲಿ ದೇವಚಂದ್ರ, ವೆಂಕಟರಮಣ ಶಾಸ್ತ್ರಿ, ಬಸಪ್ಪಶಾಸ್ತ್ರಿ, ಕೆಂಪುನಾರಾಯಣ ಸೇರಿದಂತೆ ಹಲವಾರು ವಿದ್ವಾಂಸರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿದ್ದರು. 1799ರ ಬಳಿಕ ಮೈಸೂರಲ್ಲಿ ಯಾವುದೇ ಯುದ್ಧಗಳು ಆಗಲಿಲ್ಲ. ಬದಲಿಗೆ ಆಡಳಿತದ ಪ್ರಗತಿ ಕಾಣುವಂತಾಯಿತು ಎಂದು ಹೇಳಿದರು.

ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ಮಾತನಾಡಿ, ಇಂದು ಅನಾವರಣಗೊಂಡ ಮುಮ್ಮಡಿಯವರ ಬೃಹತ್ ಫೋಟೋವನ್ನು ಈ ಸಭಾಂಗಣದಲ್ಲಿ ಅಳವಡಿಸಲಾಗುವುದು ಎಂದು ಪ್ರಕಟಿಸಿದರು. ನಂತರ ಆಲ್ ಇಂಡಿಯಾ ರೇಡಿಯೋದ ಎ ಗ್ರೇಡ್ ಕಲಾವಿದೆ ಡಾ.ಬೇಲೂರು ಹೆಚ್.ವಸಂತಲಕ್ಷ್ಮಿ ಅವರು 'ಸೀತಾ ಕಲ್ಯಾಣ' ಕುರಿತು ಹರಿಕಥೆ ನಡೆಸಿಕೊಟ್ಟರು.

ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಣೆ



ಮೈಸೂರು ತಾಲೂಕಿನ ಪರಸಯ್ಯನಹುಂಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಶ್ರೀರಾಂಪುರ ಬಡಾವಣೆಯ ಪ್ರತಿಭೆ ವೇದಿಕೆ ವತಿಯಿಂದ ಶಾಲಾ ಮಕ್ಕಳಿಗೆ ಲೇಖನ ಸಾಮಗ್ರಿಗಳನ್ನು ವಿತರಣೆ ಮಾಡಲಾಯಿತು. ಪ್ರತಿಭೆ ವೇದಿಕೆ ಅಧ್ಯಕ್ಷ ಎಸ್.ರಾಜರತ್ನಂ, ಪ್ರಧಾನ ಕಾರ್ಯದರ್ಶಿ ಕೆ.ಇಂದುಮತಿ, ಗೌರವ ಸಲಹೆಗಾರ ಎಸ್.ರುದ್ರೇಶ್, ನಿರ್ದೇಶಕರಾದ ರೇಣುಕಾ, ಶಾಲೆಯ ಮುಖ್ಯ ಶಿಕ್ಷಕಿ ಜಗದಂಬಾ, ಸಹ ಶಿಕ್ಷಕಿ ಮಮತಾ, ಸಹಾಯಕಿ ಜ್ಯೋತಿ ಉಪಸ್ಥಿತರಿದ್ದರು.

9ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಹರೀಶ್ ಸೈಕಲ್ ಮಾರ್ಟ್ (ಜಯನಗರ 4ನೇ ಮೈನ್, 4ನೇ ಕ್ರಾಸ್, ಮೈಸೂರು) ಮಕ್ಕಳಾದ ಶ್ರೀ ಎಂ. ರಾಜಶೇಖರ್ ಮತ್ತು ಎಂ.ಹರೀಶ್, ಸೊಸೆಯಂದಿರು, ಎಂ ಶಿಲ್ಪ ಮತ್ತು ಭವ್ಯ ಮೊಮ್ಮಕ್ಕಳು, ಆರ್.ಎಸ್ ಶರತ್, ಆರ್.ಎಸ್ ಶ್ರೇಯಸ್, ಎಚ್.ಜಿ.ಯಶಸ್ವಿನಿ, ಎಚ್.ಜಿ.ಯತಿನ್.

ದಿ|| ಜಿ.ಮರಿಯಪ್ಪ

ಸವಿನೆನಪು



ಶ್ರೀಮತಿ ಬೋರಮ್ಮ ಮತ್ತು ಶ್ರೀ ಕುನ್ನಯ್ಯ

3ನೇ ವರ್ಷ 10ನೇ ವರ್ಷ

ದುಃಖತಪ್ತರು: ಕುಟುಂಬವರ್ಗ, ಕೆ.ಜಿ.ಕೊಪ್ಪಲು

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ, ಮೈಸೂರು

ಪ್ರವೇಶ ತೆರೆದಿದೆ

ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)

SSLC / PUC Pass / Fail

ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)

9886654463

ಸಿಂಹದಮರಿ ಸೇವಾ ಟ್ರಸ್ಟ್ (ರಿ.)ನ ಕಾರ್ಯದರ್ಶಿರವರಾದ

ಬಿ.ಎಸ್.ರೂಪೇಶ್‌ರವರಿಗೆ

ಹುಟ್ಟುಹಬ್ಬದ ಶುಭಾಶಯಗಳು



ಶುಭಕೋರುವವರು :

ನಂಜುಂಡಸ್ವಾಮಿ, ಅಧ್ಯಕ್ಷರು

ಸಿಂಹದಮರಿ ಸೇವಾ ಟ್ರಸ್ಟ್ (ರಿ.)

ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

ಇಂದಿನಿಂದ ಭಾರಿ ರಿಯಾಯಿತಿ ಮಾರಾಟ

ಎಲ್ಲಾ 2024ರ ಹೊಸ ಸ್ಟಾಕ್‌ನ ಸಂಗ್ರಹ ಮಿಲ್‌ನ ಬೆಲೆ ಮೈಸೂರಿನಲ್ಲಿ



SINCE 1960 hakoba

ನಿಮ್ಮ ಊಹೆಗೂ ನಿಲುಕದ ಎಂಬ್ರಾಯಿಡರಿ ಉತ್ಪನ್ನಗಳು

ಸ್ಥಳ : ದಿ ಇನ್‌ಸ್ಟ್ಯೂಷನ್ ಆಫ್ ಇಂಜಿನಿಯರ್ಸ್

ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು 570005

ಹಕೊಬಾ ಉತ್ಪನ್ನಗಳು – ಚಿಕಾನ್ ಎಂಬ್ರಾಯಿಡರೀಸ್

- ಒಮ್ಮೆ ಪರೀಕ್ಷಿಸಿ ಎಕ್ಸ್‌ಪೋರ್ಟ್ ಡ್ರೆಸ್ ಮೆಟರಿಯಲ್ಸ್ • ಪಂಜಾಬಿ ಸೂಟ್ ಫ್ಯಾಬ್ರಿಕ್ಸ್
- ಸೀರೆಗಳು • ಆರ್ಗಾಂಡಿ ಸೀರೆ • ವಾಯಿಲ್ ಸೀರೆ • ಟೆರ್ರಿನ್ ಸೀರೆ • ಶಿಫಾನ್ ಸೀರೆ
- ತಸ್ಸಾ ಸೀರೆ • ಸ್ವೀಸ್ ವಾಯಿಲ್ ಸೀರೆ • ರೆಡಿಮೆಡ್ ಪಲಾಜೋ ಪ್ಯಾಂಟ್
- ಕುರ್ತೀಸ್ • ಎಂಬ್ರಾಯಿಡರಿ ಲೆಗ್ಗಿಂಗ್ಸ್ ಮತ್ತು ದುಪ್ಪಟ್ಟಗಳ ಸಂಗ್ರಹ

ಭಾರಿ ರಿಯಾಯಿತಿ 50% ರವರೆಗೆ

Shop online at www.hakoba.in

ಇದೀಗ ಹೊಸ ಸ್ಟಾಕ್‌ನೊಂದಿಗೆ ಮೈಸೂರಿನಲ್ಲಿ ಪ್ರದರ್ಶನ ಮತ್ತು ಮಾರಾಟ

Timing : 10 am to 8 pm Cards Accepted Ph.: 8169209835

ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರ್ ಮಿಡ್‌ಟೌನ್‌ನ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರ್ ಮಿಡ್‌ಟೌನ್‌ನ 2024–25ನೇ ಸಾಲಿನ ಪದಗ್ರಹಣ ಸಮಾರಂಭದಲ್ಲಿ ನೂತನ ಪದಾಧಿಕಾರಿಗಳಿಗೆ ಪಿಡಿಸಿ ಕವಿತಾ ನಿಯತ್ ಅಧಿಕಾರ ವಹಿಸಿಕೊಟ್ಟರು. (ಎಡದಿಂದ) ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರಭಾ ಪ್ರಹ್ಲಾದ್, ಕಲಾ ಸತ್ಯೇಂದ್ರ, ಗೀತಾ ಕೃಷ್ಣ, ಸಂಧ್ಯಾ ಮೋಹನ್, ವೆಬ್ ಸಂಚಾಲಕಿ ವಿಮಲಾ ನಾಗರಾಜ್, ಸಂಪಾದಕಿ ರಮ್ಯಶ್ರೀ ಸುನೀಲ್, ಐಎಸ್‌ಓ ಸಂಧ್ಯಾ ಸುರೇಶ್, ಪಿಡಿಸಿ ಕವಿತಾ ನಿಯತ್, ಅಧ್ಯಕ್ಷೆ ಅಶ್ವಿನಿ ರಾಘವೇಂದ್ರ, ಉಪಾಧ್ಯಕ್ಷೆ ರೇವತಿ ಬಾಳಿಗ, ಐಪಿಪಿ ಸಾಬ ಸುರ್ಯಾನಿ, ಕಾರ್ಯದರ್ಶಿ ಸವಿತಾ ಶ್ರೀನಾಥ್, ಜಂಟಿ ಕಾರ್ಯದರ್ಶಿ ಚೈತ್ರಾ ಮೋಹನ್, ಖಜಾಂಚಿ ಶೀಲಾ ಗೋಪಾಲ್ ಇದ್ದಾರೆ.

ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಗ್ರಾಮದಲ್ಲಿ ವಾಸವಾಗಿರುವ ಲೇಟ್ ವೆಂಕಟೇಶ ಬಿನ್ ಸತೀಶ್ ವಿ. ಮತ್ತು ಯೋಗೇಶ್. ವಿ ರವರಿಗೆ ಸೇರಿದ ಬಿಳಿಕೆರೆ ಗ್ರಾಮದ ಸ್ವತ್ತಿನ ಸಂಖ್ಯೆ 152200200803300836 ರ ಪೂ–ಪ 9.23 ಉ–ದ 11.07 ಮೀಟರ್ ಮನೆಯ ಮೂಲ ದಾಖಲಾತಿ ಪತ್ರಗಳು ಕಳೆದುಹೋಗಿದ್ದು ಸದರಿ ಪತ್ರವು ಯಾರಿಗಾದರು ಸಿಕ್ಕಿದಲ್ಲಿ 7 ದಿನಗಳ ಒಳಗೆ ಕೆಳಕಂಡ ದೂರವಾಣಿಗೆ ಕರೆ ಮಾಡಿ ತಿಳಿಸುವುದು.

ಸಹಿ/– ಎಸ್.ಜೆ. ಮದ್ದುರಾಜ್, ವಕೀಲರು, ನಂ. 1493, 1ನೇ ಮಹಡಿ, ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು–4, ಫೋನ್: 9845536952.

ದಿನಾಂಕ: 14–7–2024

ಸ್ಥಳ: ಮೈಸೂರು

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ – 571218

ದೂರವಾಣಿ ಸಂಖ್ಯೆ: 08274–25332

ಇ–ಮೇಲ್: itstaff_ulb_virajpet@yahoo.com | ವೆಬ್ ಸೈಟ್: virajpettown.mrc.gov.in

ಕ್ರ.ಸಂ.ನಂ.ಪು.ವಿ/ಸ್ವಭಾ.ಮಿ. 15ನೇ ಹ.ಆ/ಟೆ–05/2024–25 ದಿನಾಂಕ: 09–07–2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಗೆ ಸ್ವಚ್ಛ ಭಾರತ್ ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅನುಮೋದಿತ ವಿಸ್ತತ ಯೋಜನಾ ವರದಿಯಂತೆ ಬಿಡುಗಡೆಯಾದ ಅನುದಾನದಡಿ ಯಂತ್ರೋಪಕರಣಗಳನ್ನು ಒದಗಿಸಲು ಹಾಗೂ ವಿರಾಜಪೇಟೆ ಪುರಸಭೆಯ 2021–22 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ, 40 ಹೆಚ್.ಪಿ ಮೋಟಾರ್ ಮತ್ತು ಪಂಪುನ್ನು ಅಳವಡಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ/ ನೋಂದಾಯಿತ ತಯಾರಕರು / ಸರಬರಾಜುದಾರರಿಂದ ಕೆ.ಜಿ–2 ರ ನಿಯಮಗಳಿಗನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ತಯಾರಕರು/ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು, ಭರ್ತಿ ಮಾಡಿದ ಟೆಂಡನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	:	10/07/2024 ರಿಂದ 24/07/2024 ಸಂಜೆ 17.00 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	:	24/07/2024 ಸಂಜೆ 5.00 ಗಂಟೆಯವರೆಗೆ
3. ಟೆಂಡರ್ ತೆರೆಯುವ ದಿನಾಂಕ	:	25/07/2024 ಸಂಜೆ 5.00 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ	:	ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್:-www.virajpettown.mrc.gov.inನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/– (ಶ್ರೀ ವಿನಾಯಕ್ ನರ್ವಡೆ ಭಾ.ಆ.ಸೇ) ಆಡಳಿತಾಧಿಕಾರಿ, ಪುರಸಭೆ, ವಿರಾಜಪೇಟೆ.

ಸಹಿ/– (ಶ್ರೀ ಚಂದ್ರ ಕುಮಾರ್ ಎ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮುಡಾ ಹಗರಣ: ಹೋರಾಟ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಎಂಜಿಪಿ ಸಭೆ ನಿರ್ಧಾರ



ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ಭಾನುವಾರ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಮುಡಾ ಹಗರಣ ಸೇರಿದಂತೆ ಇತರೆ ವಿಷಯಗಳ ಕುರಿತು ಸದಸ್ಯರು ಚರ್ಚಿಸಿದರು.

ಮೈಸೂರು, ಜು.14(ಎಸ್‌ಪಿಎನ್)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣ, ಫುಟ್‌ಪಾತ್ ಒತ್ತುವರಿಯಿಂದ ಪಾದಚಾರಿಗಳಿಗಾಗುತ್ತಿರುವ ತೊಂದರೆ, ಡೆಂಗ್ಯೂ ಹೆಚ್ಚಳ, ಶಾಲಾ–ಕಾಲೇಜುಗಳಲ್ಲಿ ಸ್ವಚ್ಛತೆ ಅರಿವು ಕುರಿತು ಆನ್‌ಲೈನ್, ಆಫ್‌ಲೈನ್ ಸಹಿ ಚಳವಳಿ ಸೇರಿದಂತೆ ವಿವಿಧ ಹೋರಾಟಗಳ ಮೂಲಕ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ಮೈಸೂರು ಗ್ರಾಹಕ ಪರಿಷತ್‌ನ ಭಾನುವಾರ ನಡೆದ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಯಿತು.

ಟಿಎಂವಿ ವರದಿ ಚರ್ಚೆಯಾಗಲಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣ ಕುರಿತು ಎಲ್ಲಾ ರಾಜಕೀಯ ಪಕ್ಷದ ಮುಖಂಡರು, ಪ್ರಾಮಾಣಿಕರಂತೆ ಮಾಧ್ಯಮಗಳಲ್ಲಿ ಪೋಸ್ ಕೊಡುತ್ತಾರೆ. ಒಳಗೊಳಗೆ ಅವರೂ ಹಗರಣದಲ್ಲಿ ಭಾಗಿಯಾಗಿರುತ್ತಾರೆ. ಕಳೆದ 20 ವರ್ಷಗಳ ಹಿಂದೆ ಜಿಲ್ಲಾಧಿಕಾರಿಗಳಾಗಿದ್ದ ಟಿ.ಎಂ.ವಿಜಯಭಾಸ್ಕರ್ ಅವರು ಮುಡಾದಲ್ಲಿ ನಡೆದಿರುವ ಹಗರಣ ಕುರಿತು ಸರ್ಕಾರಕ್ಕೆ ವರದಿ ನೀಡಿದ್ದರು. ಇದರ ಬಗ್ಗೆ ಮೈಸೂರಿನ ಒಬ್ಬ ರಾಜಕಾರಣಿಯೂ ತನಿಖೆಗೆ ಒತ್ತಾಯಿಸುತ್ತಿಲ್ಲ. ನಿಕಟಪೂರ್ವ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮುಡಾದಲ್ಲಿ ನಡೆದಿರುವ ಹಗರಣ ಕುರಿತು ತನಿಖೆ ನಡೆಸುವಂತೆ 16 ಪತ್ರ ಬರೆದಿದ್ದರೂ ಸರ್ಕಾರ ಗಮನ ಹರಿಸದೇ, ಜಾಣಕುರುಡು ಮೆರೆದಿದೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ತೀವ್ರಗೊಂಡಾಗ ಅವರನ್ನು ಬೇರೆಡೆಗೆ ವರ್ಗಾಯಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ಮೈಗ್ರಾಪದ ಬಾಮಿ ವಿ.ಶಣೈ ಸಭೆಗೆ ತಿಳಿಸಿದರು.

ಸಹಿ ಚಳುವಳಿಗೆ ಹಿನ್ನಡೆ: ರಾಜಕಾರಣಿಗಳು, ಅಧಿಕಾರಿಗಳು ನಿರಂತರವಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಈ ವ್ಯವಸ್ಥೆ ಕುರಿತು ಸಾಮಾನ್ಯ ಜನರಲ್ಲಿ ನಿರಾಸಕ್ತಿ ಹೆಚ್ಚಾಗಿರುವುದು ಆನ್‌ಲೈನ್ ಸಹಿ ಚಳವಳಿಯಲ್ಲಿ ವ್ಯಕ್ತವಾಗಿದೆ. ಮೈಗ್ರಾಪ ನಡೆಸಿದ ಆನ್‌ಲೈನ್ ಅಭಿಯಾನದಲ್ಲಿ ಇದನ್ನು ವಿರೋಧಿಸಿ ಸಾವಿರ ಸಂಖ್ಯೆ ಗಡಿದಾಟಿಲ್ಲ ಎಂದು ಬಾಮಿ ವಿ.ಶಣೈ ವಿಷಾದ ವ್ಯಕ್ತಪಡಿಸಿದರು.

ಸಹಿ ಅಭಿಯಾನಕ್ಕೆ ವೇಗ ನೀಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಹೆಸರಿನಲ್ಲಿ ನಡೆದಿರುವ ಹಗರಣದಲ್ಲಿ ರಾಜಕೀಯ ಮುಖಂಡರು ಆರೋಪ–ಪ್ರತ್ಯಾರೋಪದಲ್ಲಿ ತೊಡಗಿದ್ದಾರೆಯೇ ವಿನಃ ಕಾನೂನು ಹೋರಾಟದ ಮೂಲಕ ತಪ್ಪು ಮಾಡಿರುವವರ ವಿರುದ್ಧ ಶಿಕ್ಷೆ ಕೊಡಿಸಲು ಪ್ರಯತ್ನಿಸುತ್ತಿಲ್ಲ. ಹಾಗಾಗಿ ರಾಜಕಾರಣಿಗಳ ಹೊರತಾದ ಮೈಸೂರು ನಾಗರಿಕರು ಒಂದಾಗಿ ಈ ಹಗರಣದ ವಿರುದ್ಧ ಹೋರಾಟ ನಡೆಸಲು ತೀರ್ಮಾನಿಸಬೇಕು. ಮೊದಲ ಹಂತದಲ್ಲಿ ಮುಡಾದಲ್ಲಿ ನಡೆದಿರುವ ಹಗರಣ ಕುರಿತು ಆನ್‌ಲೈನ್ ಚಳವಳಿ ನಡೆಸಲಾಗುತ್ತಿದ್ದು, ಇದಕ್ಕೆ ವೇಗ ನೀಡಬೇಕು ಎಂದು ಸದಸ್ಯರೊಬ್ಬರು ಸಭೆಗೆ ಸಲಹೆ ತಿಳಿಸಿದರು.

ಜನಪ್ರತಿನಿಧಿಗಳ ಸಮಿತಿ ರದ್ದಾಗಲಿ: ಆಯಾಯ ಜಿಲ್ಲೆಗಳಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಜನಪ್ರತಿನಿಧಿಗಳ ಸಮಿತಿ ಇದ್ದು, ಈ ಸಮಿತಿ ಸದಸ್ಯರಿಂದಲೇ ಹೆಚ್ಚು ಭ್ರಷ್ಟಾಚಾರಗಳಾಗುತ್ತಿರುವುದು ಮುಡಾದಲ್ಲಿ ನಡೆದಿರುವ ಪ್ರಕರಣಗಳಿಂದ ಸಾಮಾನ್ಯರಿಗೆ ತಿಳಿಯುತ್ತಿದೆ. ಹಾಗಾಗಿ ಮುಡಾ ಸೇರಿದಂತೆ ಇತರೆ ಜಿಲ್ಲೆಗಳ ಪ್ರಾಧಿಕಾರಗಳಲ್ಲಿ ಇರುವ ಜನಪ್ರತಿನಿಧಿಗಳ ಸಮಿತಿ ರದ್ದಾಗಲಿ ಎಂದು ಮೈಗ್ರಾಪ ಸದಸ್ಯರು ಒಕ್ಕೊರಲ ಅಭಿಪ್ರಾಯ ವ್ಯಕ್ತಪಡಿಸಿ, ಈ ಕುರಿತು ಜನಾಭಿಪ್ರಾಯ ಮೂಡಿಸಬೇಕು ಎಂದರು.

ಸಿಎ ನಿವೇಶನ ಹಂಚಿಕೆಯಲ್ಲೂ ಫ್ರಾಡ್: ಮೈಸೂರು ವಿಜಯನಗರ 1–4ನೇ ಹಂತದವರೆಗಿನ ಬಡಾವಣೆಗಳಲ್ಲಿ ಸಿಎ ನಿವೇಶನ ಹೆಚ್ಚಾಗಿದ್ದು, ಇವು ಉಳ್ಳವ ಪಾಲಾಗಿರುವುದು ಅನೇಕ ಅನುಮಾನಗಳಿಗೆ ಎಡೆಮಾಡಿಕೊಡುತ್ತಿದೆ. ಉದಾಹರಣೆಗೆ ವಿಜಯನಗರ ಒಂದನೇ ಹಂತದಲ್ಲಿ ಬಡ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಸಿಎ ನಿವೇಶನ ಹಂಚಿಕೆಯಾಗಿದೆ. ಆದರೆ, ಈ ಆಡಳಿತ ಮಂಡಳಿ, ಇಂಟರ್‌ನ್ಯಾಷನಲ್ ಶಾಲೆ ತೆರೆಯಲು ಸಬ್ ಲೀಸ್‌ಗೆ ನೀಡಿದೆ. ಇನ್ನು ಇಂತಹ ಅನೇಕ ಘಟನೆ ಗಳನ್ನು ಉದಾಹರಣೆ ನೀಡಬಹುದು ಎಂದು ಪರಿಸರ ಬಳಗದ ಸಂಚಾಲಕ ಕಿರಣ್ ಸಭೆಗೆ ತಿಳಿಸಿದರು.

ಒತ್ತುವರಿ ತೆರವಿಗೆ ಜಾಗೃತ ದಳ: ಮೈಸೂರು ಹೃದಯ ಭಾಗದಲ್ಲಿರುವ ಕೆ.ಆರ್.ವೃತ್ತ, ಗಾಂಧಿಚೌಕ ಸೇರಿದಂತೆ ಇತರೆ ರಸ್ತೆಗಳ ಎರಡು ಬದಿ ಫುಟ್‌ಪಾತ್‌ಗಳು ಒತ್ತುವರಿಯಾಗಿದ್ದು, ಪಾದಚಾರಿಗಳ ಓಡಾಟಕ್ಕೂ ಸಾಧ್ಯವಿಲ್ಲದಂತೆ ಬೀದಿ ಬದಿ ವ್ಯಾಪಾರಿಗಳ ರೂಪದಲ್ಲಿ ಅಂಗಡಿ ಮಾಲೀಕರೇ ಆಕ್ರಮಿಸಿದ್ದಾರೆ. ಇದರ ವಿರುದ್ಧ ಪೊಲೀಸ್ ಇಲಾಖೆ, ಮೈಸೂರು ನಗರಪಾಲಿಕೆ, ಕಾನೂನು ಇಲಾಖೆ, ಜಿಲ್ಲಾಡಳಿತ ಸದಸ್ಯರೊಳಗೊಂಡ ಜಾಗೃತ ದಳ ರಚಿಸಿ, ಫುಟ್‌ಪಾತ್ ಒತ್ತುವರಿ ತಡೆಯುವಂತೆ ಮನವಿ ಮಾಡಿದರೂ ಅಧಿಕಾರಿಗಳು ಈ ವಿಷಯದ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಸದಸ್ಯರು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳಲ್ಲಿ ಸ್ವಚ್ಛತೆ ಕುರಿತು ಜಾಗೃತಿ: ಸ್ವಚ್ಛತೆ, ಪ್ಲಾಸ್ಟಿಕ್ ನಿಷೇಧ ಕುರಿತು ರಾಜ್ಯಾದ್ಯಂತ ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಪಿಯುಸಿ, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಪದವಿ ಕಾಲೇಜುಗಳ ಜಿಲ್ಲಾ ಹಂತದ ಅಧಿಕಾರಿಗಳಿಗೆ ಸರ್ಕಾರ ಸೂಚನೆ ನೀಡಬೇಕೆಂದು ಎಂಬ ಸದಸ್ಯರಿಂದ ಸಲಹೆಗಳು ಬಂದವು.

ಡೆಂಗ್ಯೂ ಕುರಿತು ಜಾಗೃತಿಗೆ ಮನವಿ: ರಾಜ್ಯಾದ್ಯಂತ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದರಿಂದ ಸಾವು–ನೋವು ಹೆಚ್ಚಾಗುತ್ತಿವೆ. ಈ ರೋಗ ತಡೆಗೆ ಆರೋಗ್ಯ ಇಲಾಖೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿಲ್ಲ. ಈ ಕುರಿತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಗಮನ ಸೆಳೆಯುವಂತೆ ಸದಸ್ಯರು ಮನವಿ ಮಾಡಿದರು.

ಮೈಗ್ರಾಪ ಸಭೆಯಲ್ಲಿ ಅರುಣ್‌ಕುಮಾರ್ ಶೆಟ್ಟಿ, ಎಸ್.ವಿ.ಶಂಕರ್, ಕೆ.ವಿ.ಭಾನು ಪ್ರಶಾಂತ್, ಬಿ.ಎಸ್.ಸೋಮಶೇಖರ್, ರವಿಶಂಕರ್, ಎಸ್.ಶೋಭ ಸಾಂಬಶಿವನ್, ಜಿ.ಶ್ರೀಧರ, ನಾರಾಯಣ, ಡಿ.ಸಂಜಯ್, ಕಿರಣ್, ಆರ್.ಆರ್.ಮಠದ್ ಉಪಸ್ಥಿತರಿದ್ದರು.

ಎಂಟನೇ ವರ್ಷದ ಸವಿನೆನಪು



ಜನನ : 08-01-1997

ಆರ್. ಯೋಗೇಶ್ (ಯತಿ)

ನಿಧನ : 15-07-2016

"ನೀನು ಈ ಲೋಕ ತ್ಯಜಿಸಿ ಇಂದಿಗೆ 8 ವರ್ಷ ಕಳೆದರೂ ನಿನ್ನ ನೆನಪು ನಮ್ಮಲ್ಲಿ ಎಂದೆಂದಿಗೂ ಅಮರ, ಪರಮಾತ್ಮನ ಸನ್ನಿಧಿಯಲ್ಲಿ ಸ್ಥಿರವಾಗಿರು"

ದುಃಖತಪ್ತರು

ಅಜ್ಜ : ಶಿವರಾಮು, ಅಜ್ಜಿ : ಪುಟ್ಟಚೆನ್ನಮ್ಮ (ಕೂರ್ಗಳ್ಳಿ), ತಂದೆ: ಸಿ.ರವಿ, ತಾಯಿ: ಜಯಲಕ್ಷ್ಮಿ, ಅಣ್ಣ: ಆರ್.ಪವನ್, ಅತ್ತಿಗೆ : ಎಂ.ಪ್ರಾರ್ಥನಾ, ಚಿಕ್ಕಪ್ಪ : ಸಿ.ಗೋಪಾಲ್ (ಗೋಪಿ), ಚಿಕ್ಕಮ್ಮ : ನೇತ್ರಾವತಿ, ತಮ್ಮಂದಿರು : ಜಿ.ಸಮರ್ಥ್, ಜಿ.ಪರಿಶುದ್ಧ್, ಅತ್ತೆ, ಮಾವಂದಿರು ಮತ್ತು ಕುಟುಂಬವರ್ಗ ಹಾಗೂ ಸ್ನೇಹಿತರು, ಜಯನಗರ, ಮೈಸೂರು